1-30 P.M.

Business of the House

ANNOUNCEMENT

MADAM SPEAKER.—The Business Advisory Committee which met on Thursday the 18th March, 1976 decided that:

The House after adjourning on 27th March, 1976 as scheduled, will sit from 7th April to 15th April, 1976 and again from 10th May to 27th May, 1976.

During the April sittings, taxation Bills will be taken up.

In the May sittings, the Government Bills will be taken up.

PAPERS LAID ON THE TABLE

SECRETARY.—Madam Speaker, I beg to lay on the Table the first list of Un-starred Questions and Answers of Seventh Session.

MADAM SPEAKER.—The list is laid.

BUDGET ESTIMATES FOR 1976-77—DEMANDS FOR GRANTS

Demand Nos. 2, 11, 12, 14, 15, 20, 21, 43, 52 and 53.

(Debate continued)

† ಶ್ರೀ ಅಂದಾನಯ್ಯ (ಕುಣಿಗಲ್).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಸದನದ ಮುಂದೆ ಮಂಡಿಸಿದ ಎಲ್ಲ ಬೇಡಿಕೆಗಳನ್ನೂ ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಒಂದೆರಡು ಸೂಚನೆಗಳನ್ನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಆದಮೇಲೆ ಸಾಮಾನ್ಯ ಆಡಳಿತದಲ್ಲಿ ಬಹಳಮಟ್ಟಿನ ಬದಲಾವಣೆಗಳು ಕಂಡುಬರುತ್ತಿವೆ. ಈ ತುರ್ತುಪರಿಸ್ಥಿತಿ ಘೋಷಣೆ ಆಗುವುದಕ್ಕಿಂತ ಮೊದಲು ನಾವು ಯಾವುದೇ ಆಫೀಸ್‌ಗಳಿಗೆ ಹೋದರೂ ಅಲ್ಲಿ ಬರೀ ಖಾಲಿ ಟೇಬಲ್ ಮತ್ತು ಖಾಲಿ ಕುರ್ಚಿಗಳು ಇರುತ್ತಿದ್ದುವು. ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡಿದಮೇಲೆ ಎಲ್ಲ ಅಧಿಕಾರಿಗಳೂ, ಗುಮಾಸ್ತರುಗಳೂ ಅವರವರ ಕಾರ್ಯದಲ್ಲಿ ನಿರತರಾಗಿರುವುದನ್ನು ನೋಡುತ್ತಿದ್ದೇವೆ. ಆಡಳಿತದಲ್ಲಿ ಹೆಚ್ಚಿನ ಬದಲಾವಣೆಗಳು ಕಂಡುಬರುತ್ತಿವೆ. ಮಾನ್ಯ ಅಧ್ಯಕ್ಷರೆ, ಖಾಲಿ ಜಾಗಗಳನ್ನು ಭರ್ತಿ ಮಾಡುವಾಗ ಸರ್ಕಾರದಲ್ಲಿ ವಿಳಂಬವಾಗುತ್ತಿದೆ. ಉದಾಹರಣೆಗೆ ಹೇಳುವುದಾದರೆ ಮೊನ್ನೆ ಶಾಲಾ ಉಪಾಧ್ಯಾಯರುಗಳನ್ನು ೫೫ ವರ್ಷಗಳಿಗೆ ರಿಟೈರ್ ಮಾಡಿದಾಗ ಅವರ ಜಾಗಗಳಿಗೆ ಬೇರೆಯವರುಗಳನ್ನು ಭರ್ತಿಮಾಡುವಾಗ ತಿಂಗಳುಗಟ್ಟಲೇ ವಿಳಂಬವಾಗಿ ಸ್ಕೂಲುಗಳಲ್ಲಿ ಪಾಠಪ್ರವಚನಗಳು ಸರಿಯಾಗಿ ನಡೆದಿಲ್ಲ. ಅನೇಕ ಜೂನಿಯರ್ ಕಾಲೇಜುಗಳಲ್ಲಿ ಇದರಿಂದಾಗಿ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಈರೀತಿ ವಿಳಂಬವಾಗುತ್ತಿರುವುದರಿಂದ ಇದರ ಬಗ್ಗೆ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡು ಖಾಲಿ ಬಿದ್ದ ಸ್ಥಳಗಳನ್ನು ಭರ್ತಿ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಎಲ್ಲ ಆಫೀಸ್‌ಗಳಲ್ಲಿಯೂ ಕೂಡ ಐ. ಎ. ಎಸ್. ಅಧಿಕಾರಿಗಳನ್ನು ನೇಮಕ ಮಾಡುವ ವ್ಯವಸ್ಥೆಯನ್ನು ಮಾಡಬೇಕು. ಕೇಂದ್ರ ಸರ್ಕಾರದಲ್ಲಿ ಕೂಡ ಈ ರೀತಿ ಬದಲಾವಣೆಯಾಗುತ್ತಿದೆ. ಮುಖ್ಯವಾಗಿ ವಿದ್ಯಾ ಇಲಾಖೆ, ಇಂಜಿನಿಯರಿಂಗ್ ಇಲಾಖೆ, ಮತ್ತು ವೈದ್ಯಕೀಯ ಇಲಾಖೆಗಳಿಗೆ ಹೆಚ್ಚಿನ ಪರಿಣತರಾದ ಅಧಿಕಾರಿಗಳನ್ನು ಇಲಾಖೆಯ ಮುಖ್ಯ ಕಾರ್ಯದರ್ಶಿಯಾಗಿ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಹೆಚ್ಚಿನ ಪರಿಜ್ಞಾನವುಳ್ಳ ವ್ಯಕ್ತಿಗಳಾದರೆ ಆಯಾ ಇಲಾಖೆ

ಯಲ್ಲಿನ ಕುಂದುಕೊರತೆಗಳು ಏನು ಎನ್ನುವುದನ್ನು ಅವರು ತಿಳಿದುಕೊಂಡು ಅದನ್ನು ಪರಿಹರಿಸುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಈ ಮೂರು ಇಲಾಖೆಗಳಲ್ಲಿಯೂ ಐ. ಎ. ಎಸ್. ಅಧಿಕಾರಿಗಳನ್ನು ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲವು ಅಧಿಕಾರಿಗಳು ಸೇವಾ ಅವಧಿಯನ್ನು ವಿಸ್ತರಣೆ ಮಾಡುವಾಗ, ಪುನರ್ ನೇಮಕ ಮಾಡುವಾಗ ಅವರ ಸೇವೆಯ ಬಗ್ಗೆ ಪರಿಶೀಲಿಸಿ ಪುನರ್ ನೇಮಕ ಮಾಡುವುದಾಗಲಿ, ಅಥವಾ ವಿಸ್ತರಣೆ ಮಾಡುವುದಾಗಲಿ ಮಾಡಬೇಕು. ಏಕೆಂದರೆ ಇದರಿಂದ ನಮಗೆ ಅಂದರೆ ರಾಜ್ಯದ ಜನತೆಗೆ ಉಪಯೋಗವಾಗುತ್ತದೆ. ಉದಾಹರಣೆಗೆ ವೈದ್ಯಕೀಯ ಇಲಾಖೆಯಲ್ಲಿ ಒಬ್ಬರು ಪರಿಣತರಿದ್ದಾರೆ ಎಂದರೆ ಅವನ ಸೇವಾ ಅವಧಿ ಮುಗಿದ ಕೂಡಲೇ ಅವನನ್ನು ನಿವೃತ್ತಿ ಮಾಡಿದರೆ ಅವನ ಒಳ್ಳೆಯ ಸೇವೆ ನಮಗೆ ಸಿಕ್ಕುವುದಿಲ್ಲ. ಆದುದರಿಂದ ಅಂಥವರ ಸೇವೆಯನ್ನು ಒಂದೆರಡು ವರ್ಷಗಳವರೆಗೆ ವಿಸ್ತರಣೆ ಮಾಡುವುದು ರಾಜ್ಯದ ಜನತೆಯ ಹಿತ ದೃಷ್ಟಿಯಿಂದ ಒಳ್ಳೆಯದು. ಅದೇ ರೀತಿ ಇಂಜಿನಿಯರಿಂಗ್ ಇಲಾಖೆಯ ಮತ್ತು ಪೋಲೀಸ್ ಇಲಾಖೆಗಳಿಗೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಅವರ ಒಂದು ಸೇವೆ ನಮ್ಮ ರಾಜ್ಯದ ಜನತೆಗೆ ಅತ್ಯಗತ್ಯವಾಗಿ ಬೇಕಾಗಿರುತ್ತದೆ. ಇನ್ನು ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ನ್ನು ಸಬ್ಮಿಟ್ ಮಾಡುವಾಗ ಕೆಲವು ದಕ್ಷ ಅಧಿಕಾರಿಗಳ ಬಗ್ಗೆ ಯಾವುದೋ ಒಂದು ಪರ್ಸನಲ್ ಗ್ರುಡ್ಜ್ ಇಟ್ಟುಕೊಂಡು ಅವರ ಮೇಲಿನ ಸೀನಿಯರ್ ಆಫೀಸರ್‌ಗಳ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ನ್ನು ವ್ಯತಿರಿಕ್ತವಾಗಿ ಬರೆಯುತ್ತಾರೆ. ಇಂಥ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ಗಳಿಂದ ಕೆಲವು ಅಧಿಕಾರಿಗಳು ತಮ್ಮ ಪ್ರೊಮೋಷನ್ ಸಮಯದಲ್ಲಿ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಇಂಥಾದ್ದು ಕೆಲವು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿರಬಹುದು. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಇಂಥ ಕೇಸುಗಳನ್ನು ತಾವೇ ತರಿಸಿಕೊಂಡು ಖುದ್ದಾಗಿ ಪರಿಶೀಲನೆ ಮಾಡಿ ಅಂಥವರಿಗೆ ಸಹಾಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಇಲ್ಲದೇ ಹೋದರೆ ಅವರ ಕೆರಿಯರ್ ಹಾಳಾಗಿಹೋಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಹೇಳುವುದಾದರೆ, ಇವತ್ತು ಈ ಪೋಲೀಸ್ ಇಲಾಖೆಯವರಿಗೆ ಕೊಡುತ್ತಿರುವ ಸಂಬಳ ಬಹಳ ಕಡಿಮೆ ಇದೆ. ಇವತ್ತು ಇವರು ಲಾ ಅಂಡ್ ಆರ್ಡರ್ ಮೇಲೆ ೨೪ ಗಂಟೆಗಳ ಕಾಲವೂ ಕೆಲಸವನ್ನು ಮಾಡಬೇಕಾಗಿದೆ ಆದುದರಿಂದ ಇವರ ಸಂಬಳಗಳನ್ನು ಜಾಸ್ತಿ ಮಾಡುವುದೇ ಅಲ್ಲದೆ ಇನ್ನೂ ಇತರೇ ಸೌಲತ್ತುಗಳನ್ನು ಒದಗಿಸಿಕೊಡಬೇಕು.

ಇನ್ನು ಫೈರ್ ಬ್ರಿಗೇಡ್ ವಿಷಯದಲ್ಲಿ ಹೇಳುವುದಾದರೆ, ಅಕಸ್ಮಾತ್ತಾಗಿ ಬೆಂಕಿ ತಗುಲಿದರೆ ಲಕ್ಷಾಂತರ ರೂಪಾಯಿ ಆಸ್ತಿ ನಾಶವಾಗುತ್ತದೆ. ಆದುದರಿಂದ ಪ್ರತಿಯೊಂದು ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಒಂದೊಂದು ಫೈರ್‌ಬ್ರಿಗೇಡ್ ಇಡಬೇಕೆಂದು ಸೂಚಿಸಬಯಸುತ್ತೇನೆ.

ಇನ್ನು ಮೇಜರ್ ಅಂಡ್ ಮೀಡಿಯಂ ಇರಿಗೇಷನ್ ಬಗ್ಗೆ ಹೇಳುವುದಾದರೆ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆ. ಅಷ್ಟೇ ಅಲ್ಲ ಹಿಂದಿನ ಯಾವ ಸರ್ಕಾರಗಳೂ ಮಾಡದೇ ಇದ್ದಷ್ಟು ಪ್ರಗತಿಯನ್ನು ಮಾಡಿದೆಯೆಂದು ಹೇಳಬಯಸುತ್ತೇನೆ. ಕೋಟ್ಯಾಂತರ ರೂಪಾಯಿಗಳನ್ನು ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗಾಗಿ ಖರ್ಚುಮಾಡುತ್ತಿದೆ. ಇದು ನಿಜವಾಗಿಯೂ ಶ್ಲಾಘನೀಯವಾದುದು. ತುಮಕೂರು ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ರೈತರು ಕ್ಷಾಮಕ್ಕೆ ತುತ್ತಾಗಿ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಇದನ್ನು ನಿವಾರಣೆ ಮಾಡಬೇಕಾದರೆ ಹೇಮಾವತಿ ನೀರನ್ನು ತುಮಕೂರು ಭಾಗಕ್ಕೆ ತಂದರೆ ಅದರಿಂದ ಬಹಳ ಅನುಕೂಲವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಹೆಚ್ಚಿನ ಶ್ರಮವನ್ನು ವಹಿಸುತ್ತಿರುವುದಕ್ಕೆ ನಾವು ಪ್ರಶಂಸೆ ಮಾಡಬೇಕಾಗಿದೆ, ಈ ಕಾರ್ಯವು ಬೇಗನೆ ಮುಗಿಯಬೇಕಾದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಹಣನ್ನೊದಗಿಸಲು ಪ್ರಯತ್ನ ಮಾಡಬೇಕು. ಮತ್ತು ಈ ಯೋಜನೆಯು ಮುಗಿದರೆ ಸುಮಾರು ನಾಲ್ಕೂವರೆ ಲಕ್ಷ ಎಕರೆಯಲ್ಲಿ ಹೆಚ್ಚಿನ ಬೆಳೆ ಬರುತ್ತದೆಂದು ಹೇಳಬಯಸುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಈ ಯೋಜನೆಗೆ ಸಹಾಯ ಮಾಡುತ್ತಿರುವುದಕ್ಕೆ ನಾನು ಆಭಾರಿಯಾಗಿದ್ದೇನೆ.

ಇನ್ನು ಪವರ್ ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಸಣ್ಣ ಸಣ್ಣ ರೈತರು ಬಹಳ ಕಷ್ಟಪಟ್ಟು ಸಾಲ ಮಾಡಿ, ಭಾವಿಗಳನ್ನು ತೆಗೆದುಕೊಂಡು ಐ. ಪಿ. ಸೆಟ್ಟುಗಳನ್ನು ಹಾಕಿಕೊಂಡು ಹೇಗೋ ಕೆಲಸಮಾಡುತ್ತಿದ್ದಾರೆ. ಈಗ ಇದಕ್ಕೆ ಹಾಕಿರುವ ಚಾರ್ಜಸ್ ಬಹಳ ಜಾಸ್ತಿಯಾಗಿದೆ. ಇದನ್ನು ಕಡಿಮೆ ಮಾಡಬೇಕು. ಅದರಲ್ಲೂ ೨ ರಿಂದ ೫ ಎಕರೆ ಜಮೀನು ಇಟ್ಟುಕೊಂಡಿರುವ ಸಣ್ಣ ಸಣ್ಣ ರೈತರಿಗೆ ಛಾರ್ಜಸ್ ಕಡಿಮೆ ಮಾಡಿದರೆ ಅವರಿಗೆ ತಾವು ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಇವತ್ತು ೧೦

ಹೆಚ್. ಪಿ. ಪಂಪ್‌ಸೆಟ್ಟ್ ಇರುವವರು ಒಂದು ಕೆಪ್ಯಾಸಿಟರನ್ನು ತೆಗೆದುಕೊಳ್ಳಬೇಕು ಎಂದರೆ ಅವರಿಗೆ ಇದು ಬಹಳ ದುಬಾರಿಯಾಗುತ್ತದೆ. ನನಗೆ ತಿಳಿದಿರುವ ಪ್ರಕಾರ ಮದ್ರಾಸ್ ಸರ್ಕಾರದವರು ತಾವೇ ಈ ಕೆಪ್ಯಾಸಿಟರ್‌ಗಳನ್ನು ಸರ್ಕಾರದ ವತಿಯಿಂದ ಅಳವಡಿಸಿಕೊಟ್ಟಿದ್ದಾರೆಂದು ಕೇಳಿದ್ದೇನೆ. ಅದೇ ರೀತಿಯಲ್ಲಿಯೇ ನಮ್ಮ ಸರ್ಕಾರದವರೂ ಕೂಡ ಈ ಕೆಪ್ಯಾಸಿಟರ್‌ಗಳನ್ನು ಸರ್ಕಾರದ ವತಿಯಿಂದ ಅಳವಡಿಸಿ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಕಾಳೀನದಿ ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ, ಮಾನ್ಯ ವಿದ್ಯುಚ್ಛಕ್ತಿ ಶಾಖಾ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಹೆಚ್ಚಿನ ಶ್ರಮ ವಹಿಸಿದ್ದಾರೆ, ಅಷ್ಟೇ ಅಲ್ಲದೆ ಕುವೈತ್ ಇತ್ಯಾದಿ ರಾಷ್ಟ್ರಗಳಿಂದ ಕೂಡ ಇದಕ್ಕೆ ಹಣವನ್ನು ಒದಗಿಸುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದಾರೆ. ಇದು ನಿಜವಾಗಿಯೂ ಕೂಡ ಪ್ರಶಂಸನೀಯವಾದುದು. ಈ ದಿಸೆಯಲ್ಲಿ ಮಾನ್ಯ ಮಂತ್ರಿಗಳು ಇನ್ನೂ ಹೆಚ್ಚಿನ ಶ್ರಮವನ್ನು ವಹಿಸುತ್ತಾರೆಂಬ ಭರವಸೆ ನನಗಿದೆ. ನಿನ್ನೆಯ ದಿವಸ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀಮಾನ್ ಕೃಷ್ಣಪ್ಪನವರೂ, ಮಾನ್ಯ ಮಂಜುನಾಥ್‌ರವರೂ ನಮ್ಮ ಸರ್ಕಾರ ಮಾಡಿರುವ ಕೆಲಸಗಳ ಬಗ್ಗೆ ಪ್ರಶಂಸೆ ಮಾಡಿದ್ದಾರೆ. ಸಾಮಾನ್ಯವಾಗಿ ಅವರು ಪ್ರಶಂಸೆಯನ್ನು ಮಾಡಿದರೆಂದರೆ ದೇವರು ಅವರಿಗೆ ಒಳ್ಳೆಯ ಬುದ್ಧಿಯನ್ನು ಕೊಟ್ಟಿದ್ದಾನೆಂದು ತಿಳಿದುಕೊಂಡಿದ್ದೇನೆ. ಆದುದರಿಂದಲೇ ಅವರ ಬಾಯಿಂದ ಅಂಥ ಒಂದು ಒಳ್ಳೆಯ ಮಾತುಗಳು ಬಂದಿರುವುದು. ಮಾನ್ಯ ಹನುಮೇಗೌಡರು ಸಾಮಾನ್ಯವಾಗಿ ಮಾತನಾಡುವಾಗ ಕತ್ತಿ ಬಿದ್ದಹಾಗೆ ಖಂಡಿತವಾಗಿ ಮಾತನಾಡುತ್ತಾರೆ. ಆದರೆ ಅದು ಸರಿಯಲ್ಲ.

ಇಷ್ಟು ಮಾತುಗಳನ್ನಾಡುವುದಕ್ಕೆ ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಘಟ್ಟಿ ಚಂದ್ರಶೇಖರ್ (ಗುಬ್ಬಿ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಬಹಳ ಸಂತೋಷದಿಂದ ಅನುಮೋದಿಸುತ್ತೇನೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನನಗೆ ಅಪಾರವಾದ ಗೌರವ ಇರುತ್ತದೆ. ಮತ್ತು ಅವರು ಇದುವರೆಗೂ ಸಾಧಿಸಿರತಕ್ಕಂಥ ಕಾರ್ಯಗಳಲ್ಲಿ ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕಾಗಿದೆ; ಇವತ್ತು ದೇಶದಲ್ಲಿ ಬಹಳ ಮಹತ್ವವಾದಂಥ ಖಾತೆಗಳೆಂದರೆ ಪೋಲೀಸ್ ಖಾತೆ ಮತ್ತು ಜನರಲ್ ಅಡ್ಮಿನಿಸ್ಟ್ರೇಶನ್ ಖಾತೆಗಳಾಗಿರುತ್ತವೆ. ಈ ಎರಡು ಖಾತೆಗಳಲ್ಲಿಯೂ ಬಹಳ ಪ್ರಾಮಾಣಿಕರಾದ ಮತ್ತು ದಕ್ಷತೆಯಿಂದ ಕೂಡಿದ ಅಧಿಕಾರಿಗಳು ಆಡಳಿತವನ್ನು ನಿರ್ವಹಿಸುತ್ತಿದ್ದಾರೆ. ಇದರ ಬಗ್ಗೆ ಈ ಸಂದರ್ಭದಲ್ಲಿ ನಮ್ಮ ವಿರೋಧಪಕ್ಷದ ನಾಯಕರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಲೇಬೇಕಾಗಿರುತ್ತದೆ. ಕಾರಣವಾದರೂ ಇಷ್ಟೇ ಅವರು ತಡವಾಗಿಯಾದರೂ ಪ್ರಜಾಪ್ರಭುತ್ವದ ಅರಿವು ಆಯಿತಲ್ಲವೆಂದು ಸಂತೋಷಪಡಿಸಬೇಕಾಗಿದೆ. ಈ ಸಲದ ಅಧಿವೇಶನದಲ್ಲಿ ನಮ್ಮ ವಿರೋಧಪಕ್ಷದ ಸದಸ್ಯರು ಬಹಳ ಘನತೆಯಿಂದಲೂ ಮತ್ತು ಗಾಂಭೀರ್ಯದಿಂದಲೂ ಸದನದಲ್ಲಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿರುವುದಕ್ಕೆ ನಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಈ ಒಂದು ಔದಾರ್ಯ ಅವರಿಗೆ ಕಳೆದವರ್ಷ ರಾಜ್ಯಪಾಲರ ಭಾಷಣದಲ್ಲಿ ಇದ್ದಿದ್ದರೆ ಈ ತುರ್ತುಪರಿಸ್ಥಿತಿ ಬರಲು ಕಾರಣವೇ ಇರಲಿಲ್ಲ. ಅವರೆಲ್ಲರೂ ಒಟ್ಟಿಗೆ ರಾಜ್ಯಪಾಲರ ವೇದಿಕೆಯನ್ನು ಹತ್ತಿಬಿಟ್ಟು ಗಲಾಟೆಯನ್ನು ಮಾಡಿದರು. ಒಂದುಬಾರಿ ಅಧ್ಯಕ್ಷರ ವೇದಿಕೆಯನ್ನೇ ಹತ್ತಲೂ ಕೂಡ ಪ್ರಯತ್ನಪಟ್ಟಿದ್ದರು. ಆದರೆ ಈ ವರ್ಷ ಇಷ್ಟೊಂದು ಸೌಜನ್ಯತೆಯಿಂದಿರಲು ಕಾರಣವೇನೆಂದರೆ ಒಂದು ಬಸವಣ್ಣನವರ ವಚನ ಜ್ಞಾಪಕಕ್ಕೆ ಬರುತ್ತದೆ.

"ಕರಿಯಂಜುವುದಂಕುಶಕ್ಕಯ್ಯ
ಗಿರಿಯಂಜುವುದು ಕುಲಿಶಕಯ್ಯ
ತಮಂಧವಂಜುವುದು ಜ್ಯೋತಿಗಯ್ಯಾ
ಕಾನನವಂಜುವುದು ಬೇಗೆಗಯ್ಯಾ
ಪಂಚಮಹಾ ಪಾತಕವಂಜುವುದು
ಕೂಡಲಸಂಗನ ನಾಮಕ್ಕಯ್ಯಾ
ವಿರೋಧ ಪಕ್ಷದವರಂಜುವುದು ತುರ್ತುಪರಿಸ್ಥಿತಿಗಯ್ಯಾ
ಕೂಡಲಸಂಗಮದೇವ

ಎಂದು ಹೇಳಿದಹಾಗೆ 12ನೇ ಶತಮಾನದ ಆ ಕಾಲಕ್ಕೆ ನಾವು ಬರತಕ್ಕಂಥ ಪರಿಸ್ಥಿತಿಗೆ ಬಂದಿರುತ್ತೇವೆಂದು ಹೇಳಿ ತುರ್ತುಪರಿಸ್ಥಿತಿಯನ್ನು ತರಬೇಕೆಂದು ಯೋಚನೆ ಮಾಡಿದ್ದೇವೆ. ಇದು ಇಂದಿರಾಯುಗ, ಇಂದಿರಾಯೆಂದರೆ ನಿಮಗೆ ಏತಕ್ಕೆ ಮೆಣಸಿನಕಾಯಿ ಇಟ್ಟಹಾಗೆ ಆಗುತ್ತದೋ ತಿಳಿಯುತ್ತಿಲ್ಲ. ಇಂದಿರಾಗಾಂಧಿಯವರ ಬಗ್ಗೆ ಎಷ್ಟು ಹೇಳಿದರೂ ನಿಮಗೆ ತಲೆಗೆ ಹಿಡಿಸುತ್ತಿಲ್ಲ ಅವರ ದಿವ್ಯದರ್ಶನವನ್ನು ನಿಮಗೆ ತೋರಿಸುತ್ತೇನೆ. ನೀವೆಲ್ಲರೂ ಕಣ್ಣು ಮುಚ್ಚಿಕೊಂಡು ಕುಳಿತಿರಿ ಪರಮಾತ್ಮ ಏನು ಹೇಳುತ್ತಾನೆ ಎಂದರೆ ' ಪರಿತ್ರಾಣಾಯ ಸಾಧೂನಾಂ......ಸಂಭವಾಮಿ ಯುಗೇ ಯುಗೇ ಎಂದು ಹೇಳಿದಹಾಗೆ ಕಂಚಿ ಕಾಮಾಕ್ಷಿ, ಮದುರೆ ಮೀನಾಕ್ಷಿ, ಕಾಶಿ ವಿಶಾಲಾಕ್ಷಿ ಕೊಲ್ಲೂರು ಮೂಕಾಂಬಿಕೆ, ಮೈಸೂರು ಮಹಿಷಾಸುರ ಮರ್ದಿನಿ ಇವರೆಲ್ಲರೂ ಆಯಾಕಾಲಕ್ಕೆ ಸೃಷ್ಟಿಯಾಗಿ ಧರ್ಮವನ್ನು ರಕ್ಷಣೆ ಮಾಡುವ ಕಾರ್ಯದಲ್ಲಿ ತೊಡಗಿದ ಹಾಗೆ ನಮ್ಮ ಇಂಡಿಯಾ ದೇಶದಲ್ಲಿ ಇಂದಿರಾಗಾಂಧಿಯವರು ಅವತರಿಸಿ ದೇಶದಲ್ಲಿ ಧರ್ಮವನ್ನು ರಕ್ಷಣೆ ಮಾಡುತ್ತಿದ್ದಾರೆಂದರೆ ನಿಮಗೆ ಎಷ್ಟು ಹೇಳಿದರೂ ಅದು ಅರ್ಥವಾಗುತ್ತಿಲ್ಲ. ರಾಮಾಯಣ ಕಾಲದಲ್ಲಿ ರಾವಣನಿಗೂ ಶ್ರೀರಾಮನಿಗೂ ಯುದ್ಧನಡೆದು ರಾವಣನು ಸತ್ತಮೇಲೆ ರಾಕ್ಷಸರು ಕೈಸೆರೆಯಾದಂತ ಕಾಲದಲ್ಲಿ ಹನುಮಂತನು ಹೇಳುತ್ತಾನೆ, ನಿಮ್ಮ ದೊರೆ ರಾವಣನು ಸತ್ತುಹೋದನು ಇನ್ನು ಮೇಲೆ ರಾವಣ ರಾವಣ ಎನ್ನುವುದನ್ನು ಬಿಟ್ಟು ರಾಮ ರಾಮ ಎಂದು ರಾಮನ ಬಜನೆಯನ್ನು ಮಾಡಬೇಕೆಂದು ಹೇಳಿದರೆ ಅವರು ರಾವಣ ರಾವಣ ಎಂದು ಹೇಳುತ್ತಲೇ ಇದ್ದರಂತೆ; ಏತಕ್ಕೆ ಅವರಿಗೆ ಅರೀತಿ ಅಭ್ಯಾಸವಾಗಿರುತ್ತದೆ. ಅರೀತಿ ಅಭ್ಯಾಸಬಲದಿಂದ ಅವರಿಗೆ ಏನು ಮಾಡಿದರೂ ಅವರ ಬಾಯಿಂದ ಹೇಳಿಸುವುದಕ್ಕೆ ಆಗದ್ದರಿಂದ ಅವರಿಗೆ ಎಷ್ಟು ಹೇಳಿದರೂ ಅವರಿಗೆ ತಿಳಿದುಕೊಳ್ಳುವ ಶಕ್ತಿ ಇಲ್ಲವೆಂದು ತಿಳಿದು ಅಲ್ಲಿ ಕಾಣುವುದು ಏನು – ಮರ, ಇಲ್ಲಿ ಕಾಣುವುದು ಏನು – ಮರ ಮರ ಮರ ಮರ ಎಂದು ಹೇಳಿಸಿ ಅವರನ್ನು ಯೋಗ್ಯ ದಾರಿಗೆ ತರಬೇಕಾಯಿತು. ಹಾಗೆ ಈವತ್ತು ನಮ್ಮ ಸರ್ಕಾರ ಬಂದ ನಾಲ್ಕು ವರ್ಷಗಳ ಅವಧಿಯಲ್ಲಿ ತಾವು ಸ್ವಲ್ಪ ತಾಳ್ಮೆಯಿಂದ ನೋಡುವುದಾದರೆ ಕಳೆದ 20 ವರ್ಷಗಳಲ್ಲಿ ದೇಶದಲ್ಲಿ ಏನು ಅಭಿವೃದ್ಧಿಕಾರ್ಯಗಳು ನಡೆಯಿತೋ ಅದಕ್ಕಿಂತಲೂ ಹೆಚ್ಚಾಗಿ ಈ ನಾಲ್ಕು ವರ್ಷದಲ್ಲೇ ನಡೆದಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು ತಾವು ಸ್ವಲ್ಪ ಸಾವಧಾನವಾಗಿ ಕೇಳಬೇಕು, ಈವತ್ತಿನ ದಿವಸ ದೇಶದಲ್ಲಿ ಕೃಷಿಕಾಮಗಾರಿಕೆಲಸಗಳು ನಡೆದಿವೆ. ಎಷ್ಟೋ ಸಹಸ್ರ ಎಕರೆಗಳಷ್ಟು ಬಡಜನರಿಗೆ ಜಮೀನು ಹಂಚಲಾಗಿರುತ್ತದೆ 92 ಸಾವಿರ ಜನರಿಗೆ ಓಲ್ಡ್ ಏಜ್ ಪೆನ್‌ಷನ್ ಕೊಟ್ಟಿರತಕ್ಕಂಥದ್ದು ಇರುತ್ತದೆ. ಇದನ್ನೆಲ್ಲಾ ನಾವು ಒಪ್ಪಿಕೊಳ್ಳಲೇಬೇಕಾಗಿರುತ್ತದೆ. ಇಷ್ಟು ಮಾಡಿದ್ದರೂ ಏನೋ ಒಂದು ರೀತಿಯ ಚಟ ನೀವು ಮಾತನಾಡುವುದು ಇಷ್ಟೇ ಇರುತ್ತದೆ. ನಮ್ಮ ಸರ್ಕಾರವು ಬಂದ ನಾಲ್ಕು ವರ್ಷಗಳ ಅವಧಿಯಲ್ಲಿ ಸಾಧನೆ ಮಾಡಿರುವುದನ್ನು ನೋಡಿ ಜನತೆ ಹೆಮ್ಮೆಪಡುವಂತ ವಿಷಯವಾಗಿದೆ. ಈವತ್ತಿನ ದಿವಸ 100ಕ್ಕೆ 99 ಜನರು ಹೇಳುತ್ತಿದ್ದಾರೆ. ತುರ್ತುಪರಿಸ್ಥಿತಿ ಬಂದುದು ಒಳ್ಳೆಯದಾಯಿತು ಇದು ಮೊದಲೇ ಬಂದಿದ್ದರೆ ಸ್ವಲ್ಪ ಅವಾಂತರ ಕಡಿಮೆಯಾಗುತ್ತಿತ್ತೆಂದು ದೇಶದಲ್ಲಿ ಶಾಂತಿ ನೆಲೆಸುತ್ತಿತ್ತೆಂದು ಹೇಳುತ್ತಿದ್ದಾರೆ. ಯಾವಾಗಲೂ ನಮ್ಮ ವಿಧಾನಸಭೆಯ ಎದುರಿಗೆ ನಡೆಯುತ್ತಿದ್ದ ಯಾವುದಾದರೂ ಒಂದು ಸ್ಟ್ರೈಕ್, ಕಾರ್ಮಿಕರ ಸ್ಟ್ರೈಕ್, ವಿದ್ಯಾರ್ಥಿಗಳ ಸ್ಟ್ರೈಕ್, ಕೊನೆಗೆ ಎನ್.ಜಿ.ಓಗಳ ಸ್ಟ್ರೈಕ್, ಯಾವುದು ಈ ವರ್ಷ ನಡೆದುದು ಕಂಡು ಬರಲಿಲ್ಲ. ತುರ್ತುಪರಿಸ್ಥಿತಿ ಬಂದ ಮೇಲೆ ಅಧಿಕಾರಿಗಳು ಜಾಗ್ರತರಾಗಿ ಅವರ ಕಾರ್ಯಗಳನ್ನು ಅವರು ದಕ್ಷತೆಯಿಂದ ನಿರ್ವಹಿಸುತ್ತಿದ್ದಾರೆ. ಅಧಿಕಾರಿಗಳು ಕಾಲಕ್ಕೆ ಸರಿಯಾಗಿ ಹೋಗುತ್ತಿದ್ದಾರೆ, ಮೊದಲು ಕಚೇರಿಗಳಿಗೆ ಹೋದರೆ ಅಧಿಕಾರಿಗಳು ಕುರ್ಚಿಯಲ್ಲಿ ಕುಳಿತಿರುತ್ತಲೇ ಇರುತ್ತಿರಲಿಲ್ಲ. ತಮ್ಮ ಕೋಟುಗಳನ್ನು ನೇತುಹಾಕಿ ಹೊರಟುಬಿಡುತ್ತಿದ್ದರು. ಈಗ ಅದು ತಪ್ಪಿವೆ. ಈ ತುರ್ತುಪರಿಸ್ಥಿತಿ ಇನ್ನು ಕೆಲವು ವರ್ಷಗಳ ಕಾಲ ಇರಬೇಕು. ಇದ್ದರೆ ದೇಶದಲ್ಲಿ ನಿಜವಾಗಿಯೂ ಪ್ರಜಾಪ್ರಭುತ್ವದಲ್ಲಿ ಜನಗಳಿಗೆ ರಕ್ಷಣೆ ಸಿಕ್ಕತಕ್ಕಂಥ ಅವಕಾಶವಾಗುತ್ತದೆಂದು ನಾನು ಹೇಳಬೇಕಾಗಿದೆ. ಆದರೆ ಆ ಸಂದರ್ಭದಲ್ಲಿ ನಮ್ಮ ಜವಾಬ್ದಾರಿ ಏನು ಎನ್ನುವುದನ್ನು ಅರಿತುಕೊಳ್ಳುವುದು ಅವಶ್ಯವಿರುತ್ತದೆ, ಮೊನ್ನೆದಿವಸ ಮಾನ್ಯ ಮಂಜುನಾಥ್‌ರವರು ಯಾವುದೋ ಒಂದು ಪ್ರಶ್ನೆಯನ್ನು ಹಾಕಿ ಶ್ರೀ ರಾಚಯ್ಯನವರನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಹಣ ದುರುಪಯೋಗವಾಗುತ್ತಿದೆ ಎಂದು ಕೇಳಿದಾಗ ಮಾನ್ಯ ರಾಚಯ್ಯನವರು ದೊಡ್ಡ ದೊಡ್ಡ ಮಂತ್ರಿಗಳು ಲಕ್ಷಾಂತರ ರೂಪಾಯಿಗಳನ್ನು ಲೂಟಿ ಮಾಡುತ್ತಿರುವಾಗ

ಸಣ್ಣ ಸಣ್ಣ ಇಲಾಖೆಯ ಬಗ್ಗೆ ಯೋಜನೆ ಮಾಡುತ್ತೀರಲ್ಲ ಎಂದು ಉತ್ತರ ಕೊಟ್ಟರು, ಈ ರೀತಿಯಾದ ಉತ್ತರ ಅವರಿಂದ ಬರುತ್ತದೆಂದು ನಾನು ನಿರೀಕ್ಷೆ ಮಾಡಿರಲಿಲ್ಲ. ನಾನು ಹೇಳುವುದಾದರೂ ಇಷ್ಟೆ, ದೊಡ್ಡ ದೊಡ್ಡವರು ಲಕ್ಷಾಂತರ ರೂಪಾಯಿಗಳನ್ನು ಹೊಡೆಯುವಂಥ ಸಣ್ಣ ಸಣವರು ಎಷ್ಟೆಷ್ಟು ಹೊಡೆಯಬೇಕು ಎನ್ನುವುದರ ಬಗ್ಗೆ ಮಾನ್ಯ ಅರ್ಥ ಮಂತ್ರಿಗಳು ಸ್ವಲ್ಪ ತಿಳಿಸಿದರೆ ಅನುಕೂಲವಾಗುತ್ತದೆ. ಇನ್ನು ರಸ್ತೆಗಳನ್ನು ಮಾಡುವ ವಿಚಾರದಲ್ಲಿ ನಮ್ಮ ಮಾನ್ಯ ಮಿತ್ರರು ಹೇಳಿದರು ಒಂದು ಕಡೆ 40 ಅಡಿ ಮಾಡಿರುತ್ತೀರಿ ಇನ್ನೊಂದು ಕಡೆ 50ಅಡಿ ಮಾಡುತ್ತೀರಿ ನಮ್ಮ ಕಡೆ ರಸ್ತೆಗಳನ್ನೇ ಮಾಡಿಲ್ಲವೆಂದು ಪ್ರಶ್ನೆಗಳನ್ನು ಹಾಕುತ್ತಲೇ ಇರುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಹೇಳುವುದೇನೆಂದರೆ ಒಂದು ತೀರ್ಮಾನವನ್ನು ಮಾಡಿ ಕಳವಳಕ್ಕೆ ಅವಕಾಶಕೊಡದೇ ಯಾವುದೇ ಸರ್ಕಾರದ ವಿಚಾರವನ್ನು ನಮ್ಮ ಮಂತ್ರಿಗಳು ಹೇಳುವಂಥಾ ಕಾಲದಲ್ಲಿ ಒಂದು ಒಮ್ಮತದ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಮತ್ತು ಈಗ ಎರಡನೆಯದಾಗಿ ಪೋಲೀಸ್ ಇಲಾಖೆಯ ಡಿಮ್ಯಾಂಡ್ ಬಗ್ಗೆ. ಪೋಲೀಸ್ ಇಲಾಖೆ ಬಗ್ಗೆ ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಕಳೆದವರ್ಷ ಪೋಲೀಸ್ ಇಲಾಖೆಯ ಡಿಮ್ಯಾಂಡ್ ಬಗ್ಗೆ ಮಾತನಾಡಿ ಹೊರಗಡೆ ಹೋದಾಗ ಕೆಳಗೆ ಬಿದ್ದು ಕೈಮುರಿದು ಕೊಂಡಿದ್ದೆ. ಈಗ ಏನಾಗುತ್ತದೆಯೋ ಗೊತ್ತಿಲ್ಲ. ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ಪೋಲೀಸ್ ಇಲಾಖೆಯ ಹೋಮ್ ಸೆಕ್ರೆಟರಿಗಳು, ಐ ಜಿ ಪಿ ಯವರು ಮತ್ತು ಕಮಿಷನರ್ಸ್ ಡಿ ಐ ಜಿ ಎಸ್ ಪಿ ಗಳಲ್ಲಿ ಒಳ್ಳೆಯ ಅಧಿಕಾರಿಗಳಿದ್ದಾರೆ. ಅವರುಗಳ ಕೆಳಗಿನ ದರ್ಜೆಯಲ್ಲಿ ಇವತ್ತು ಭ್ರಷ್ಟಾಚಾರದ ಅಪಾದನೆಗಳು ಕಂಡು ಬಂದು ಅವರು ಸ್ವೇಚ್ಛಾವರ್ತನೆಯಿಂದ ನಡೆದುಕೊಳ್ಳುತ್ತಿರುವುದು ಕಂಡುಬರುತ್ತಿದೆ. ಇವತ್ತಿನ ದಿವಸ ಮತ್ತೊಂದು ಕಾರಣ ಎಂದರೆ ಇತ್ತೀಚೆಗಿನ ಬಸ್ ನ್ಯಾಷನಲೈಸ್ ಮಾಡಿದಮೇಲೆ ಅದು ಎಲ್ಲರಿಗಿಂತಲೂ ಭಾರಿಪೆಟ್ಟು ಬಿದ್ದಿರುವುದು ಎಂದರೆ ಈ ಪೋಲೀಸ್ ಇಲಾಖೆಗೆ. ಬೆಂಗಳೂರು ಶಿವಮೊಗ್ಗ, ಬೆಂಗಳೂರು ಬೆಳಗಾಂಗೆ ಲಕ್ಸುರಿ ಬಸ್ಸುಗಳನ್ನು ತೆಗೆದುಕೊಂಡು ಹೋಗಿ ಒಂದೊಂದು ಲೈನ್‌ನಲ್ಲಿ 3 ಸಾವಿರ ರೂಪಾಯಿಗಳನ್ನು ಹಂಚಿ ಬರುತ್ತಿದ್ದರು. ಅದು ಈಗ ತಪ್ಪಿಹೋಗಿದೆ. ಅವರ ಬದಲು ಈಗ ಕೆಲವು ಇಲಾಖೆಗಳವರು ಹಂಚಿಕೊಂಡಿದ್ದಾರೆಯೋ ಏನೋ ಅದರ ಬಗ್ಗೆ ನನಗೆ ಗೊತ್ತಿಲ್ಲ. ಆದುದರಿಂದ ಇವತ್ತಿನದಿವಸ ಕೆಳದರ್ಜೆಯ ಅಧಿಕಾರಿಗಳು ಪೋಲೀಸ್ ಇಲಾಖೆಯಲ್ಲಿ ಏನಿದ್ದಾರೆ ಅವರ ಬಗ್ಗೆ ಯಾವ ಒಂದು ಕಾನೂನು ಇಟ್ಟು, ವಿಜಿಲೆನ್ಸ್ ಇಟ್ಟು ಮಾಡಿದರೂ ಕೂಡ ಆ ಇಲಾಖೆಯಲ್ಲಿರತಕ್ಕಂಥ ಲಂಚವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಕಾಣುತ್ತದೆ. ಅವರಿಗೆ ಒಂದು ಮಾನವೀಯತೆಯ ದೃಷ್ಟಿಯನ್ನು ಧರ್ಮದ ಬುದ್ಧಿಯನ್ನು ಕಲಿಸಿ ಅವರಿಂದ ಅವರು ಕೆಲಸ ಮಾಡುವಂತೆ ಮಾಡಿದರೆ ಈ ಇಲಾಖೆಯಲ್ಲಿರುವವರು, ಸರಿಹೋಗಬಹುದು. ಪೋಲೀಸ್ ಇಲಾಖೆಯಲ್ಲಿ ಪೋಲೀಸ್ ಕಾನ್‌ಸ್ಟೇಬಲ್‌ಗಳು ಬಹಳ ಕಡಿಮೆ ಇದ್ದಾರೆ. ಈ ರಾಜ್ಯ ಹುಟ್ಟಿದಾಗ ಬಹುಶಃ ಎಷ್ಟು ಕಾನ್‌ಸ್ಟೇಬಲ್‌ಗಳು ಇದ್ದರೋ ಅಷ್ಟೇ ಜನ ಕಾನ್‌ಸ್ಟೇಬಲ್‌ಗಳು ಈಗ ಇದ್ದಾರೆ. ಕೆಲವು ಪೋಲೀಸ್ ಸ್ಟೇಷನ್‌ಗಳಿಗೆ ಫೋನ್ ಮಾಡಿದರೆ ಅಲ್ಲಿ ಒಬ್ಬ ಸೆಂಟ್ರಿ ಮಾತ್ರ ಇರುತ್ತಾನೆ, ಪೋಲೀಸ್ ಕಾನ್‌ಸ್ಟೇಬಲ್‌ಗಳು ರೈಲ್ವೆ ಲೈನ್ ಕಾಯುವಂತ ಪರಿಸ್ಥಿತಿ ಇರುವುದರಿಂದ ಪೋಲೀಸ್ ಕಾನ್‌ಸ್ಟೇಬಲ್‌ಗಳು ಇಲ್ಲಿ ಇರುವುದಿಲ್ಲ, ಆದುದರಿಂದಪೋಲೀಸ್ ಕಾನ್‌ಸ್ಟೇಬಲ್ ಫೋರ್ಸನ್ನು ಜಾಸ್ತಿ ಮಾಡಬೇಕಾದ ಅವಶ್ಯಕತೆ ಇದೆ. ಇನ್ನು ಜನರಲ್ ಅಡ್ಮಿನಿಷ್ಟ್ರೇಷನ್ ಬಗ್ಗೆ ಮಾತನಾಡುವುದಾದರೆ ಇವತ್ತು ಐ.ಎ.ಎಸ್. ಅಧಿಕಾರಿಗಳು ಬುದ್ಧಿವಂತರೂ, ವಿದ್ಯಾವಂತರೂ, ಇದ್ದಾರೆ. ಆದರೆ ಇದು ಆಲ್ ಇಂಡಿಯಾ ಸೆಲೆಕ್ಷನ್‌ನಲ್ಲಿ ಇದೆ. ಅದರ ಪ್ರಕಾರ ನೋಡುವುದಾದರೆ ಇರತಕ್ಕಂಥ ಐ.ಎ.ಎಸ್ ಅಧಿಕಾರಿಗಳ ನಿವೃತ್ತಿ ಅದನಂತರ ಕರ್ನಾಟಕದಲ್ಲಿ ಒಬ್ಬ ಐ.ಎ.ಎಸ್ ಆಫೀಸರು ಇರುವ ರೀತಿಯಲ್ಲಿ ಕಾಣುತ್ತಾ ಇಲ್ಲ. ಸಾಮಾನ್ಯವಾಗಿ ಇದರಲ್ಲಿ ಮದ್ರಾಸ್ ಕಡೆಯ ಐಯ್ಯರ್ಸ್, ಬೆಂಗಾಲಿಗಳು, ಪಂಜಾಬಿಗಳು ಅವರು ಮಾತ್ರ ಐ.ಎ.ಎಸ್. ಪಾಸ್ ಮಾಡಿ ಈ ಒಂದು ಐ.ಎ.ಎಸ್. ಅಧಿಕಾರಿಯಾಗಿ ಬರುವುದಕ್ಕೆ ಸಾಧ್ಯವಿದೆಯೇ ಹೊರತು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಜನ ಅವರ ಮೇಲೆ ಕಾಂಪಿಟೀಷನ್ ಮಾಡಿ ಐ.ಎ.ಎಸ್. ಅಧಿಕಾರಿಯಾಗಿ ಬರುವುದಕ್ಕೆ ಸಾಧ್ಯವಿಲ್ಲವಾಗಿದೆ. ಇದರ ಬಗ್ಗೆ ಮುಖ್ಯಮಂತ್ರಿಯವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಕೇಂದ್ರ ಸರ್ಕಾರದವರೊಡನೆ ಅವರು ಇದರ ಬಗ್ಗೆ ಚರ್ಚೆ ಮಾಡಿ ಹೋರಾಡಿ ಆಯಾಯ ರಾಜ್ಯಗಳಿಗೆ ಐ.ಎ.ಎಸ್. ಅಧಿಕಾರಿ

ಗಳನ್ನು ಆ ರಾಜ್ಯದವರನ್ನೇ ಸೆಲೆಕ್ಷನ್ ಮಾಡುವ ರೀತಿಯಲ್ಲಿ ಏರ್ಪಾಡು ಮಾಡಬೇಕಾದ್ದು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಅವಶ್ಯಕವಾಗಿದೆ. ಹೊಸದಾಗಿ ಬಂದಿರತಕ್ಕಂಥ ಐ.ಎ.ಎಸ್. ಅಧಿಕಾರಿಗಳನ್ನು ಅಸಿಸ್ಟೆಂಟ್ ಕಮಿಷನರ್ಸ್ ರೀತಿಯಲ್ಲಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ಗೆ ಹಾಕುತ್ತಿದ್ದಾರೆ. ಬಹಳ ಜನಕ್ಕೆ ನಮ್ಮ ಭಾಷೆ ಅರ್ಥವಾಗುವುದಿಲ್ಲ; ಐ.ಎ.ಎಸ್. ಅಧಿಕಾರಿಗಳು ಹೊಸದಾಗಿ ಬಂದಿರುವವರು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಚೇರ್‌ಮನ್ ಆಗಿದ್ದಾರೆ. ನಮ್ಮ ರೈತರು ಒಂದೊಂದು ಸಾರಿ ಕನ್ನಡದಲ್ಲಿ ಹೇಳತಕ್ಕಂಥ ಮಾತುಗಳು ನಮಗೆ ಅರ್ಥವಾಗುವುದಿಲ್ಲ ಅಂತಹವರಲ್ಲಿ ಕನ್ನಡ ಬರದೇ ಇರತಕ್ಕಂಥ ಅಧಿಕಾರಿಗಳು ಯಾವ ರೀತಿಯಲ್ಲಿ ತೀರ್ಮಾನವನ್ನು ಕೊಡುತ್ತಾರೆ? ಇದರಿಂದ ಸಾಮಾನ್ಯ ಜನಕ್ಕೆ ತೊಂದರೆಯಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಅಂತಹವರನ್ನು ಸೆಕ್ರೆಟರಿಯಟ್‌ನಲ್ಲಿ ಹತ್ತಾರು ವರ್ಷಗಳ ಕಾಲ ಇಟ್ಟುಕೊಂಡು ಅವರಿಗೆ ಕನ್ನಡ ಭಾಷೆಯ ಬಗ್ಗೆ ತಿಳಿವಳಿಕೆ ಬಂದ ನಂತರ ಅವರನ್ನು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ಗಳಿಗೆ ಹಾಕುವುದು ಒಳ್ಳೆಯದು ಎಂದು ಹೇಳುತ್ತೇನೆ. ಅದರಲ್ಲೂ ಈಗ ಬಂದಿರತಕ್ಕ ಐ.ಎ.ಎಸ್. ಅಸಿಸ್ಟೆಂಟ್ ಕಮಿಷನರ್ಸ್ ಅವರನ್ನು ನೋಡಿದರೆ ಅಸಿಸ್ಟೆಂಟ್ ಕಮಿಷನರ್ಸ್ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಅವರು ಬಹಳ ಚಿಕ್ಕ ವಯಸ್ಸಿನವರು ಇರುತ್ತಾರೆ. ಅವರು ಈ ಒಂದು ಸ್ಥಾನದಲ್ಲಿ ಇರಬೇಕಾದರೆ, ಆ ಸ್ಥಾನದ ಗೌರವ ಘನತೆಯನ್ನು ಕಮಾಂಡ್ ಮಾಡಬೇಕಾದರೆ, ಅಧ್ಯಕ್ಷರು ಒಂದು ವೇಳೆ ಕೋಪಬಂದು ಎದ್ದು ನಿಂತುಬಿಟ್ಟರೆ ಎಲ್ಲರೂ ಸುಮ್ಮನೆ ಕುಳಿತುಕೊಳ್ಳುತ್ತಾರೆ ಏಕೆಂದರೆ ಅವರ ದೇಹಧಾರ್ಢ್ಯ ಆ ರೀತಿ ಇದೆ. ನಮ್ಮ ಮುಖ್ಯಮಂತ್ರಿಯವರು ಅವರೂ ಅಷ್ಟೆ ಅಜಾನುಬಾಹುಗಳು. ಅವರು ವಿರೋಧಪಕ್ಷದವರಿಗೆ ''ಗೊತ್ತಿದೆ ಕುಳಿತುಕೊಳ್ಳಿ ಸ್ವಾಮಿ'' ಎಂದರೆ ತಿರುಗಿ ಯಾರು ಎದ್ದೇಳುವುದಿಲ್ಲ. ಹೀಗಿರುವಾಗ ಐ.ಎ.ಎಸ್ ಅಧಿಕಾರಿಗಳೂ ಕೂಡ ಆ ಒಂದು ರೀತಿಯಲ್ಲಿ ನೋಡಿದವರಿಗೆ ಅವರ ಬಗ್ಗೆ ಗೌರವ ಘನತೆ ಹುಟ್ಟುವ ರೀತಿಯಲ್ಲಿ ಇದ್ದರೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ ಮತ್ತು ಭ್ರಷ್ಟಾಚಾರದ ಬಗ್ಗೆ ನಾವೆಲ್ಲರೂ ಇವತ್ತು ಮಾತನಾಡುತ್ತೇವೆ. ಎಲ್ಲರೂ ಭ್ರಷ್ಟಾಚಾರಿಗಳು ಎಂದು ನಾನು ಹೇಳುವುದಿಲ್ಲ. ಭ್ರಷ್ಟಾಚಾರದ ಬಗ್ಗೆ ಯಾರು, ಏನು ಎನ್ನುವುದೇ ಒಂದು ಕತೆಯಾಗುತ್ತದೆ. ಸಂತೆಯಲ್ಲಿ ಕಳ್ಳ ಕಳ್ಳ ಎಂದು ಎಲ್ಲರೂ ಕೂಗಿದರೆ ಯಾರನ್ನು ಹಿಡಿಯುವುದಕ್ಕೆ ಆಗುತ್ತದೆ? ಈ ಪ್ರಕಾರ ಭ್ರಷ್ಟಾಚಾರದಲ್ಲಿ ಎಲ್ಲರ ಜವಾಬ್ದಾರಿಯೂ ಇದೆ. ಇವತ್ತು ಸಾಮಾನ್ಯವಾಗಿ ನಮ್ಮ ಜವಾಬ್ದಾರಿಯೂ ಇದೆ. ಈ ಶಾಸನ ಸಭೆಯಲ್ಲಿ ಇರತಕ್ಕಂಥ 215 ಜನ ಶಾಸನ ಸದಸ್ಯರೂ ಕೂಡ ಭ್ರಷ್ಟಾಚಾರದ ಬಗ್ಗೆ ಯೋಚನೆ ಮಾಡಿ ನ್ಯಾಯವಾಗಿ ನಿರ್ದಾಕ್ಷಿಣ್ಯವಾಗಿ ವ್ಯವಹಾರಗಳನ್ನು ನೋಡುವುದಾದರೆ ಸಾಮಾನ್ಯವಾಗಿ ಈ ದೇಶದಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಭ್ರಷ್ಟಾಚಾರ ಇವತ್ತು ದೇಶಾದ್ಯಂತ ಇರತಕ್ಕಂಥ ವಿಚಾರವಾಗಿದೆ. ಈಗ ಸುಮಾರು ಒಂದು ತಿಂಗಳ ಹಿಂದೆ ಪತ್ರಿಕೆಯಲ್ಲಿ ಬಂದಿದೆ, ಯಾರೋ ಒಬ್ಬ ಐ.ಎ.ಎಸ್ ಆಫೀಸರನ್ನು ಶೋಧನೆ ಮಾಡಿದರು, 25 ಲಕ್ಷ ರೂಪಾಯಿಗಳನ್ನು ಹಿಡಿದರು ಎಂದು ಬಂದಿದೆ. ಇದರಿಂದ ಜನತೆ ಬಹಳ ಸಂತೋಷಪಟ್ಟಿದ್ದಾರೆ. ಮಾನ್ಯ ದೇವರಾಜ ಅರಸ್ ಅವರು ಯಾರನ್ನೂ ಬಿಡುವುದಿಲ್ಲ. ಎಷ್ಟೆಷ್ಟು ಜನ ದೊಡ್ಡ ದೊಡ್ಡವರನ್ನೂ ಹಿಡಿಯುತ್ತಾರೆ ಎಂಬ ಆಶಾಭಾವನೆ ಇದೆ. ಇದು ಇತ್ತೀಚೆಗೆ ದೊಡ್ಡ ಮೋಡ ಬಂದು ಗುಡುಗಿ ಹೋದಂತೆ ಕಾಣುತ್ತದೆ. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕಾದರೆ ಮೇಲಿನವರಿಂದ ಕೆಳಗಿನವರೆಗೆ ಅದನ್ನು ಹೋಗಲಾಡಿಸಬೇಕಾಗುತ್ತದೆ. ಮೇಲಿನ ಮೆಟ್ಟಿಲಿನಲ್ಲಿ ಕಸ ಗುಡಿಸುವುದನ್ನು ಬಿಟ್ಟು ಮೇಲೆ ದೂಳು ಇದ್ದೇ ಇರುತ್ತದೆಂದು ಹೇಳಿ ಕೆಳಗಿನ ಮೆಟ್ಟಿಲಿನ ಕಸವನ್ನು ಗುಡಿಸಿದರೆ ಮೇಲಿನ ಮೆಟ್ಟಿಲಿನ ಕಸ ಇದ್ದೇ ಇರುತ್ತದೆ. ಆ ರೀತಿಯಲ್ಲಿ ಮೇಲಿನವರನ್ನು ಬಿಟ್ಟುಬಿಟ್ಟರೆ ದೊಡ್ಡ ದೊಡ್ಡವರೇ ಲಕ್ಷಾಂತರ ರೂಪಾಯಿಗಳನ್ನು ಹೊಡೆಯುತ್ತಾರೆ ಅದರಲ್ಲಿ ನಮ್ಮದೇನು ಎಂಬತಕ್ಕಂಥ ಭಾವನೆ ಸಣ್ಣ ಸಣ್ಣ ನೌಕರರಲ್ಲಿ ಬರುತ್ತದೆ. ವಿಧಾನಸೌಧದ ನೌಕರರ ಬಗ್ಗೆಯಾಗಲೀ ಯಾರ ಬಗ್ಗೆಯೇ ಆಗಲೀ ನಾನು ವ್ಯಯಕ್ತಿಕವಾಗಿ ಹೇಳುವುದಿಲ್ಲ. ಬಹಳ ಜನರ ಕೆಲಸ ಏನೆಂದರೆ ಅಧಿಕಾರಿಗಳನ್ನು ವರ್ಗ ಮಾಡಿಸುವುದೇ ಅವರ ಮುಖ್ಯ ಕೆಲಸವಾಗಿರುತ್ತದೆ. ಇದ್ದರಿಂದ ವಿಧಾನ ಸಭೆಯಲ್ಲಿ ಬಹಳ ಕಮಿಮೆ ಅಟೆಂಡರ್ಸ್ ಇರುವುದು. ಎಲ್ಲಿಯವರೆಗೆ ಅಧಿಕಾರಿಗಳನ್ನು ವರ್ಗ ಮಾಡುವುದನ್ನು ಬಿಡಿಸುತ್ತಾರೋ ಅಲ್ಲಿಯವರೆಗೆ ಭ್ರಷ್ಟಾಚಾರ ತಪ್ಪುವುದಿಲ್ಲ. ನನ್ನ ಹತ್ತಿರ ಬಹಳ ಜನರು ಬಂದಿದ್ದರು. ನಮ್ಮ ತಂದೆ ತಾಯಿಗಳಿಗೆ ವಯಸ್ಸಾಗಿದೆ ನನ್ನನ್ನು ದೂರಕ್ಕೆ ತೆಗೆದುಕೊಂಡು

ಹೋಗಿ ಹಾಕಿಬಿಟ್ಟಿದ್ದಾರೆ. ನನ್ನನ್ನು ಹತ್ತಿರದ ಸ್ಥಳಕ್ಕೆ ಹಾಕಿಸಿಕೊಡಿ ಎಂದು ಕೇಳಿದರು. ಇವತ್ತಿನ ದಿವಸ ಯಾರು ತಾನೇ ತಂದೆತಾಯಿಗಳ ಸೇವೆಯನ್ನು ಮಾಡುತ್ತಾರೆ. ಇನ್ನು ಕೆಲವರು ಬರುತ್ತಾರೆ ನಮ್ಮ ಮನೆಯವರು ಗರ್ಭಿಣಿ. 3 ತಿಂಗಳಾಗಿದೆ ನನ್ನನ್ನು ಶಿವಮೊಗ್ಗಕ್ಕೋ ತೀರ್ಥಹಳ್ಳಿಗೋ ಹಾಕಿಬಿಟ್ಟಿದ್ದಾರೆ ಎಂದು ಹೇಳುತ್ತಾರೆ. ನಾನು ಹೇಳಿದೆ ಈಗ ಹೋಗಿದ್ದರೂ 3 ತಿಂಗಳಾಗಿದೆ ಇನ್ನು 6 ತಿಂಗಳಿಗೆ ನೀವು ಯಾವ ಊರಿನಲ್ಲಿದ್ದರೂ ಹೆರಿಗೆ ಆಗೇ ಆಗುತ್ತದೆ. ಬೇರೆ ಯಾರನ್ನಾದರೂ ಹೋಗಿ ಕೇಳಿ ಎಂದು. ಇನ್ನು ಕೆಲವರು ಸಣ್ಣ ಸಣ್ಣ ನೌಕರರು ಅವರ ಮೇಲಧಿಕಾರಿಗಳ ಮಾತನ್ನೇ ಕೇಳುವುದಿಲ್ಲ. ಯಾರಾದರೂ ಎಂ ಎಲ್.ಎಯನ್ನು ಹಿಡಿದುಕೊಂಡು ನೇರವಾಗಿ ಮಂತ್ರಿಯವರ ಹತ್ತಿರ ವ್ಯವಹಾರವನ್ನು ಇಟ್ಟುಕೊಂಡಿರುತ್ತಾರೆ. ಅವರು ನೇರವಾಗಿ ಇಲ್ಲಿಗೆ ಬಂದು ವರ್ಗ ಮಾಡಿಸಿಕೊಂಡಿರುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಏಜೆಂಟ್‌ಗಳು ಆಗಿದ್ದಾರೆ.

ಶ್ರೀ ಘಟ್ಟಿ ಚಂದ್ರಶೇಖರ್.—ಅವರಿಗೆ ಬಂದು ಹೇಳುವುದು, ಮಾಡಿಸುವುದು, ಮಾಡಿಸಿಕೊಳ್ಳುವುದು ಇದ್ದೇ ಇರುತ್ತದೆ. ಈ ವ್ಯವಹಾರ ಒಂದು ದೊಡ್ಡ ಸ್ವರೂಪದಲ್ಲಿರುತ್ತದೆ. ಇದರ ಬಗ್ಗೆ ನಾವು 215 ಜನ ಶಾಸನಸಭಾಸದಸ್ಯರು ಈ ಒಂದು ವರ್ಗದಲ್ಲಿ ಪ್ರವೇಶ ಮಾಡಿ ಮಾಡದಿದ್ದರೆ ಅದು ಎಲ್ಲಿಯವರೆಗೆ ಹೋಗುತ್ತದೋ ಎಂಬುದರ ಬಗ್ಗೆ ಒಂದು ನಿದರ್ಶನವನ್ನು ಹೇಳುತ್ತೇನೆ. ಇವತ್ತು ಒಬ್ಬ ಸಾಮಾನ್ಯ ನೌಕರ ವಿಧಾನ ಸಭಾ ಸದಸ್ಯರು ಎಂದರೆ ಬಹಳ ಸುಲಭವಾಗಿ ಅವರನ್ನು ಕೈಗೆ ಹಾಕಿಕೊಳ್ಳಬಹುದು ಎಂಬಭಾವನೆ ಅವರಲ್ಲಿ ಇದೆ. ಅದಕ್ಕೊಂದು ನಿದರ್ಶನವನ್ನು ಹೇಳುವುದಾದರೆ ಅವರು ನಮ್ಮಲ್ಲಿಗೆ ಬಂದು ಈ ಕೆಲಸವನ್ನು ಮಾಡಿಸಿಕೊಡಿ ಇದಕ್ಕೆ ಎಷ್ಟು ಖರ್ಚಾದರೂ ಕೊಡುತ್ತೇವೆಂದು ಹೇಳುತ್ತಾರೆ. ಇನ್ನೊಂದು ನಿದರ್ಶನವನ್ನು ಹೇಳುವುದಾದರೆ ತುಮಕೂರಿನಲ್ಲಿ ಒಬ್ಬ ನರ್ಸ್ ಇದ್ದಾರೆ. ಮಾನ್ಯ ಮುಖ್ಯ ಮಂತ್ರಿಯವರಿಗೆ ಒಂದು ಸಾರಿ ಹೇಳಿದ್ದೇನೆ. ಆಕೆಯನ್ನು ಕ್ಯಾತ್ಸಂದ್ರದಲ್ಲಿ ಇದ್ದವಳನ್ನು ಗೂಳೂರಿಗೆ ಹಾಕಿಬಿಟ್ಟಿದ್ದರು ತುಮಕೂರಿನಿಂದ ಕ್ಯಾತಸಂದ್ರಕ್ಕೆ 3 ಮೈಲಿ. ಕ್ಯಾತಸಂದ್ರದಿಂದ ಗೂಳೂರಿಗೆ 3 ಮೈಲಿ ಇದೆ. ಅವಳು ತನ್ನ ಗಂಡನನ್ನು ಕರೆದುಕೊಂಡು ಬಂದಳು. ಹೀಗೆ ಗೂಳೂರಿಗೆ ಹಾಕಿಬಿಟ್ಟಿದ್ದಾರೆ, ಮತ್ತೆ ತುಮಕೂರಿಗೆ ಹಾಕಿಸಿಕೊಡಿ ಎಂದು ಕೇಳಿದಳು, ಈಗಾಗಲೇ ಟ್ರಾನ್ಸ್‌ಫರ್ ಆಗಿದೆ ಮತ್ತೆ ಇಲ್ಲಿಗೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಬರುವುದಿಲ್ಲ. ಯಾರಾದರೂ ಅಧಿಕಾರಿಗಳ ಹತ್ತಿರ ಹೋಗಿ ಟ್ರಾನ್ಸ್‌ಫರ್ ಮಾಡಿಸಿಕೊಳ್ಳಿ ಎಂದು ಹೇಳಿದೆ. ಅವಳು ನೇರವಾಗಿ ಒಳಗೆ ಬಂದು ಟೇಬಲ್ ಮೇಲೆ 100-200 ರೂಪಾಯಿಗಳ ನೋಟನ್ನು ಇಟ್ಟು ಏನಾದರೂ ಮಾಡಿ ಮಾಡಿಸಿ ಎಂದು ಕೇಳಿದಳು. ಆ ನೋಟನ್ನು ಅವಳಿಗೆ ಕೊಟ್ಟು ಇನ್ನೊಂದು ಸಾರಿ ಇಲ್ಲಿಗೆ ಬರಬೇಡಿ ಯಾರ ಹತ್ತಿರವಾದರೂ ಹೋಗಿಮಾಡಿಸಿಕೊಳ್ಳಿ ಎಂದುಹೇಳಿ ಕಳಿಸಿದೆ. ನಾನು 8-10 ದಿವಸಬಿಟ್ಟು ಆಸ್ಪತ್ರೆಗೆ ಹೋದರೆ ಆ ತುಮಕೂರಿನ ಆಸ್ಪತ್ರೆಯಲ್ಲೇ ವರ್ಗ ಮಾಡಿಸಿಕೊಂಡಿದ್ದಾಳೆ. ನನಗೆ ಎದುರಿಗೆ ಸಿಕ್ಕ ದುರುದುರನೇ ನೋಡಿಕೊಂಡು ಹೋದಳು. ಇವತ್ತಿನ ದಿವಸ ಈ ರೀತಿಯ ವ್ಯವಹಾರ ನಡೆಯುತ್ತಾ ಇದೆ,

2-00 P. M.

ಒಬ್ಬ ನರ್ಸ್ ಎಂ.ಎಲ್.ಎ. ಹತ್ತಿರ ಬಂದು 100, 200 ಕೊಟ್ಟು ಟ್ರಾನ್ಸ್‌ಫರ್ ಮಾಡಿಸಿಕೊಂಡುಹೋಗಬೇಕಾದರೆ, ನಾವು ತಿಳಿದುಕೊಳ್ಳಬೇಕು. ನಾವು ಮೊದಲು ಪರಿಶುದ್ಧವಾಗಿ ಸರ್ಕಾರದ ಕೆಲಸವನ್ನು ಮಾಡುವುದಾದರೆ ಈ ಭ್ರಷ್ಟಾಚಾರವನ್ನು ತಡೆಗಟ್ಟುವುದಕ್ಕೆ ಯಾವ ವಿಜಿಲೆನ್ಸ್ ಕಮಿಷನೂ ಬೇಡ, ಯಾವ ಕಮಿಷನೂ ಬೇಡ, ನಾವು ಕಮಿಷನ್ ತೆಗೆದುಕೊಳ್ಳುವುದನ್ನು ಬಿಟ್ಟರೆ ಎಲ್ಲಾ ಸರಿಹೋಗುತ್ತದೆ ಇನ್ನು ಕೆಲವು ಅಧಿಕಾರಿಗಳಿಗೆ ಕೆಲಸ ಮಾಡುವುದಕ್ಕೆ ಉತ್ಸಾಹ ಇಲ್ಲ ಶ್ರೀಮಾನ್ ಚನ್ನಬಸಪ್ಪನವರು ಬಹಳ ಕಟ್ಟುನಿಟ್ಟಾದ ಮನುಷ್ಯರು. ಒಂದು ಸಾರಿಹೇಳಿದಮೇಲೆ ನೆಗೆದು ಬಿದ್ದುಹೋಯಿತು, ಯಾರು ಏನು ಹೇಳಿದರೂ ಮನಸ್ಸನ್ನು ಬದಲಾಯಿಸುವುದಿಲ್ಲ. ಒಂದು ನಿದರ್ಶನ ಕೊಡುತ್ತೇನೆ, ತುಮಕೂರು ಇಂಜಿನಿಯರಿಂಗ್ ಕಾಲೇಜಿಗೆ ಪಿ. ಡಬ್ಲ್ಯು. ಡಿ. ಇಲಾಖೆಯಿಂದಲೇ ಒಬ್ಬರನ್ನು ಪ್ರಿನ್ಸಿಪಾಲರಾಗಿ ಹಾಕಿದ್ದರು. ಅವರು ಪ್ರಿನ್ಸಿಪಾಲರಾಗಿ ಬಂದಮೇಲೆ ಬೇಕಾದಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ. ಅವರು ಬಿಲ್ಡಿಂಗ್

ಸಂಸ್ಥೆಯವರನ್ನು ಕರೆದುಕೊಂಡುಬಂದು ಮೂರು ಲಕ್ಷ ರೂಪಾಯಿ ಅವರಿಂದ ಕಾಲೇಜಿಗೆ ಕೊಡಿಸಿ ದೊಡ್ಡ ಭವನವನ್ನು ಕಟ್ಟಿಸಿದರು. ಆದರೆ ಇವರ ರೊಟೀನ್ ಪ್ರಕಾರ ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಡಿಪಾರ್ಟ್‌ಮೆಂಟಿಗೆ ವಾಪಸ್ ಬರಬೇಕು ಎಂದು ನೋಟೀಸ್ ಕೊಟ್ಟರು. ಅಲ್ಲಿ ಕಮಿಟಿಯವರು ಸೇರಿ ಆ ಪ್ರಿನ್ಸಿಪಾಲರು ನಮಗೆ ಬೇಕು, ಇನ್ನೂ ಕೆಲವು ವರ್ಷಗಳ ಕಾಲ ಅವರನ್ನು ನಮಗೆ ಬಿಟ್ಟುಕೊಡಿ ಎಂದು ಕೇಳಿದಾಗ ಬೇರೆಯವರ ಕೈಯಲ್ಲಿ ನನಗೆ ಹೇಳಿಸುವ ಹಾಗೆ ಆಯಿತಲ್ಲಾ ಎಂದು ಮಾನ್ಯ ಚನ್ನಬಸಪ್ಪನವರಿಗೆ ಕೋಪ ಬಂತು. ಶ್ರೀಮಾನ್ ಚನ್ನಬಸಪ್ಪನವರಿಗೆ ಒಂದೊಂದು ಸಾರಿ ಕೋಪ ಬರುತ್ತದೆ, ಆದರೆ ತಕ್ಷಣ ಇಳಿದುಬಿಡುತ್ತದೆ. ಅದೊಂದು ದೊಡ್ಡ ಗುಣ. ಆಮೇಲೆ ಅವರನ್ನು ಸಸ್ಪೆನ್‌ಷನ್‌ನಲ್ಲಿಟ್ಟಿದ್ದರು, ನಂತರ ಡಿಸ್‌ಮಿಸ್ ಮಾಡಿದರು ಅಂತ ಕಾಣುತ್ತದೆ. ಈ ರೀತಿಯಾಗಿ ಒಬ್ಬ ಅಧಿಕಾರಿಯನ್ನು ಸಂಸ್ಥೆಯವರು ನಮಗೆ ಬೇಕು ಅವರಿಂದ ನಮಗೆ ಒಳ್ಳೆಯದಾಗುತ್ತದೆ ಎಂದು ಕೇಳಿದರೆ ಉದಾರ ಮನಸ್ಸಿನಿಂದ ಬಿಟ್ಟುಕೊಡುವುದು ಸಂಸ್ಥೆಯ ದೃಷ್ಟಿಯಿಂದಲೂ, ಅಧಿಕಾರಿಗಳ ಕೆಲಸದ ದೃಷ್ಟಿಯಿಂದಲೂ ಕ್ಷೇಮವಾಗುತ್ತದೆ. ಇಲ್ಲದಿದ್ದರೆ ಮನಸ್ಸಿಗೆ ಬೇಜಾರಾಗಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವುದು ಕಷ್ಟವಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ನಾನು ಪೋಲೀಸ್ ಇಲಾಖೆಯ ಬಗ್ಗೆ ಮಾತನಾಡುವಾಗ ಮುಖ್ಯಾಧಿಕಾರಿಗಳು ಇರಲಿಲ್ಲ. ಅವರಿಗೆ ಒಂದು ಸೂಚನೆ ಕೊಡುತ್ತೇನೆ. ಇವತ್ತು ಆವರ ಕೆಳದರ್ಜೆ ನೌಕರರಿಗೆ, ಇನ್ಸ್‌ಪೆಕ್ಟರ್ ಸಬ್‌ಇನ್‌ಸ್ಪೆಕ್ಟರ್ ಮತ್ತು ಇತರ ಅಧಿಕಾರಿಗಳಿಗೆ ಮಾನವೀಯತೆಯ ದೃಷ್ಟಿಯಿಂದ ನಡೆದುಕೊಳ್ಳುವುದಾಗಿ ಈ ಒಂದು ಶ್ಲೋಕದ ಪ್ಲೇಕಾರ್ಡ್ ಮಾಡಿಸಿ ಪ್ರತಿಯೊಂದು ಪೋಲೀಸ್ ಸ್ಟೇಷನ್ನಿನಲ್ಲೂ ಹಾಕಿಸಿದರೆ ಒಳ್ಳೆಯದು.

''ಆತ್ಮ ಹೋದರೆ ದೇಹ ಅಗ್ನಿ ಪಾಲು
ಮೇಲೆ ಹೊದಿಸಿದ ಬಟ್ಟೆ ಅಗಸನ ಪಾಲು
ಮಗನು ಹಾಕುವ ಪಿಂಡ ಕಾಗೆಗಳ ಪಾಲು
ತಾನು ಮಾಡಿದ ಪಾಪಪುಣ್ಯವೇ ತನ್ನ ಪಾಲು;''

ಎಂದು ಪೋಲೀಸ್ ಸ್ಟೇಷನ್ನಿನಲ್ಲಿ ಹಾಕಿಸಿ ಅಧಿಕಾರಿಗಳು ಬಂದ ತಕ್ಷಣ ಆ ಪ್ರಮಾಣವಚನವನ್ನು ಓದುವ ರೀತಿಯಲ್ಲಿ ವ್ಯವಸ್ಥೆ ಮಾಡಿ ಎಂದು ಹೇಳಿ; ಅಧ್ಯಕ್ಷರು ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಯನ್ನು ಅವರಿಗೆ ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಎಲ್ಲ ಬೇಡಿಕೆಗಳನ್ನೂ ಸಂಪೂರ್ಣವಾಗಿ ವಿರೋಧಿಸಿ ನಾಲ್ಕು ಮಾತುಗಳನ್ನು ಆಡಲಿಕ್ಕೆ ಅಪೇಕ್ಷೆ ಪಡುತ್ತೇನೆ, ನನಗಿಂತ ಮುಂಚೆ ಮಾತನಾಡಿದಂಥ ಶ್ರೀಮಾನ್ ಗಟ್ಟಿ ಚಂದ್ರಶೇಕರ್‌ರವರು ಬಹಳ ಮನೋಹರವಾಗಿ ಭಾಷಣವನ್ನು ಮಾಡಿದ್ದಾರೆ. ತುರ್ತು ಪರಿಸ್ಥಿತಿ ಬಗ್ಗೆ ಬಹಳ ನಾಜೂಕಾಗಿ ಆಡಿದ್ದಾರೆ. ನಿಜ. ಭಾರತದ ಸಂಸ್ಕೃತಿಯಂತೆ, ಭಾರತ ನೆಲದ ಗುಣದಂತೆ 'ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ' ಅದು ನಿಜ. ಅವರು ಹೇಳಿದ ಹಾಗೆ ಶಕ್ತಿ ನಾನಾ ರೂಪದಲ್ಲಿ ಕಂಚಿ ಕಾಮಾಕ್ಷಿಯಾಗಿ, ಮಧುರೆ ಮೀನಾಕ್ಷಿಯಾಗಿ ಬಂದು ಧರ್ಮವನ್ನು ಶಾಂತಿಯನ್ನು ಸ್ಥಾಪನೆಯನ್ನು ಯುಗಯುಗಗಳಿಂದ ಮಾಡುತ್ತಾ ಬಂದಿದೆ ಎಂದು ಹೇಳಿದರು. ಆ ಮಾತನ್ನು ನಾನು ಒಪ್ಪುತ್ತೇನೆ. ಹಾಗೆಯೇ ಬರೀ ಕಂಚಿಯ ಕಾಮಾಕ್ಷಿ, ಕೊಲ್ಲೂರು ಮೂಕಾಂಬಿಕೆ, ಮಧುರೆ ಮೀನಾಕ್ಷಿ, ಮಹಿಷಾಸುರ ಮರ್ಧಿನಿ, ಇದೇ ರೂಪನಲ್ಲಿ ಶಕ್ತಿ ಬಂದಿಲ್ಲ. ಬೇರೆ ರೂಪದಲ್ಲಿ ಚಂಡಿಯಾಗಿ, ಕಾಳಿಯಾಗಿ, ರಕ್ತ ಪಿಪಾಸಿನಿಯಾಗಿ, ಅಕಾಲ ಚಂಡಿಕೆಯಾಗಿ, ಚಿನ್ನಮಸ್ತಿಕೆಯಾಗಿ ಈ ದೇಶದಲ್ಲಿ ಪುರಾಣಗಳಲ್ಲಿ ಅವತರಿಸಿದ್ದಾರೆನ್ನುವ ಮಾತನ್ನು ನೆನಪಿಗೆ ತಂದುಕೊಡುವುದಕ್ಕೆ ಇಷ್ಟಪಡುತ್ತೇನೆ. ರಕ್ತ ಪಿಪಾಸಿನಿ ಯಾವ ರೂಪದಲ್ಲಿ ಯಾವ ಮುಖದಲ್ಲಿ ಎಂಥವರನ್ನೂ ಮರುಳು ಮಾಡಿ, ಮೋಹಿನಿ ಭಸ್ಮಾಸುರ ಕಥೆಯನ್ನು ನೆನಪಿಗೆ ತಂದುಕೊಟ್ಟು ದಿನನಿತ್ಯ ಏನು ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಸ್ವಲ್ಪ ವಿಮರ್ಶೆ ಮಾಡಲಿ ವಿಶ್ಲೇಷಣೆ ಮಾಡಲಿ ಎಂದು ಆವರಲ್ಲಿ ನಿವೇದಿಸಿಕೊಳ್ಳುವುದಕ್ಕೆ ಅಪೇಕ್ಷೆಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ತಿಂಗಳು 26ನೇ ತಾರೀಖಿಗೆ ಈ ದೇಶ ಮೀಸಾವಾಸವಾಗಿ 9 ತಿಂಗಳಾಯಿತು. ಇವತ್ತು ದೇಶದ ಎಲ್ಲಕಡೆಗಳಲ್ಲೂ ಕೂಡ, ಜೈಲಿನ ಹೊರಗಡೆ ಮತ್ತು ಒಳಗಡೆ ದೇಶದ ಪರಿಸ್ಥಿತಿ

ಮೀಸಾ ವಾಸೇವಾ ...ಶದ ಜನರೆಲ್ಲರೂ ಮೀಸಾವಾಸವಾಗಿದ್ದಾರೆ. ಈ ಪರಿಸ್ಥಿತಿಯನ್ನು ಪಾರು ಮಾಡುವುದ... ದಂತಹ ಪರಿಣಿತ ಪ್ರಜ್ಞೆ ಮತ್ತು ಜನತಂತ್ರದ ಪ್ರಜ್ಞೆ, ಸ್ವಾತಂತ್ರ್ಯದ ಮನೋಭಾವ, ಮತ್ತು ...ಇರತಕ್ಕಂಥ ಜನ ಇವತ್ತು ಮುಂದೆ ಬರಬೇಕಾದಂತಹ ಅವಶ್ಯಕತೆ ಇದೆ.

ಶ್ರೀ ಆರ್. ಎಸ್. ಪಾಟೀಲ್.—ಮಧುಲಿಮಯೆ ಅವರು ರಾಜೀನಾಮೆ ಕೊಟ್ಟಿದ್ದಾರೆ ಎಂದು ನೀವು ಕೊಡುತ್ತೀರಾ ?

ಶ್ರೀ ಕೋಣಂದೂರು ಲಿಂಗಪ್ಪ.—ಅನಾವಶ್ಯಕವಾಗಿ ಜನ ಕೊಟ್ಟಂಥ 5 ವರ್ಷದ ಅವಧಿ ಅಂತ್ಯವಾಗುತ್ತಿದ್ದಂತೆ ಲೋಕಸಭೆ ಭಂಗಪಡಿಸಿ ಜೀವಾವಧಿಯನ್ನು ವಿಸ್ತರಿಸಿಕೊಂಡರಲ್ಲಾ ಅದನ್ನು ತಾತ್ವಿಕವಾಗಿ ವಿರೋಧಿಸಿ ಜನ ಕೊಟ್ಟ ಐದು ವರ್ಷದ ಮೇಲೆ ಒಂದು ದಿವಸವೂ ಲೋಕಸಭೆ ಸದಸ್ಯನಾಗಿ ಇರುವುದಕ್ಕೆ ತಯಾರಿಲ್ಲ ಎಂದು ರಾಜೀನಾಮೆ ಕೊಟ್ಟಿದ್ದಾರೆಯೇ ಹೊರತು ಬೇರೆ ಯಾವ ಕಾರಣಕ್ಕೂ ಅಲ್ಲ. ಮಾನ್ಯ ಅಧ್ಯಕ್ಷರೆ, ಇವತ್ತು ದೇಶದಲ್ಲಿರತಕ್ಕ ಪರಿಸ್ಥಿತಿ ಏನಿದೆ ಅದರ ದುರುಪಯೋಗ ಆಗುತ್ತಾ ಇರುವುದನ್ನು ನಾನು ತಮ್ಮ ಗಮನಕ್ಕೆ ತರಲು ಅಪೇಕ್ಷೆಪಡುತ್ತೇನೆ ಇತ್ತೀಚೆಗೆ ಪ್ರಧಾನ ಮಂತ್ರಿಯವರು ಒಂದು ಮಾತನ್ನು ಹೇಳಿದರು ಅದನ್ನು ತಾವು ಪತ್ರಿಕೆಗಳಲ್ಲಿ ಓದಿದ್ದೀರಿ, ತಮ್ಮ ಗಮನದಲ್ಲಿದೆ. ದೇಶದಲ್ಲಿ ಬಂಧಿತ ನಾಯಕರ ಬಿಡುಗಡೆ ಮಾಡುತ್ತಿದ್ದೇವೆ, ಈಗಾಗಲೇ ಅನೇಕ ನಾಯಕರ ಬಿಡುಗಡೆ ಮಾಡಿದ್ದೇವೆ ಎಂದು ಪತ್ರಿಕಾ ಪ್ರಕಟಣೆ ಕೊಟ್ಟರು. 15 ದಿವಸದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರಾದ ದೇವೇಗೌಡರನ್ನು ಮೀಸಾವಾಸಿಯನ್ನಾಗಿ ತೆಗೆದುಕೊಂಡರು. ಯಾರನ್ನು ಇವತ್ತು ಬಿಟ್ಟಿದ್ದಾರೆ ಎಂದು ಪ್ರಶ್ನೆ ಮಾಡಲಿಕ್ಕೆ ಅಪೇಕ್ಷೆ ಪಡುತ್ತೇನೆ. ಇವತ್ತು ದೇಶವನ್ನೇ ಒಂದು ದೊಡ್ಡ ಕಾರಾಗೃಹವನ್ನಾಗಿ ಮಾಡಿಕೊಂಡು ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯದ ಮೇಲೆ ಪೋಲೀಸ್ ಅಧಿಕಾರದಿಂದ ತಾಂಡವನೃತ್ಯವನ್ನು ಆಡುತ್ತಾ ಇರತಕ್ಕ ಜನ ಇವತ್ತು ಈ ಪರಿಸ್ಥಿತಿಯಿಂದ ಪಾರಾಗುವುದಕ್ಕೆ ನೀವು ಯಾವರೀತಿಯ ಪ್ರಯತ್ನವನ್ನು ಮಾಡಿದ್ದೀರಿ ಎಂಬ ಪ್ರಶ್ನೆ ಕೇಳುತ್ತೇನೆ. ಗಟ್ಟಿ ಚಂದ್ರಶೇಖರ್‌ರವರು ಇನ್ನೂ ಹತ್ತು ವರ್ಷ ತುರ್ತುಪರಿಸ್ಥಿತಿ ಇರಲಿ ಎಂದು ಹೇಳಿದರು. ಅವರು ಅದನ್ನು ವ್ಯಂಗ್ಯವಾಗಿ ಹೇಳಿದರು ಎಂದು ಭಾವಿಸುತ್ತೇನೆ. ಈ 9 ತಿಂಗಳಲ್ಲಿ ಆಗಿರತಕ್ಕ ಅನ್ಯಾಯ ಪರಂಪರೆಯನ್ನು ನೋಡಿದಾಗ ಈ ದೇಶದ ಭವಿಷ್ಯದ ಬಗ್ಗೆ ಸ್ವಲ್ಪ ಆಳವಾಗಿ ವಿಚಾರ ಮಾಡಬೇಕು. ಈ ದೇಶದ ಜೀವಂತಿಕೆ ಮತ್ತು ದೇಶದ ಜನರಲ್ಲಿ ಇರತಕ್ಕಂಥ ಪ್ರಜಾಪ್ರಭುತ್ವ ಇವುಗಳ ಕಳಕಳಿಯು ಕೊಲೆ ಆಗದ ಹಾಗೆ ಯಾವ ರಕ್ಷಣೆಯನ್ನು ತಾವು ಕೊಟ್ಟಿದ್ದೀರಿ ? ಅಥವಾ ಕೊಡುತ್ತಾ ಇದ್ದೀರಿ ಎಂಬ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಅಪೇಕ್ಷೆಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ನಮ್ಮ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳಲ್ಲಿ ಮುಖ್ಯವಾಗಿ ನಾನು ಜೈಲುಗಳ ಬಗ್ಗೆ ಮೊದಲು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ಅದು ಅಪಕೃತವಾಗಲಾರದು ಎಂದು ತಿಳಿದುಕೊಂಡಿದ್ದೇನೆ. ನಮ್ಮ ರಾಜ್ಯದ ಜೈಲುಗಳ ಮುಖ್ಯಾಧಿಕಾರಿಗಳು ಶ್ಲಾಘನೀಯವಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುವುದಕ್ಕೆ ಅಪೇಕ್ಷೆಪಡುತ್ತೇನೆ. ಆದರೆ ಕೆಳದರ್ಜೆ ಅಧಿಕಾರಿಗಳು ಬಂಧಿಗಳಾಗಿರುವ ರಾಜಕೀಯ ಕಾರ್ಯಕರ್ತರ ಮೇಲೆ ಅಮಾನುಷವಾದ ರೀತಿಯಲ್ಲಿ ಹಲ್ಲೆ ನಡೆಸಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆ. ಬಳ್ಳಾರಿ ಜೈಲಿನಲ್ಲಿ ಗುಲ್ಬರ್ಗದಲ್ಲಿ, ಶಿವಮೊಗ್ಗ ಜೈಲಿನಲ್ಲಿ ನಡೆದಂಥ ಗಲಾಟೆ ಸಣ್ಣದು ಇರಬಹುದು. ರಾಜಕೀಯ ಕಾರ್ಯಕರ್ತರ ಮೇಲೆ ಅಲ್ಲಿರತಕ್ಕ ಸಣ್ಣ ನೌಕರರು, ಪೋಲೀಸರು, ಮೇಲ್ಪಟ್ಟವ ಅಧಿಕಾರಿಗಳು ನಡೆದುಕೊಂಡ ರೀತಿ ಬಗ್ಗೆ ಸರಿಯಾದ ರೀತಿಯಲ್ಲಿ ವಿಚಾರ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ನಾನು ಪ್ರತಿನಿತ್ಯ ನನ್ನ ಕೋಣೆಯ ಪಕ್ಕದಲ್ಲಿರತಕ್ಕ ಸೆಂಟ್ರಲ್ ಜೈಲನ್ನು ನೋಡುತ್ತಿರುತ್ತೇನೆ. ನನಗೆ ಅಲ್ಲಿರತಕ್ಕ ಪೋಲೀಸರ ಬಗ್ಗೆ ಕಳಕಳಿ ಇದೆ. ಇಡೀ ರಾಜ್ಯದ ಪೋಲೀಸರಿಗೆ ಉದ್ದದ ಚಡ್ಡಿಯನ್ನು ಕೊಟ್ಟು ಸೆಂಟ್ರಲ್ ಜೈಲಿನ 60-65 ಮಂದಿ ಪೋಲೀಸರಿಗೆ ಚೋಟ ಚಡ್ಡಿಯನ್ನು ಕೊಟ್ಟಿದ್ದಾರೆ ಇದು ಸರಿಯಾದುದಲ್ಲ. ಎಲ್ಲರಿಗೂ ಒಂದೇ ರೀತಿಯ ಬಟ್ಟೆಬರೆ ಸವಲತ್ತುಗಳನ್ನು ಕೊಡಬೇಕೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಘಟ್ಟಿ ಚಂದ್ರಶೇಖರ್‌ರವರು ಹೇಳಿದ ಹಾಗೆ, ಬುಡದಿಂದ ತುದಿಯವರೆಗಿರತಕ್ಕ ಎಲ್ಲ ಅಧಿಕಾರಿಗಳು ಒಂದೇ ತರಹ

ಇದ್ದಾರೆ, ಅವರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ ಎಲ್ಲ ಅಧಿಕಾರಿಗಳು ಯೋಗ್ಯರೇ, ಸಾಕಷ್ಟು ಒಳ್ಳೆಯವರೇ ಇದ್ದಾರೆ. ಆದರೆ ಬುಡಕ್ಕೆ ಹೋದರೆ, ತೀರ್ಥಹಳ್ಳಿ, ನರಸಿಂಹರಾಜಪುರ. ಕೊಪ್ಪ, ಶೃಂಗೇರಿ, ಸಾಗರ, ಹೊಸನಗರ ಇತ್ಯಾದಿ ಹಳ್ಳಿಗಳಲ್ಲಿರತಕ್ಕ ಪೋಲೀಸಿನವರು ಜನರನ್ನು ಹೇಗೆ ನೋಡಿಕೊಳ್ಳುತ್ತಾರೆ, ಹೇಗೆ ನಡೆದುಕೊಳ್ಳುತ್ತಿದ್ದಾರೆಂಬುದನ್ನು ವಿಚಾರ ಮಾಡಿ ನೋಡಬೇಕು. ಈಗ ನಮ್ಮ ತೀರ್ಥಹಳ್ಳಿಯಲ್ಲಿರತಕ್ಕ ಸಬ್ ಇನ್‌ಸ್ಪೆಕ್ಟರ್ ಬಹಳ ಒಳ್ಳೆಯವರಿದ್ದಾರೆ, ಆದರೆ ಹಿಂದೆಇದ್ದಂತಹ ಸಬ್ ಇನ್‌ಸ್ಪೆಕ್ಟರ್‌ಗೆ ಯಾರಾದರೂ ಒಬ್ಬ ಕಳ್ಳನನ್ನು ಹಿಡಿದುಕೊಂಡು ಹೋಗಿ ಕೊಟ್ಟರೆ, ಎಲ್ಲಿದ್ದೀಯೆ ಏನು ಸಮಾಚಾರ ಎಂದು ನೆಂಟರನ್ನು ಮಾತನಾಡಿಸಿದಂತೆ ಕಳ್ಳರನ್ನು ಹಿಡಿದುಕೊಂಡು ಹೋದವರು ಬೆರಗಾಗುವಂತೆ ಮಾತನಾಡುತ್ತಿದ್ದರು. ಇತ್ತೀಚೆಗೆ ಅವರನ್ನು ಸರ್ಕಲ್ ಇನ್‌ಸ್ಪೆಕ್ಟರ್ ಆಗಿ ಟ್ರಾನ್ಸ್‌ಫರ್ ಮಾಡಿದ್ದಾರೆ. ಮಾನ್ಯ ಘಟ್ಟಿ ಚಂದ್ರಶೇಖರ್‌ರವರು ಅಪ್ಪಣೆ ಕೊಡಿಸಿದ ಹಾಗೆ ತುರ್ತುಪರಿಸ್ಥಿತಿ ಬಂದ ಮೇಲೆ ಹಳ್ಳಿಗಳಲ್ಲಿ ಸ್ವಲ್ಪ ಯಾರಾದರು ಅನುಕೂಲಸ್ಥರಿದ್ದು ಅವರು ಜೀತಕ್ಕೆ ಇಟ್ಟುಕೊಳ್ಳುವುದು, ಗಿರವಿ ಇಟ್ಟುಕೊಳ್ಳುವುದು ಏನಾದರೂ ಕಂಡುಬಂದರೆ, ಪೋಲೀಸರು ಅಂಥವರನ್ನು ಲೂಟಿ ಮಾಡುತ್ತಾರೆ. ಇದಕ್ಕೆಲ್ಲ ಒಂದು ಸರಿಯಾದ ಕಾಂಗ್ರೆಸ್ ಸೆಲ್ ಇದೆ, ಅದಕ್ಕೆ ಒಂದು ಬಲ್ಬ್ ಇದೆ. ಈ ಪೋಲೀಸಿನವರು ಸೆಲ್ಲಿನವರು ಸೇರಿಕೊಂಡು ಮರ್ಯಾದಸ್ಥರು ಯಾರು ಇರದ ಹಾಗೆ ಮಾಡಿದ್ದಾರೆ. ಈ ಪೋಲೀಸಿನವರು ಸ್ವಲ್ಪ ಅನುಕೂಲಸ್ಥರ ಮರ್ಯಾದಸ್ಥರ, ಭಯಸ್ಥರ ಮನೆಗೆ ಹೋಗುವಾಗ ಜೊತೆಗೆ ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಹೋಗಿ, ಈತ ನಿಮ್ಮಲ್ಲಿ 20 ವರ್ಷದ ಹಿಂದೆ 5 ತೊಲ ಚಿನ್ನ, 2 ಹಂಡೆ, 3 ತಪ್ಪಲೆ, ಇತ್ಯಾದಿಗಳನ್ನು ಇಟ್ಟಿದ್ದಾನೆ, ಅವುಗಳನ್ನು ಕೊಡುತ್ತೀರೋ ಇಲ್ಲವೋ ಕೊಡದಿದ್ದರೆ 2 ಸಾವಿರ ರೂಪಾಯಿಗಳನ್ನು ಕೊಡಿ ಎಂದು ಏನೆಲ್ಲ ಬೆದರಿಕೆ ಹಾಕತಕ್ಕ ಪರಿಸ್ಥಿತಿ ನಮ್ಮ ತೀರ್ಥಹಳ್ಳಿ ತಾಲ್ಲೂಕಿನ ಪ್ರತಿ ಹಳ್ಳಿಯಲ್ಲೂ ಇದೆ. ಇನ್ನು ಜೀತ ಎನ್ನುವುದರ ಅರ್ಥವೇನು, ಡೆಫನಿಶನ್ ಏನು ಎನ್ನುವುದನ್ನು ಸರ್ಕಾರದವರು ಹೇಳಬೇಕು. ಹೆಂಡತಿಯು ಗಂಡನಿಗೆ ಜೀತ ಎಂದು ಈಗ ಒಬ್ಬರು ಹಿರಿಯರು ಹೇಳಿದರು; ಅದು ಸರಿಯೇ ? ಇದರ ಬಗ್ಗೆ ನಮಗೆ ಸರಿಯಾದ ಉತ್ತರ ಬೇಕು. ನಮ್ಮ ಅರ್ಥದಲ್ಲಿ, ತಲೆ ತಲಾಂತರದಿಂದ ಯಾರು ದುಡಿಸಿಕೊಂಡು ಬಂದಿರುತ್ತಾರೋ (ಬಡ್ಡಿಗೆ ಬಡ್ಡಿ ಚಕ್ರ ಬಡ್ಡಿ ಹಾಕಿ) ಅಂಥವರ ಬಗ್ಗೆ ಹೇಳಿದರೆ ಒಪ್ಪುತ್ತೇನೆ; ತಾತ್ವಿಕವಾಗಿ ವಿರೋಧವಿಲ್ಲ. ಆದರೆ ಮಲೆನಾಡಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇರೇಗಾರರೆಂದು ಇರುತ್ತಾರೆ. ಅವರು ಮೂರು ತಿಂಗಳ ಕಾಲ ತೋಟ ಮತ್ತು ಗದ್ದೆ ಕೆಲಸಗಳಿಗೆ ಬರುತ್ತಾರೆ, ನಂತರ ಅವರು ವಾಪಸ್ಸು ಹೋಗುತ್ತಾರೆ. ಕೆಲಸದ ಸಮಯದಲ್ಲಿ ರೈತರು ಕೆಲಸಗಾರರನ್ನು ಕೇಳಿ ಅವರಿಂದ ಕೆಲಸ ಮಾಡಿಸಿಕೊಳ್ಳುತ್ತಿದ್ದರು, ನಂತರ ವಾಪಸ್ಸು ಕಳುಹಿಸುತ್ತಿದ್ದರು. ಆದರೆ ಈಗ ರೈತ ಬೇಸಾಯ ಮಾಡಲಿಕ್ಕೆ ಸಾಧ್ಯವಾಗದಂತಹ ಪರಿಸ್ಥಿತಿ ಬರುತ್ತಿದೆ. ಇದಕ್ಕೆ ಕಾರಣ, ಪೋಲೀಸರು ಮತ್ತು ಕಾಂಗ್ರೆಸ್ ಸೆಲ್ಲುಗಳು; ಇವರುಗಳು ಒಳ್ಳೆಯ ಹಾದಿಯನ್ನು ಹಿಡಿಯುವುದಿಲ್ಲ, ಜನತೆಗೆ ಒಳ್ಳೆಯದನ್ನು ಮಾಡುವುದಿಲ್ಲ. ಈ ಬಗ್ಗೆ ಸರ್ಕಾರದವರು ಬಹಳ ಎಚ್ಚರಿಕೆ ವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ

ಈಗಾಗಲೇ ಗವರ್ನರ್ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದ್ದೇವೆ. ಈಗ ನಾನು ಕೇಳುವುದೇನೆಂದರೆ ನಮಗೆ ಗವರ್ನರ್ ಪದವಿ ಏತಕ್ಕೆ ಬೇಕು ? ಮೂಗಿಗಿಂತ ಮೂಗುತಿ ಹೆಚ್ಚು ಎನ್ನುವ ಹಾಗೆ, ನಮ್ಮ ರಾಜ್ಯದಲ್ಲಿ ಚುನಾಯಿತ ಪ್ರತಿನಿಧಿಗಳು, ಚುನಾಯಿತ ಸರ್ಕಾರದವರು ಇರುವಾಗ ಅವರ ತಲೆಯ ಮೇಲೆ ಗವರ್ನರ್ ಏಕೆ ಬೇಕು ? ಆ ಸ್ಥಾನವನ್ನು ರದ್ದು ಮಾಡಬೇಕೆಂದು ಮೊದಲಿನಿಂದ ಹೇಳಿಕೊಂಡು ಬಂದಿದ್ದೇವೆ. ಇನ್ನು ಮಂತ್ರಿಗಳ ಬಗ್ಗೆ ಹೇಳುವ ಅವಶ್ಯಕತೆ ಇಲ್ಲ. ಇತ್ತೀಚಿನ ಪತ್ರಿಕೆಯಲ್ಲಿ, ಮಾನ್ಯ ರಾಚಯ್ಯನವರು ಮೈಸೂರಿನಲ್ಲಿ ಒಳ್ಳೆಯ ಭಾಷಣ ಮಾಡಿದ್ದಾರೆಂದು, ಓದಿದೆ. ಅವರನ್ನು ತೆಗೆದು ಹಾಕಲಿಕ್ಕೆ ಮುಖ್ಯ ಮಂತ್ರಿಗಳು ಮತ್ತು ಸುತ್ತಮುತ್ತ ಪಟ್ಟಭದ್ರಹಿತಾಸಕ್ತಿಗಳು ಪ್ರಯತ್ನ ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸಮಜಾಯಿಸಿ ಕೊಡಬೇಕು, ಉತ್ತರ ಕೊಡಬೇಕೆಂದು ಹೇಳುತ್ತೇನೆ. ಕೆಲವು ಮಂತ್ರಿಗಳು ಏನು ತಿಳಿದುಕೊಂಡಿದ್ದಾರೆಂದರೆ, ನಾವು ಸರ್ವಜ್ಞರು, ನಮ್ಮ ಮುಂದೆ ಯಾರು ಇಲ್ಲ. ನಾವೇ ಎಲ್ಲ ನಮಗೆ ಹೇಗೆ ಬೇಕಾದರೂ ಮಾತನಾಡತಕ್ಕ ಹಕ್ಕುಟೆಂದು ಅಪಭ್ರಂಶ ಶಬ್ದಗಳನ್ನು ಉಪಯೋಗಿಸಿ ಮಾತನಾಡತಕ್ಕ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ. ಇನ್ನು ಈ ಬಗ್ಗೆ ಹೆಚ್ಚಿಗೆ ಹೇಳಲಿಕ್ಕೆ ಹೋಗುವುದಿಲ್ಲ.

ಇನ್ನು ಪಬ್ಲಿಕ್ ಸರ್ವೀಸ್ ಕಮೀಶನ್ ಬಗ್ಗೆ ಒಂದು ಮಾತನ್ನು ಹೇಳಲೇಬೇಕಾಗುತ್ತದೆ. ಅಲ್ಲಿ ಒಂದು ಸಂತೋಷದ ವಿಷಯವೇನೆಂದರೆ, ಅಲ್ಲಿ ಲೆಕ್ಕಾಚಾರ ಚೊಕ್ಕ; ಕೆಲಸವಾದರೆ ದುಡ್ಡು ಇಲ್ಲ, ಕೆಲಸ ಆಗದೇ ಇದ್ದರೆ ದುಡ್ಡನ್ನು ವಾಪಸ್ಸು ಕೊಡುತ್ತಾರೆ. ಅದು ಬಹಳ ಚೊಕ್ಕವಾಗಿ ನಡೆಯುತ್ತಿದೆ. ಅದಕ್ಕೋಸ್ಕರ ಸರ್ಕಾರವನ್ನು ಅಭಿನಂದಿಸಲಿಕ್ಕೆ ಅಪೇಕ್ಷೆಪಡುತ್ತೇನೆ.

ಇನ್ನು ಪವರ್ ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ, ನನಗೆ ಸಂಬಂಧಪಟ್ಟ ಹಾಗೆ ವರಾಹಿ, ಚಕ್ರ ಮತ್ತು ಸಾವೆಹೊಕ್ಕಲು ಎಂಬ ಮೂರು ಪ್ರಾಜೆಕ್ಟುಗಳ ಕೆಲಸ ನನ್ನ ಕ್ಷೇತ್ರದಲ್ಲಿ ಈಗ್ಗೆ 10 ವರ್ಷಗಳಿಂದ ನಡೆಯುತ್ತಿದೆ. ಈ ಬಗ್ಗೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ನಾಲ್ಕು ವರ್ಷ ತುಂಬಿದ ಸಂದರ್ಭದಲ್ಲಿ ವರಾಹಿ ಪ್ರಾಜೆಕ್ಟಿಗೆ ಕೇಂದ್ರ ಸರ್ಕಾರದ ನೆರವು ದೊರೆತಿದೆ ಎನ್ನುವ ಮಾತನ್ನು ಹೇಳಿದ್ದಾರೆ; ಹಾಗೆ ದೊರೆತ್ತಿದ್ದರೆ ಬಹಳ ಸಂತೋಷ. ಆ ಮೂರು ಪ್ರಾಜೆಕ್ಟುಗಳಿಂದ ಮುಳುಗಡೆ ಆಗತಕ್ಕ ಜನರು ಯಾರಿದ್ದಾರೆ ಅವರಿಗೆ ಪುನರ್ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕಾದ ಅಗತ್ಯ ಅವಶ್ಯವಾಗಿದೆ ಎಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಒಟ್ಟಿನಲ್ಲಿ ಇವತ್ತು ಸರ್ಕಾರದವರು ಪೋಲೀಸ್ ಇಲಾಖೆಗೆ ಮತ್ತಿತರ ಇಲಾಖೆಗಳಿಗೆ ಏನು ಹಣವನ್ನು ಕೇಳುತ್ತಿದ್ದಾರೆ, ಅದಕ್ಕೆ ನಾವು ಮೂರು ಕಾಸನ್ನೂ ಸಹ ಕೊಡುವುದಕ್ಕೆ ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ಕೊನೆಯದಾಗಿ ಒಂದು ಕವನವನ್ನು ಹಾಡಿ ನನ್ನ ಮಾತನ್ನು ಮುಗಿಸುತ್ತೇನೆ.

"ಅರಸು ವಿಚಾರ, ಸಿರಿಯ ಶೃಂಗಾರ ಸ್ಥಿರವಲ್ಲ ಮಾನವ,
ಕೆಟ್ಟಿತು ಕಲ್ಯಾಣ, ಹಾಳಾಯ್ತು ನೋಡಾ"

† ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್ (ಶಿರಸಿ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂತಹ ೧೨ ಬೇಡಿಕೆಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ, ಕೆಲವು ಸಲಹೆಗಳನ್ನು ಮಾಡಲು ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಮಾನ್ಯ ಲಿಂಗಪ್ಪನವರು ಪಬ್ಲಿಕ್ ಸರ್ವೀಸ್ ಕಮೀಶನ್‌ನಲ್ಲಿ ದುರ್ವ್ಯವಹಾರ ನಡೆಯುತ್ತಿದೆ ಎಂಬ ಅಂಶವನ್ನು ಒಂದೇ ಒಂದು ವಾಕ್ಯದಲ್ಲಿ ಹೇಳಿಬಿಟ್ಟರು. ಅವರ ಅದೃಷ್ಟವೋ ಅಥವಾ ಅವರ ದುರಾದೃಷ್ಟವೋ ಒಬ್ಬ ಅನುಭವ ಉಳ್ಳ ಶ್ರೇಷ್ಠ ಒಬ್ಬ ಹರಿಜನ ಮಹಾನಾಯಕರನ್ನು ಮಾನ್ಯ ಮುಖ್ಯ ಮಂತ್ರಿಗಳು ಲೋಕಸೇವಾ ಆಯೋಗದ ಅಧ್ಯಕ್ಷ ಸ್ಥಾನಕ್ಕೆ ಏರಿಸಿ ಅವರು ಸ್ವಚ್ಛವಾದ ರೀತಿಯಲ್ಲಿ ಕೆಲಸ ಮಾಡತಕ್ಕ ಸಂದರ್ಭದಲ್ಲಿ ಮಾನ್ಯ ಕೋಣಂದೂರು ಲಿಂಗಪ್ಪನವರಿಗೆ ಆ ರೀತಿ ಹೇಳತಕ್ಕಂಥಾ ಮನಸ್ಸು ಏತಕ್ಕೆ ಬಂತು ?

ಶ್ರೀ ಕೋಣಂದೂರು ಲಿಂಗಪ್ಪ.—ಅಧ್ಯಕ್ಷರ ಸ್ವಚ್ಛತೆಯ ಬಗ್ಗೆ ನಾನು ಹೇಳಲಿಲ್ಲ. ಅವರ ಬಗ್ಗೆ ನನಗೆ ಅಪಾರ ಗೌರವ ಇದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಏನೇ ಆಗಿದ್ದರೂ ಕೂಡ ಅವರು ಈ ರೀತಿ ಆರೋಪಣೆ ಮಾಡತಕ್ಕದ್ದು ಸರಿಯಲ್ಲ.

ಈ ರಾಜ್ಯದ ರೆಕ್ರೂಟ್‌ಮೆಂಟ್ ಪಾಲಿಸಿ ವಿಷಯದಲ್ಲಿ ಕೆಲವು ಅಂಶಗಳನ್ನು ಈ ಮನೆಯ ಮೂಲಕ ಸರ್ಕಾರದ ಗಮನಕ್ಕೆ ತರಬೇಕೆಂದಿದ್ದೇನೆ. ರಾಜ್ಯದಲ್ಲಿ ರಾಜ್ಯಾಂಗ ನಿಯಮಾವಳಿಗಳು ಜಾರಿಗೆ ಬಂದು ದುರ್ಬಲ ವರ್ಗ ಮತ್ತು ಹಿಂದುಳಿದ ವರ್ಗಗಳಿಗೆ ರೆಕ್ರೂಟ್‌ಮೆಂಟ್ ಪಾಲಿಸಿಯಲ್ಲಿ ಕೆಲವು ವಿಶೇಷ ರಿಯಾಯಿತಿಗಳನ್ನು ಕೊಟ್ಟು ಅವುಗಳನ್ನು ಜಾರಿಗೆ ತಂದರು. ಅದು ಆರಂಭ ಆದಾಗ ಸೈಕಲ್ ಆಫ್ ಅಪಾಯಿಂಟ್‌ಮೆಂಟ್ ಎನ್ನತಕ್ಕದನ್ನು ಮೊದಲು ಜಾರಿಗೆ ತಂದರು. ಅದು ಕೆಲವು ಕಾಲ ಆದಮೇಲೆ ಕೈಬಿಟ್ಟು ಹೋಯಿತು. ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳಿಗೆ ರಕ್ಷಣೆ ದೂರವಾಯಿತು, ಸ್ಥಾನಮಾನ ರಕ್ಷಣೆ ದೂರವಾಯಿತು. ಅವರಿಗೆ ಅದು ದೂರವಾದಾಗ ಪ್ರಮೋಷನಲ್ ವೇಕೆನ್ಸಿ ಬಂದಾಗ ಅವರಿಗೆ ಅದು ದೊರಕುವುದು ಶೂನ್ಯವಾಯಿತು. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಯೋಚನೆ ಮಾಡಿ ಸೈಕಲ್ ಆಫ್ ಅಪಾಯಿಂಟ್‌ಮೆಂಟ್ ಜಾರಿಗೆ ತರಬೇಕು ಎನ್ನತಕ್ಕಂಥಾದ್ದನ್ನು ನಾನು ಈ ಮೂಲಕ ಸಲಹೆ ಮಾಡುತ್ತೇನೆ.

ಇಂಟರ್‌ವ್ಯೂ ಕಾಲದಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಅಭ್ಯರ್ಥಿಗಳಿಗೆ ಪರೀಕ್ಷಾ ಫಲಿತಾಂಶಗಳಲ್ಲಿ ಅಂಕಗಳನ್ನು ಪಡೆಯುವುದು ಬಹಳ ಕಡಿಮೆಯಾಗಿತ್ತು, ಅಂಕಗಳ ಮೆರಿಟ್‌ಮೇಲೆ ೧ : ೪ ಪ್ರಮಾಣದಲ್ಲಿ ಇಂಟರ್‌ವ್ಯೂ ಕರೆಯುತ್ತಿದ್ದರು. ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಯೋಚನೆ

ಮಾಡಿ ದುರ್ಬಲ ವರ್ಗದವರಿಗೆ ಮತ್ತು ಅಲ್ಪಸಂಖ್ಯಾತರು, ಹಾಗೂ ಹಿಂದುಳಿದ ವರ್ಗಗಳಿಗೆ ಹೆಚ್ಚು ಅವಕಾಶವನ್ನು ಕಲ್ಪಿಸಬೇಕು ಎಂದು ಆ ಇಂಟರ್‌ವ್ಯೂ ಪ್ರಮಾಣವನ್ನು ೧ : ೧೦ ಪ್ರಮಾಣದಲ್ಲಿ ಹೆಚ್ಚಿಸಿರ ತಕ್ಕದ್ದು ಅಭಿನಂದನಾರ್ಹ. ಈ ಒಂದು ಸಂದರ್ಭದಲ್ಲಿ ರಾಜ್ಯಾಂಗದ ಕೆಲವು ಭಾಗಗಳನ್ನು ಎಂದರೆ ೩ ಕ್ಲಾಜುಗಳನ್ನು ನಾನು ಓದುವುದಕ್ಕೆ ಇಷ್ಟಪಡುತ್ತೇನೆ.

"16. (1) There shall be equality of opportunity for all citizens in matters relating to employment for appointment to any office under this State.

(2) No citizen shall, on grounds only of religion, race, caste, sex, descent, place of birth, residence or any of them, be ineligible for, or discriminated against in respect of any employment or office under the State.

(4) Nothing in this article shall prevent the State from making any provision for the reservation of appointments or posts in favour or any backward class of citizens which, in the option of the State, is not adequately represented in the services under the State."

೧೯೫೦ನೇ ಇಸವಿ ಜನವರಿ ೨೬ನೇ ತಾರೀಖಿನಿಂದ ಜಾರಿಗೆ ಬಂದಂತಹ ಈ ರಾಜ್ಯಾಂಗಕ್ಕೆ ೨೬ ವರ್ಷಗಳು ತುಂಬಿದರೂ ಸಹ ಯಾವ ಇಲಾಖೆಯಲ್ಲಾಗಲೀ ಯಾವ ದರ್ಜೆಯಲ್ಲಾಗಲೀ ಅವರಿಗೆ ಕೊಡಬೇಕಾದಂತಹ ಸಂಖ್ಯಾ ಪ್ರಮಾಣದ ಬೆಂಬಲ ದೊರಕಿಲ್ಲ. ಇದಕ್ಕಾಗಿ ರಾಜ್ಯ ಸರ್ಕಾರ ಸ್ಪೆಷಲ್ ರೆಕ್ರೂಟ್‌ಮೆಂಟ್ ಡ್ರೈವ್ ಮಾಡಬೇಕು. ಪ್ರತಿ ಭಾಗದಲ್ಲಿಯೂ ಅವರಿಗೆ ಗೊತ್ತು ಮಾಡಿರತಕ್ಕ ಪ್ರಮಾಣದಲ್ಲಿ ಅವರಿಗೆ ರಿಜರ್ವೇಷನ್ ಕೊಟ್ಟು ಅದನ್ನು ಭರ್ತಿ ಮಾಡಬೇಕು. ಸ್ಪೋರ್ಟ್ಸ್ ಮ್ಯಾನ್‌ಗೆ ಯಾವರೀತಿ ರಿಲ್ಯಾಕ್ಸೇಷನ್ ಮಾಡಿದ್ದಾರೆ, ಆ ರೀತಿ ನೇರವಾಗಿ ಪಬ್ಲೀಕ್ ಸರ್ವೀಸ್ ಕಮಿಷನ್ನಾಗಲೀ ಅಥವಾ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನ್ನಾಗಲೀ ಕೇಳದೆ ನೇರವಾಗಿ ಮಾಡಬೇಕು. ಎಕ್ಸ್ ಸರ್ವೀಸ್ ಸೋಲ್ಜರ್ಸ್ ಬೋರ್ಡ್ ಸ್ಪಾನ್ಸರ್ ಮಾಡಿದ ಕ್ಯಾಂಡಿಡೇಟ್ ಅಂಗೀಕಾರ ಮಾಡಿದ್ದಾರೆ ಅದೇರೀತಿ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟಜನಾಂಗ ಹಾಗೂ ಹಿಂದುಳಿದ ಜನಾಂಗದವರ ಪ್ರಮಾಣ ಸೇಕಡಾ ೧೮ ಬರುವರೆವಗೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪರಿಮಿತಿಯಲ್ಲಿ ತರದೆ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್, ಡಿವಿಜನಲ್ ಸೋಷಿಯಲ್ ವೆಲ್‌ಫೇರ್ ಆಫೀಸರ್, ಡೈರೆಕ್ಟರ್ ಆಫ್ ಸೋಷಿಯಲ್‌ವೆಲ್‌ಫೇರ್ ಇವುಗಳಲ್ಲಿರತಕ್ಕ ಎಂಪ್ಲಾಯ್‌ಮೆಂಟ್ ಸೆಲ್‌ನಿಂದ ಹೆಸರುಗಳನ್ನು ತರಿಸಿಕೊಂಡು ಅರ್ಹರಾದವರಿಗೆ ಹೆಚ್ಚು ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಡುವಂತೆ ಮಾಡಬೇಕು ಅನೇಕ ಅಧಿಕಾರಿಗಳು ಸರ್ಟಿಫಿಕೇಟ್ ಕೊಡುವಾಗ ಕೆಲವರು ಭೋಗಸ್ ಸರ್ಟಿಫಿಕೇಟನ್ನು ಕೊಟ್ಟು ಪರಿಶಿಷ್ಟ ವರ್ಗದವರ ರಿಯಾಯಿತಿಗಳನ್ನು ಲಪಟಾಯಿಸಿರತಕ್ಕ ಅನೇಕ ನಿದರ್ಶನಗಳು ಇವೆ. ಅದನ್ನು ಬ್ಯಾಕ್‌ವರ್ಡ್ ಕಮಿಷನ್ನಿನವರು ಮಾಡಿದಂತಹ ಪರೀಕ್ಷೆಯಲ್ಲಿ ವರದಿ ಮಾಡಿದ್ದಾರೆ ಈ ಡಿಪಾರ್ಟ್‌ಮೆಂಟ್ ಕಮಿಟಿಗಳು ನೇಮಕಗಳನ್ನು ಮಾಡುವಾಗ ಇದುವರೆಗೂ ೧೬೮೪ ಜನ ಅಭ್ಯರ್ಥಿಗಳನ್ನು ಕ್ಲಾಸ್ ೩ನೇ ವರ್ಗಕ್ಕೆ ಅಪಾಯಿಂಟ್ ಮಾಡಿದ್ದಾರೆ. ಇದರಲ್ಲಿ ಸಂಖ್ಯಾಪ್ರಮಾಣದ ಪ್ರಕಾರ ೩೧೧೩ ಆದರೂ ಪರಿಶಿಷ್ಟ ವರ್ಗದವರಿಗೆ ಸೇರಬೇಕಾಗಿತ್ತು. ಆದರೆ ೨೧೭ ಮಂದಿಯನ್ನು ಪರಿಶಿಷ್ಟವರ್ಗದವರನ್ನು ರೆಕ್ರೂಟ್ ಮಾಡಿದ್ದಾರೆ. ಇದರಲ್ಲಿ ೯೬ ಮಂದಿ ಕಡಿಮೆ ಆಗಲು ಕಾರಣವೇನು? ಅರ್ಹರಾದವರು ಸಿಕ್ಕಲಿಲ್ಲ, ಯೋಗ್ಯರು ಸಿಕ್ಕಲಿಲ್ಲ, ಎಂದು ಅರ್ಥವಾಗುತ್ತದೆ. ಅದಕ್ಕಾಗಿ ಟೈಪ್‌ರೈಟಿಂಗ್ ಷಾರ್ಟ್‌ಹ್ಯಾಂಡ್ ಮತ್ತು ಇತರ ಸ್ಪೆಷಲ್ ಎಜುಕೇಷನ್ನಿಗೆ ಅರ್ಹರಾದವರನ್ನು ಸರ್ಕಾರ ಗೊತ್ತು ಮಾಡುವುದಕ್ಕೆ ಅವರಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಅದಕ್ಕಾಗಿ ಒಂದು ಟೈಮ್ ಪ್ರೋಗ್ರಾಮ್ ಇಡಬೇಕು. ರಾಜ್ಯಾಂಗದ ವಿಶೇಷ ರಿಯಾಯಿತಿಗಳನ್ನು ಅವರಿಗೆ ಕೊಡುವುದಕ್ಕೆ ೧೦ ವರ್ಷಗಳಲ್ಲಿ ಅವರ ಪ್ರಮಾಣವನ್ನು ಹೆಚ್ಚಿಸುವುದಕ್ಕೆ ಒಂದು ವಿಶೇಷವಾದ ಯೋಜನೆಯನ್ನು ಮಾಡಿದ್ದಾರೆ ಆ ಯೋಜನೆಯ ಪ್ರಕಾರ ಕ್ಲಾಸ್ ೧.೩೨, ಕ್ಲಾಸ್ ೨.೧೨೭ ಮಾತ್ರ ಇದೆ. ಆದ್ದರಿಂದ ಇದು ೧೯೮೦ನೇ ಇಸವಿಯ ಒಳಗಾಗಿ ಎಲ್ಲಾ ವರ್ಗದಲ್ಲಿಯೂ ಆ ಸಂಖ್ಯೆ ೧೮ ಪರ್ಸೆಂಟ್ ಆಗುವುದಕ್ಕೆ ಅವಕಾಶ ಮಾಡಬೇಕು. ಈ ದೃಷ್ಟಿಯಿಂದ ಈ ವಿಶೇಷ ಯೋಜನೆ ವಿಶೇಷ ರೆಕ್ರೂಟ್‌ಮೆಂಟ್ ಎಲ್ಲಾ ಮಟ್ಟದಲ್ಲಿಯೂ ಎಲ್ಲಾ ವರ್ಗಕ್ಕೂ ಅನ್ವಯಿಸುವಂತೆ ಮಾಡಬೇಕು ಎಂದು ನಾನ

ಹೇಳುತ್ತೇನೆ. ಅನೇಕ ಕಡೆ ಪ್ರಮೋಷನಲ್ ವೇಕೆನ್ಸಿಗಳಿಗೆ ಪ್ರಮೋಷನ್ ಕೊಡುವುದಕ್ಕೆ ಅವಕಾಶ ಇಲ್ಲದೆ ಇರುವುದರಿಂದ ಎಫೆಕ್ಟೀವ್ ಅಡ್ಮಿನಿಸ್ಟ್ರೇಷನ್ ಇರುವುದಿಲ್ಲ, ಇದನ್ನು ಸರಿಪಡಿಸಬೇಕು. ಆಗಾಗ್ಗೆ ಪ್ರಮೋಷನ್ ಕೊಡುತ್ತಾ ಹೋಗಬೇಕು. ಸುಪ್ರೀಮ್‌ಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ ಸರ್ಕಾರದಲ್ಲಿ ೧೮ ಪರ್ಸೆಂಟ್ ರಿಜರ್ವೇಷನ್ ಅನ್ನು ಪ್ರಮೋಷನಲ್ ವೇಕೆನ್ಸಿಯಲ್ಲಿ ಕೊಡಬೇಕು ಎನ್ನತಕ್ಕಂಥಾದ್ದನ್ನು ಮತ್ತೆ ಸುಪ್ರೀಮ್ ಕೋರ್ಟಿನಲ್ಲಿ ಛಾಲೆಂಜ್ ಮಾಡಿ ಅದನ್ನು ಕೊಡತಕ್ಕದ್ದು ಯೋಗ್ಯ ಎಂದು ಸುಪ್ರೀಮ್ ಕೋರ್ಟಿನವರು ತೀರ್ಮಾನ ಮಾಡಿದ್ದಾರೆ. ಪ್ರೈಮಿನಿಸ್ಟರ್ ಸೆಕ್ರೆಟೇರಿಯಟ್‌ನಲ್ಲಿ ಈಗಾಗಲೇ ಪ್ರಮೋಷನಲ್ ವೇಕೆನ್ಸಿಯಲ್ಲಿ ರಿಜರ್ವೇಷನ್ ಕೊಟ್ಟು ಕಾರ್ಯ ನಿರ್ವಹಿಸುತ್ತಿದ್ದಾರೆ. ಬೀರಪ್ಪ ಕಮಿಟಿಯಲ್ಲಿ ಇದನ್ನು ಒತ್ತಾಯ ಮಾಡಿ ಇದನ್ನು ವರದಿ ಮಾಡಿದ್ದರೂ ಕೂಡ ಇದುವರೆಗೂ ರಾಜ್ಯ ಸರ್ಕಾರ ಪ್ರಮೋಷನಲ್ ವೇಕೆನ್ಸಿಗಳಿಗೆ ಹರಿಜನ ಗಿರಿಜನರಿಗೆ ರಿಜರ್ವೇಷನ್ ಕೊಡದೆ ಇರತಕ್ಕದ್ದು ನ್ಯಾಯವಲ್ಲ, ಕ್ರಮಬದ್ಧವಲ್ಲ ಇದು ರಾಜ್ಯಾಂಗ ನೀತಿಗೆ ವಿರೋಧವಾಗಿದೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ವರದಿ ಬರುತ್ತದೆ ಎಂದು ಹೇಳಿದರು. ಅದು ಬರುವುದು ಎರಡು ವರ್ಷ ತಡವಾಗಿದೆ. ಜಾಗ್ರತೆಯಾಗಿ ಆ ವರದಿಯನ್ನು ತರಿಸಿಕೊಂಡು ಸುಪ್ರೀಮ್ ಕೋರ್ಟಿನ ಜಡ್ಜ್‌ಮೆಂಟಿಗೆ ಅನುಗುಣವಾಗಿ ಮತ್ತು ರಾಜ್ಯಾಂಗಬದ್ಧವಾದ ರಕ್ಷಣೆಯನ್ನು ಕೊಟ್ಟು ಪ್ರಮೋಷನಲ್ ವೇಕೆನ್ಸಿಯಲ್ಲಿ ರಿಜರ್ವೇಷನ್ ಕೊಡಬೇಕು ಎನ್ನತಕ್ಕಂಥಾದ್ದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಅಲ್ಪ ಸಂಖ್ಯಾತರಿಗೆ ನಿರುದ್ಯೋಗಿಗಳಿಗೆ ಇನ್ನೊಂದು ಅವಕಾಶವನ್ನು ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅಲ್ಪಸಂಖ್ಯಾತರು, ಕೀಳುಜಾತಿಯವರು ಮತ್ತು ಮೇಲು ಜಾತಿಯವರ ಎಂದರೆ ಯಾರು ?

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಶೋಷಕ ವರ್ಗ ಮೇಲು ಜಾತಿಯವರು, ಶೋಷಣೆಗೆ ಒಳಪಡುವವರು ಕೀಳು ಜಾತಿಯವರು.

ಶ್ರೀ ಪುಟ್ಟಸ್ವಾಮಯ್ಯ.—ಶೋಷಕರು ಯಾರು ಶೋಷಣೆಗೆ ಒಳಪಟ್ಟಿರುವವರು ಯಾರು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಬ್ಯಾಕ್‌ವರ್ಡ್ ಕ್ಲಾಸ್ ಎಂದು ಗೊತ್ತುಮಾಡಿ ಅವರಿಗಾಗಿ ೩ ಪರ್ಸೆಂಟ್ ಅಪಾಯಿಂಟ್‌ಮೆಂಟ್ ಗೊತ್ತುಮಾಡಿರತಕ್ಕದ್ದು ಬಹಳ ಅಭಿನಂದನೀಯವಾದ ವಿಷಯ. ರಾಜ್ಯಸರ್ಕಾರ ಮಾಡಿದಂಥ ಮೆರಿಟ್ ಲಿಸ್ಟ್‌ನಲ್ಲಿ ಪರಿಶಿಷ್ಟ ವರ್ಗದ ಸಂಖ್ಯೆಯನ್ನೂ ಪರಿಗಣಿಸಬೇಕು, ರಿಸರ್ವ್‌ನಲ್ಲಿ ತರಬಾರದು ಎಂದು ಹೊಸ ಆರ್ಡರ್ ತಂದಿರತಕ್ಕದ್ದು ಅಭಿನಂದನೀಯವಾದುದು.

೨-30 P. M.

ಶ್ರೀ ಎಸ್ ವೈ. ಪಾಟೀಲ್.—ಶೋಷಣೆ ಯಾರು ಮಾಡುತ್ತಾರೆ, ಯಾರು ಮಾಡಿಸಿ ಕೊಳ್ಳುತ್ತಾರೆ ಎನ್ನುವುದನ್ನು ಹೇಳಿದರೆ ಅವರ ಬಗ್ಗೆ ಕಾನ್‌ಸ್ಟಿಟ್ಯೂಷನಲ್ ಬಜೆಟ್ ಮಾಡುವುದಕ್ಕೆ ಅಥವಾ ಏನಾದರೂ ಶಾಸನ ಮಾಡಲಿಕ್ಕೆ ಅವಕಾಶವಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಎಮರ್ಜನ್ಸಿ ಬಂದಿದ್ದು ಶೋಷಿತವರ್ಗದವರಿಂದಲೇ. ೨೦ ಪಾಯಿಂಟ್ ಆರ್ಥಿಕ ಕಾರ್ಯಕ್ರಮಗಳು ಬಂದಿರುವುದು ಶೋಷಿತವರ್ಗವನ್ನು ಮಟ್ಟ ಹಾಕುವುದಕ್ಕೆ. ನಿರ್ಗತಿಕರು, ಬಡವರು ರಾಜ್ಯಾಂಗದ ನಿಯಮಾವಳಿಯ ಸ್ವಾತಂತ್ರ್ಯದ ಸವಿಯನ್ನು ಕಾಣದೆ ನೂರಕ್ಕೆ ೮೦ ಭಾಗ ಇದ್ದಾರೆಂದು ಹೇಳಬೇಕಾಗಿದೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಮುನಿಸಿಪಾಲಿಟಿಯಲ್ಲಿ, ಕಾರ್ಪೋರೇಷನ್‌ನಲ್ಲಿ, ಸ್ಟ್ಯಾಟುಟರಿ ಬೋರ್ಡ್‌ಗಳಲ್ಲಿ ೧೦೦ಕ್ಕೆ ೧೮ ಭಾಗ ಹುದ್ದೆಗಳನ್ನು ಮೀಸಲಾಗಿಡಬೇಕು ಎನ್ನತಕ್ಕ ಸರ್ಕಾರಿ ಹುಕುಂ ಇದ್ದರೂ ಪರಿಪಕ್ವವಾಗಿ ನಡೆಯುತ್ತಾ ಇಲ್ಲ. ಇದರ ಬಗ್ಗೆ ಆಗಿಂದಾಗ್ಗೆ ವರದಿಯನ್ನು ತರಿಸಿಕೊಳ್ಳಬೇಕು ಎನ್ನತಕ್ಕ ಅಂಶವನ್ನು ನಾನು ಹೇಳುತ್ತೇನೆ.

ಲೋಕಲ್ ಕ್ಯಾಂಡಿಡೇಟ್ಸ್‌ನ್ನು ಅಪಾಯಿಂಟ್‌ಮೆಂಟ್ ಮಾಡುವಾಗ ಪರಿಶಿಷ್ಟ ವರ್ಗದವರಿಗೆ ನೇರವಾಗಿ ಮಾಡಿಕೊಳ್ಳಬಹುದು ಎಂದು ಸರ್ಕಾರದ ಹುಕುಂ ಇದೆ, ಸುಮಾರು ೩೫೦ ಕ್ಯಾಂಡಿಡೇಟ್ಸನ್ನು ಈ ರೀತಿ ನೇಮಿಸಿದ್ದಾರೆ. ಇವರಲ್ಲಿ ೧೦೦೦ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಇದ್ದಾರೆ ಎಂದು ವರದಿಯಲ್ಲಿದೆ. ಐಎಎಸ್ ಮತ್ತು ಐ.ಪಿ.ಎಸ್. ವಿಷಯದಲ್ಲಿ ಎರಡು ಮಾತುಗಳನ್ನು ಹೇಳುತ್ತೇನೆ.

ಐ. ಎ. ಎಸ್. ೨೦೦ ಇದೆ, ಐ.ಪಿ.ಎಸ್. ೧೦೧ ಇದೆ. ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸಿನಲ್ಲಿ ೧೬ ಐ.ಎ.ಎಸ್. ಮತ್ತು ಐ. ಪಿ. ಎಸ್. ೮ ಎಂದು ಇದೆ. ಇವರೆಲ್ಲ ಯಾವ ಯಾವ ಸ್ಥಾನಗಳಲ್ಲಿದ್ದಾರೆ. ಡೆಪ್ಯುಟಿ ಕಮಿಷನರ್ಸ್ ಎಷ್ಟು ಸ್ಥಾನಗಳಲ್ಲಿದ್ದಾರೆ, ಸೂಪರಿಂಟೆಂಡೆಂಟ್ ಪೋಲೀಸ್ ಎಷ್ಟು ಸ್ಥಾನಗಳಲ್ಲಿದ್ದಾರೆ ಎಂದು ನೋಡಿದರೆ ಬಹಳ ಕಡಿಮೆ ಇದೆ. ಇವರೆಲ್ಲರನ್ನೂ ಆಯಾಯ ಸ್ಥಾನಗಳಲ್ಲಿಟ್ಟು ಉತ್ತೇಜನ ಕೊಡಬೇಕು ಎನ್ನತಕ್ಕ ಅಂಶವನ್ನು ಹೇಳುತ್ತೇನೆ. ಫಜಲಾಲಿ ಕಮಿಷನ್‌ನವರು ಶೇಕಡ ೫೦ ಭಾಗ ಹೊರಗಿನವರನ್ನು ಮತ್ತು ೫೦ ಭಾಗ ಕರ್ನಾಟಕ ರಾಜ್ಯದವರನ್ನು ರೆಕಮೆಂಡ್ ಮಾಡಿದ್ದಾರೆ. ೬೮ ಐ.ಎ.ಎಸ್., ಐ.ಪಿ.ಎಸ್. ೩೮ ಎನ್ನುವುದನ್ನು ನೋಡಿದರೆ ಹೊರಗಡೆಯಿಂದ ಬರತಕ್ಕವರು ಜಾಸ್ತಿ ಇದ್ದಾರೆ. ಇದರಲ್ಲಿ ಪರಿಶಿಷ್ಟವರ್ಗ ಮತ್ತು ಪರಿಶಿಷ್ಟ ಜನಾಂಗದವರು ಅವರ ಕೋಟಾವನ್ನು ಸರಿಯಾದ ರೀತಿಯಲ್ಲಿ ಪಡೆಯುವುದಕ್ಕೆ ವ್ಯವಸ್ಥೆ ಮಾಡಬೇಕು. ಡೆಪ್ಯುಟೇಷನ್ ಮಾಡುವಾಗ ಫಾರಿನ್ ಪ್ರೋಗ್ರಾಮ್ಸ್‌ಗೆ ಪರಿಶಿಷ್ಟ ವರ್ಗದವರನ್ನು ಕಂಪ್ಲೀಟಾಗಿ ಬಿಟ್ಟು ಬಿಡುತ್ತಿದ್ದೀರಿ, ಅದಕ್ಕೆ ಅವಕಾಶ ಕೊಡಬೇಕು. ಮತ್ತು ಇನ್ ಎಫಿಷಿಯನ್ಸಿ ಕರಪ್ಟ್ ಪ್ರಾಕ್ಟೀಸ್ ರೂಲ್ ೨೮೫ ಹಾಕಿಬಿಟ್ಟು ಎಲ್ಲರನ್ನೂ ರಿಟೈರ್ ಮಾಡಿದಿರಲ್ಲ, ಆ ಸಂಖ್ಯೆಯ ಪ್ರಮಾಣ ನೋಡಿದರೆ, ಇದರಲ್ಲಿ ಸಂಪೂರ್ಣವಾಗಿ ಅಲ್ಪಸಂಖ್ಯಾತರು, ಪರಿಶಿಷ್ಟ ವರ್ಗದವರು, ಹಿಂದುಳಿದ ವರ್ಗದವರು ಇದ್ದಾರೆಂದು ಈ ವರದಿಯಲ್ಲಿ ಕಾಣುತ್ತದೆ. ಆದುದರಿಂದ ಪರಿಶಿಷ್ಟ ವರ್ಗ ಮತ್ತು ಅಲ್ಪಸಂಖ್ಯಾತರಿಗೆ ಆಯಾಯ ಡಿಪಾರ್ಟ್‌ಮೆಂಟಿನಲ್ಲಿ ಸ್ಕ್ರೀನಿಂಗ್ ಕಮಿಟಿಯವರು ಕ್ಯಾಬಿನೆಟ್ ಮಿನಿಸ್ಟರ್ ನೋಟೀಸಿಗೆ ತಂದ ಮೇಲೆ ಅವರ ಬಗ್ಗೆ ಕ್ರಮಂತೆಗೆದುಕೊಳ್ಳಬೇಕು, ಕೆಳದರ್ಜೆಯಲ್ಲಿ ಅನ್ಯಾಯವಾಗುತ್ತಾ ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ನಾವು ಆಕ್ಟ್ ಮಾಡಿ ಕಳಿಸಿದೆವು. ಆದರೆ ಅದರಲ್ಲಿ ೧೫ ಮಂದಿ ಸದಸ್ಯರನ್ನು ನೇಮಿಸುವಾಗ ಪರಿಶಿಷ್ಟ ವರ್ಗದವರು ಮತ್ತು ಪರಿಶಿಷ್ಟ ಜನಾಂಗದವರನ್ನು ಅದರಲ್ಲಿ ಸೇರಿಸುವುದು ಬಿಟ್ಟು ಹೋಗಿದೆ ಏಕೆ ಬಿಟ್ಟು ಹೋಗಿದೆಯೋ ಗೊತ್ತಿಲ್ಲ. ಅದನ್ನು ಮಾನ್ಯಮುಖ್ಯ ಮಂತ್ರಿಗಳು ಸರಿಪಡಿಸಬೇಕು ಎನ್ನತಕ್ಕ ಅಂಶವನ್ನು ಹೇಳುತ್ತೇನೆ. ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಸಿವಿಲ್ ರೈಟ್ ಸೆಲ್ ಮಾಡಿದ್ದಾರೆ. ಇದು ಬಂದ ಮೇಲೆ ದುರ್ಬಲವರ್ಗದವರಿಗೆ ವಿಶೇಷವಾಗಿ ರಕ್ಷಣೆ ದೊರೆತಿದೆ. ದುರ್ಬಲವರ್ಗದವರನ್ನು ಶೋಷಣೆ ಮಾಡತಕ್ಕವರಿಗೆ ಶಿಕ್ಷೆ ಮಾಡತಕ್ಕದ್ದನ್ನು ವರದಿ ಮಾಡಿದ್ದೀರಿ. ಮಹಾತ್ಮಾಗಾಂಧಿಯವರು ಹೇಳಿದ ಹಾಗೆ ರಚನಾತ್ಮಕ ರೀತಿಯಲ್ಲಿ ಸವರ್ಣ ಹಿಂದುಗಳನ್ನು ಬೆಂಬಲಿಸತಕ್ಕ, ಅವರ ವಿಶ್ವಾಸವನ್ನು ಗಳಿಸತಕ್ಕ, ಪ್ರಚಾರ ಪ್ರಕಟಣೆ, ಸಹಪಂಕ್ತಿಭೋಜನ ಮುಂತಾದುವುಗಳನ್ನು ಹಿಂದೆಮಾಡುತ್ತಿದ್ದ ಹಾಗೆ ಈಗಲೂ ಈ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಇರುವುದು ಜಾಗ್ರತೆಯಾಗಿ ಹೋಗಿ ದುರ್ಬಲವರ್ಗ ಮತ್ತು ಹರಿಜನರು ಮಾನವರಾಗಿ ಸಮಾಜದಲ್ಲಿ ಮನುಷ್ಯರಂತೆ ಬಾಳುವಹಾಗೆ ಮಾಡಬೇಕು ಎಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SMT. SUMATI B MADIMAN (Dharwar Rural)—Madam Speaker, I support the demands placed by the Hon'ble Chief Minister before the House.

At the outset I would like to congratulate the Chief Minister for having set the administration at a considerable faster speed. His keen interest and efforts in implementing the 20 point programme and speeding up the major and minor Irrigation projects and the important hydro-electric projects has boosted up the hope of the people. His efforts have speed up the work no doubt, but not to the extent to satisfy the impatient mass. It is a known fact that developmental works cannot be implemented or completed in a day or a week. But all the same, certain basic needs like drinking water, medical centres and approach roads can be taken up wherever there is a need. I suggest that if the Chief Minister bestows more

attention and gets the statistics of the whole State the disparity in the sanctioning - of the these programmes in the different districts could be easily detected.

Once I had told the Hon'ble Chief Minister that getting work done was like participating in an obstacle race. One has to run along with the concerned file from the Taluk level to the State level. I sincerely hope that this system has charged. Just for a silly clarification the files are sent back and it takes one to two years or even more. I have had such problems in my taluk which have taken 25 years and 16 years to take decisions.To give an example, the Public Works Department had put up a plan of 50 miles of roads in each Taluk and with all zeal and enthusiam the scheme of one special road was started on the 15th of August 1972. But latter due to financial problems caused due to the famine and drought conditions in the State all these works were stopped. After insisting and arguing this work has been taken up this year. This delay has upset the people. The reason for saying this is I strongly suggest that before announcing and assuring people of any schemes and plans to be implemented let the Hon'ble Ministers think twice because later we have to face the people and give explanations and excuses, which often appear lame, and to convince the impatient the people becomes a problem. You are aware, Madam, how impatient the people have bec me specially in rural areas

Medical centers wherever necessary should be upgraded and proper quota of medicines should be supplied—just a limited quantity is a half-hearted business which is no good, it only leaves people disgruntled. When they are in need of medicines, they are forced to go nearby towns. As the Medical Centre cannot cater to their needs, I suggest they should be made to pay for their medicine because in any case they are forced to pay exhorbitant rates to the doctors in towns and cities. I feel a decision has to be taken about what commodity should be given free because anything given free has no value.

Family Planning also needs extra and special attention, everyone is aware of this burning problem of the day which i the cause of other problems, such as scarcity of every commodity and facility. Due to malnutrition unhealth babies are born, blind, mentally retarded etc. Therefore, drastic action will have to be taken sooner or later, and serious thought will have to be given to this matter.

Madam Speaker, regarding maintenance of discipline and conrol the members of the Legislature and the Parliament have been informed not to use influence to help Government servants. Even

earlier we were requested not to involve ourselves in the transfers, promotions etc. But there have been cases where people have approached me and religiously following the instructions I sent them away saying it had to be done through the proper channel and I could not or would not do anything in the matter. But I found later that they could get their work done using somebody's influence. I will give an example of a case which occured last year—about March or April A doctor from K. M C Hubli was transferred to Mysore on promotion and also in the interest of the public. He approached me to get it cancelled foregoing his promotion and to be retained in Hubli. I told him I could not interfere in this matter He used some other influence and got it cancelled and after returning, rang up and proudly told me that he got his work done, There have been many cases of this kind in other Departments too. This makes one look a fool in the eyes of the public. So, I request such embrassing situations should be avoided.

Regarding Agriculture Madam, I strongly suggest the Agricultural Department, the Irrigation Department, Revenue Department and the Power Department should have proper Co-ordination so as to make help to solve the problems of the Agriculturists. More levy is needed -foodgrains is essential, More foodgrains is needed-conservation of water is essential. water for irrigation, for pumpsets is needed-power is needed With these three necessities the Agricultural Department can help the farmer To solve the legal problems of the rural folk specially women, widows, and ignorant farmers For example, a case of a widow whose husband has motgaged a portion of his land to the Society and for the other portion the records show two names jointly of which the widow is ignorant. She is not aware that in the record of rights the heirs name will have to be entered. She approached the Talati. He demanded money She approached me and I could guide her and complained to the Deputy Commissioner, who took immediate action But there will be thousands of such cases where due to ignorance the poor farmer looses his land,

I suggest mobile legal aid should be provided Sir, I know for sure you will give serious thought to this and implement it.

The Nationalisation of transport buses has been a bold and progressive step. To make this efficient and paying concern, I would like to suggest the Division-wise Corporations could be formed, to minimise the work load as this will be too unwidely for one Corporation to manage The altertness of the topmost officials is praise worthy and I am happy with the efficiency in my District. I wish this was the case everywhere. A sincere and honest officer can do wonder for the State on the whole. It is a pity that there are a

few officers who still belive in the British autocratic ways and try to be pompous. But a rap from the higher authorities will get them right.

Law and order situation is under control which is a healthy signs The Civil Rights Cess is taking prompt action to redress the grievance. of the Harijans—the other reports are also good. With all this I have a few observations to bring to the notice of the Government. The attitude of the constables needs a change. They are either lethargic and indifferent or aggressive and trying to assert his authorities. He loves to shot at the villagers when they cross the roads and confuse them that they run helter and skelter disrespecting the traffic. It is amusing to watch the traffic Police—often he makes traffic signs complicated by which all vehicles stop or all move at the same time. Recntly, I read an article on a British Policeman. He is depicted as a friend and guide and he goes out of his way to help people. The British take care to see their own Police were friends to the people and our police were tought to harass the people. This attitude has to charge fast and they need tutions in good behaviour and polite manner and when to use force and strong words. To render help to these involved in accidents on high ways mobile police squads should be provided. Because by the time the police come to know about it quite some time lost. Again the question to which Police Station this has to be informed. It takes hours to disposes of these cases. Bullock carts should be provided reflectors as on highways specially in the Corporation areas, they do not use a latern which is tied under the cart, Therefore, when two vehicles come from opposite direction the cart is not visible and accidents occcur, where the bullocks get killed and the cartsmen is hurt. These reflectors will help the visibility. Sir, I would suggest that when more world Bank schemes are sanctioned to the State let them be implemnted in other Backward Districts. When you have changed integrated Mysore State into Karnataka equal distribution of such schemes will bring joy to the people. There are a few officers of different Departments who belonged to the Bombay Karnataka, Hyderbad Karnataka and they have problems, which have not been solved so far. So, a quick decision should be taken and solve them for once and all. Before I conclude I would like to stress on an important point, that is, when rules are made, let them be followed by each and everyone, and contradictory instructions and action should be put a stop to. Then only we will be able to progress speedily. We have still a long way to go. With these words I conclude my speech and Thank the Chair for having given me an opportunity to speak.

† ಶ್ರೀ ಕೆ.ಎಚ್. ಹನುಮೇಗೌಡ (ಹಾಸನ).— ಸನ್ಮಾನ್ಯ, ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ, ಕೃಷ್ಣ ಬೇಸಿನ್ ಮತ್ತು ಕಾವೇರಿ ಬೇಸಿನ್‌ನಲ್ಲಿ ಬೃಹತ್ ನೀರಾವರಿ ಪ್ರಾಜೆಕ್ಟುಗಳನ್ನು ಕೊನೆಯ ಪಕ್ಷ ಮೊದಲನೆಯ ಅಥವಾ ಎರಡನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ತೆಗೆದುಕೊಂಡು ಮಾಡಿದ್ದರೆ ಬಹುಶಃ ಇತ್ತೀಚಿನ ದುಸ್ಥಿತಿ ದೇಶಕ್ಕೆ ಬರುತ್ತಾ ಇರಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಈಗ ಈ ಯೋಜನೆಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇವರು ಈಗ ಎಲ್ಲಿ ವಿಫಲರಾಗಿದ್ದಾರೆಂದರೆ, ಕೇಂದ್ರ ಸರ್ಕಾರಕ್ಕೆ ತಮ್ಮ ಪ್ರಭಾವ ಬೀರುವುದರಲ್ಲಿ, ಈ ಪ್ರಾಜೆಕ್ಟುಗಳಿಗೆ ಬಹುಮುಖ್ಯವಾದಂಥ ಗ್ರಾಂಟನ್ನು ತರುವುದರಲ್ಲಿ. ಈ ಪ್ರಾಜೆಕ್ಟುಗಳಿಗೆ ಅಲ್ಪಸ್ವಲ್ಪ ಖರ್ಚುಮಾಡಿ ಇನ್ನೂ ಅವುಗಳು ಹತ್ತಿಪ್ಪತ್ತು ವರ್ಷವಾದರೂ ಮುಗಿಯುವ ಮಟ್ಟಕ್ಕೆ ಬರುವುದಿಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಆದ್ದರಿಂದ ಸರ್ಕಾರದವರು ನಿರ್ಭೀತಿಯಿಂದ ಅಂಜಿಕೆಯನ್ನು ಬಿಟ್ಟು, ಹೆದರದೆ ಕೇಂದ್ರ ಸರ್ಕಾರಕ್ಕೆ ತಮ್ಮ ಮನವಿಯನ್ನು ಕೊಟ್ಟು ಇನ್ನು ನಾಲ್ಕೈದು ವರ್ಷಗಳಲ್ಲಿ ಯಾದರೂ ಈ ಯೋಜನೆಗಳನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಎರಡನೆಯದಾಗಿ, ಯಗಚಿ ನದಿ ನಮ್ಮ ತಾಲ್ಲೂಕಿನಲ್ಲಿ ಹರಿಯುತ್ತಿದೆ. ಇದು ಕಳೆದ ಹತ್ತು ವರ್ಷಗಳಿಂದಲೂ ಬರಗಾಲ ಪೀಡಿತವಾಗಿರತಕ್ಕ ಪ್ರದೇಶ. ಈ ಮೊದಲು ಕೆಲವೇ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರೆ, ಈ ಪ್ರಾಜೆಕ್ಟಿನಿಂದ ಸುಮಾರು 5೦ ಸಾವಿರ ಎಕರೆ ನೀರಾವರಿಯಾಗುತ್ತಿತ್ತು ಎಂದು ನಾನು ಪದೇ ಪದೇ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈವರೆಗೂ ಇದರ ಬಗ್ಗೆ ಸರ್ಕಾರದವರು ಯಾವ ಗಮನವನ್ನೂ ಕೊಟ್ಟಿಲ್ಲ. ಈಗಲಾದರೂ ಸರ್ಕಾರದವರು ಇದರ ಬಗ್ಗೆ ಆದ್ಯ ಗಮನ ಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಚಾರ ಏನೆಂದರೆ, ಇದನ್ನು ಮಾಡಿದರೆ ಕೆಳಮಟ್ಟದಲ್ಲಿರತಕ್ಕ ಪ್ರಾಜೆಕ್ಟುಗಳಿಗೆ ನೀರು ಸಾಕಾಗುವುದಿಲ್ಲ ಎನ್ನುವುದು ಇದೆ. ಪಶ್ಚಿಮ ಘಟ್ಟಗಳಲ್ಲಿ ಸಾವಿರಾರು ಟಿ.ಎಂ.ಸಿ. ಅಷ್ಟು ನೀರು ಹರಿದು ಅರಬ್ಬಿ ಸಮುದ್ರವನ್ನು ಸೇರುತ್ತದೆ. ಮಧ್ಯದಲ್ಲಿ ಒಂದು ಡ್ಯಾಂ ಅನ್ನು ಕಟ್ಟಿ ನೀರನ್ನು ಡೈವರ್ಟ್ ಮಾಡಿ ಕೆಲವಾರು ಲಕ್ಷ ಎಕರೆಗೆ ನೀರಾವರಿ ಮಾಡಲಿಕ್ಕೆ ಅವಕಾಶವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಕೊಡಗು ಜಿಲ್ಲೆಯಲ್ಲಿ ಪರ್ತಿ ನದಿ ಯೋಜನೆಯನ್ನು ಕಾರ್ಯಗತ ಮಾಡಿ ನೀರನ್ನು ಡೈವರ್ಟ್ ಮಾಡಿದರೆ ಕೊನೆಯ ಪಕ್ಷ ಎರಡು ಮೂರು ಸಾವಿರ ಎಕರೆಗೆ ನೀರು ಸಿಕ್ಕುತ್ತದೆ. ಇದನ್ನೂ ಸಹ ಮಾಡಿಲ್ಲ. ಇದನ್ನೂ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಮಾನ್ಯ ಭೈರಪ್ಪಾಜಿಯವರು ಸದನದಲ್ಲಿಲ್ಲ. ಅವರು ಇದ್ದಿದ್ದರೆ ಚೆನ್ನಾಗಿತ್ತು. ಏಕೆಂದರೆ ಅವರು ಈ ಪಬ್ಲಿಕ್ ಸರ್ವೀಸ್ ಕಮಿಷನ್‌ನ ಬಗ್ಗೆ ಬಹಳ ಹೆಮ್ಮೆಯಿಂದ ಏನು ಹೇಳಿಕೊಳ್ಳುತ್ತಿದ್ದರು ಎಂದರೆ ಅಲ್ಲಿ ಅನ್ಯಾಯ ನಡೆಯುವುದಿಲ್ಲ. ಅಲ್ಲಿ ಎಲ್ಲಾ ನಿಷ್ಠಾವಂತರೇ ಇದ್ದಾರೆ ಎಂದು. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಅಲ್ಲಿ ಏನು ಅನ್ಯಾಯಗಳು ನಡೆಯುತ್ತಿವೆ ಅವುಗಳನ್ನು ಇದ್ದುದನ್ನು ಇದ್ದಹಾಗೆ ಸರ್ಕಾರದ ಗಮನಕ್ಕೆ ತಂದರೆ ಮುಂದೆ ಇದನ್ನು ಸರಿಪಡಿಸುವುದಕ್ಕೆ ಅನುಕೂಲವಾಗಬಹುದು ಎಂದು ಹೇಳುತ್ತಿದ್ದೇನೆ. ಈ ಪಬ್ಲಿಕ್ ಸರ್ವೀಸ್ ಕಮಿಷನ್‌ನಲ್ಲಿ ಇರತಕ್ಕಂಥ ಮೆಂಬರ್ಸ್ ಪೈಕಿ 4–5 ಜನರನ್ನು ಬಿಟ್ಟರೆ ಇನ್ನು ಉಳಿದವರೆಲ್ಲರೂ ತಮಗೆ ಮನಸ್ಸಿಗೆ ಬಂದಷ್ಟು ದುಡ್ಡನ್ನು ಹೊಡೆಯುತ್ತಿದ್ದಾರೆ. ಆ 4 5 ಜನ ನಿಷ್ಠೆಯಿಂದ, ನ್ಯಾಯದೃಷ್ಟಿಯಿಂದ ತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದಾರೆ. ಉಳಿದವರು ಏನು ಹೇಳುತ್ತಾರೆ ಎಂದರೆ, ನಿಮಗೆ ಕೆಲಸಬೇಕು ತಾನೆ, ಇಷ್ಟು ದುಡ್ಡು ಕೊಡಿ ನಿಮಗೆ ಕೆಲಸ ಸಿಕ್ಕದೇ ಹೋದರೆ ನಿಮ್ಮ ದುಡ್ಡನ್ನು ವಾಪಸ್ಸು ಕೊಡುತ್ತೇವೆ ಎಂದು ಹೇಳುತ್ತಾರೆ. ಇದನ್ನು ಅನೇಕ ಜನ ನನ್ನಲ್ಲಿ ಹೇಳಿದ್ದಾರೆ. ನಾನು ಹೇಳುವುದರಲ್ಲಿ ತಮಗೆ ನಂಬಿಕೆ ಬಾರದಿದ್ದರೆ ಅಲ್ಲಿನ ಪ್ರತಿಯೊಂದು ಕಲ್ಲು ಕಂಬಗಳನ್ನೂ ಕೇಳಿ, ಪ್ರತಿಯೊಂದು ಗೋಡೆಗಳನ್ನೂ ಕೇಳಿ ಅವೇ ಹೇಳುತ್ತವೆ. ಇಂಥವರು ಇಷ್ಟು ದುಡ್ಡು ಕೊಟ್ಟರು ಎಂದು. ಅಲ್ಲದೆ ಕೆಲಸಕ್ಕೋಸ್ಕರವಾಗಿ ದುಡ್ಡು ಕೊಟ್ಟವರೂ ಕೂಡ ನಾನು ಇಷ್ಟು ಕೊಟ್ಟೆ, ನಾನು ಇಷ್ಟು ಕೊಟ್ಟೆ ಎಂದು ಹೇಳುತ್ತಾರೆ. ಈ ಪಬ್ಲಿಕ್ ಸರ್ವೀಸ್ ಕಮಿಷನ್‌ನಿಂದ ಸರ್ಕಾರಕ್ಕೆ ಯಾವತ್ತೂ ಮಾನ ಬರುವುದಿಲ್ಲ. ಅಲ್ಲಿ

ಯಾರಿಗೆ ಕೆಲಸ ಸಿಕ್ಕುತ್ತದೆ ಎಂದರೆ ಪ್ರಭಾವಶಾಲಿಗಳ ಮಕ್ಕಳಿಗೆ ಕೆಲಸ ಸಿಕ್ಕುತ್ತದೆ. ದುಡ್ಡಿರುವವರ ಮಕ್ಕಳಿಗೆ ಕೆಲಸ ಸಿಕ್ಕುತ್ತದೆ. ಆದರೆ ಬಡವರ ಮಕ್ಕಳಿಗೆ, ದುಡ್ಡು ಇಲ್ಲದವರ ಮಕ್ಕಳಿಗೆ ಕೆಲಸ ಸಿಕ್ಕುವುದಿಲ್ಲ. ಪಾಪ ಅವರು ಊರಿಂದೂರಿಗೆ ಬಂದು ಗೋಡೆ ಗೋಡೆಗೂ ಕೈಮುಗಿದು ಹೋಗುತ್ತಾರೆ, ಅವರಿಗೆ ಕೆಲಸ ಸಿಕ್ಕುತ್ತಿಲ್ಲ. ಯಾರಿಗೆ ನಿಜವಾಗಿ ಯೋಗ್ಯತೆ ಇರುತ್ತದೆ ಅವರಿಗೆ ಕೆಲಸ ಸಿಕ್ಕುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ಇವತ್ತು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒಂದು ಮಾತನ್ನು ಹೇಳುತ್ತೇನೆ. ತಾವು ತಪ್ಪು ತಿಳಿದುಕೊಳ್ಳಬಾರದು. ಇವತ್ತು ಇಂತಿಂಥ ಪೋಸ್ಟುಗಳು ಖಾಲಿ ಇವೆ, ಯಾರು ಬೇಕಾದವರೂ ಹರಾಜಿನಲ್ಲಿ ಕೂಗಬಹುದು ಎಂದು ಪ್ರತಿಯೊಂದು ಪೋಸ್ಟನ್ನೂ ಹರಾಜು ಹಾಕಿ. ಇದರಿಂದ ಸರ್ಕಾರಕ್ಕಾದರೂ ದುಡ್ಡು ಬರುತ್ತದೆ ಸ್ವಾಮಿ, ಇವತ್ತು ಅಧಿಕಾರದಲ್ಲಿರುವವರು ಲಂಚ ತೆಗೆದುಕೊಳ್ಳುತ್ತಾರೆ, ಅವರನ್ನು ಹಿಡಿಯ ಬೇಕೆಂದು ಹೋಗುತ್ತಾರೆ ಆದರೆ ಸ್ವಾಮಿ, ನಾನು ಹೇಳುತ್ತೇನೆ, ಕೆಲಸಕ್ಕೆ ಸೇರುವಾಗ ಅವರು ಕೇಳಿದಷ್ಟು ದುಡ್ಡು ಕೊಟ್ಟು ಸೇರಿದವನು ಆಮೇಲೆ ಸಂಪಾದನೆ ಮಾಡಿಕೊಳ್ಳದೇ ಬಿಡುತ್ತಾನೆಯೆ ? ನೀವು ಆ ರೀತಿ ಅವನನ್ನು ಹಿಡಿಯಬೇಕೆಂದಿದ್ದರೆ ಮೊದಲು ನಿಮ್ಮ ಆಡಳಿತವನ್ನು ಶುದ್ಧ ಮಾಡಿಕೊಳ್ಳಿ ಎಂದು ಹೇಳುತ್ತೇನೆ.

ಇನ್ನು ಬರಗಾಲ ಪೀಡಿತ ಪ್ರದೇಶದ ಬಗ್ಗೆ ಒಂದೆರಡು ಮಾತು ಹೇಳುತ್ತೇನೆ. ಕಳೆದ 8-10 ವರ್ಷಗಳಲ್ಲಿ ಯಾರು ಪ್ರಭಾವಕ್ಕೆ ಒಳಗಾಗಿಯೋ ಏನೋ ಕರ್ನಾಟಕದಲ್ಲಿ ! ಜಿಲ್ಲೆಗಳಲ್ಲಿ ಬರಗಾಲ ಇದೆ ಎಂದು ಕೇಂದ್ರಸರ್ಕಾರಕ್ಕೆ ಒಂದು ರಿಪೋರ್ಟನ್ನು ಕಳುಹಿಸಿದ್ದಾರೆ. ಮೊನ್ನೆ ಮಾನ್ಯ ಹುಚ್ಚು ಮಾಸ್ತಿಗೌಡರು ಹೇಳಿದರು ಈ ಬರಗಾಲವನ್ನು ನಾವು ಸರಿಮಾಡುತ್ತೇವೆ. 4 ಜಿಲ್ಲೆಗಳಲ್ಲಿ ಮಾತ್ರ ಬರಗಾಲವಿರುತ್ತದೆಂದು, ಸ್ವಾಮಿ, ನನ್ನ 30 ವರ್ಷಗಳ ಅನುಭವದಲ್ಲಿ ಹೇಳುತ್ತೇನೆ. ಮೈಸೂರು ಮಂಡ್ಯ, ಹಾಸನ ಪ್ರದೇಶದಲ್ಲಿ ಪಶ್ಚಿಮದಿಂದ ಬರುವ ಮಳೆ ಒಂದು ಕಡೆ ನಿಂತು ಹೋಗುತ್ತದೆ, ಪೂರ್ವದ ಕಡೆಯಿಂದ ಬರುವ ಮಳೆ ಒಂದು ಕಡೆ ನಿಂತು ಹೋಗುತ್ತದೆ. ಇದರಿಂದಾಗಿ ಈ ಭಾಗದಲ್ಲಿ ನಿರಂತರವಾಗಿ ಮಳೆಯಾಗುವುದಿಲ್ಲ. ಸರ್ಕಾರದವರು ನೋಡಿದರೆ ಆವರೇಜ್ ಎಷ್ಟು ಮಳೆಯಾಯಿತು ಎಂದು ಲೆಕ್ಕ ತೆಗೆದುಕೊಳ್ಳುತ್ತಾರೆ. ಕೆಲವು ಸಂದರ್ಭಗಳಲ್ಲಿ ಯದ್ವಾತದ್ವಾ ಮಳೆಯಾಗಿ ಇಟ್ಟ ಬೆಳೆಯೆಲ್ಲಾ ಕೊಚ್ಚಿ ಹೋಗುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ 3 ತಿಂಗಳಾದರೂ ಮಳೆ ಬರುವುದಿಲ್ಲ. ಅಲ್ಲಿನ ಜನ ಮಂತ್ರಿಗಳು ಬಂದಾಗ ಕೈಮುಗಿದು ಹಾರ ಹಾಕುತ್ತಾರೆ. ಆದರೆ ನೀವು ಆ ಜನಗಳ ಕಷ್ಟ ಕಣ್ಣೆತ್ತಿಯೂ ಕೂಡ ನೋಡುವುದಿಲ್ಲ. ಈ ಮಾತನ್ನು ನಾನು ಹಗುರವಾಗಿ ಹೇಳುತ್ತಿಲ್ಲ. ಅಲ್ಲಿನ ಜನಗಳು ಉಪವಾಸವಿದ್ದಾದರೂ ನಿಮ್ಮ ಟ್ಯಾಕ್ಸನ್ನು ಕೊಡುತ್ತಾರೆ. ಅವರಿಗೆ ನೀವು ಅನ್ಯಾಯ ಮಾಡಬೇಡಿ ಸ್ವಾಮಿ, ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಸಾರಿ ಕೇಂದ್ರ ಸರ್ಕಾರದಿಂದ ಸುಮಾರು 10-15 ಜನ ಬಂದಿದ್ದರು. ಅವರ ಜೊತೆಯಲ್ಲಿ ಪ್ರಯಾಣ ಮಾಡತಕ್ಕಂಥ ಒಂದು ಅವಕಾಶ ನನಗೆ ಒದಗಿತು. ಅವರು ಮಾತನಾಡುತ್ತಿದ್ದ ರೀತಿಯೇ ಬೇರೆ ಇವತ್ತು. ನಮ್ಮ ಕಡೆ ಅವರು ನೋಡಲೇ ಇಲ್ಲ. ನಾನು ನಿಮ್ಮನ್ನು ಕೇಳುತ್ತೇನೆ ಕೇಂದ್ರದಿಂದ ಅವರು ಇಲ್ಲಿಗೆ ಬಂದು ಸರ್ವೆ ಮಾಡಬೇಕೆ ? ನಿಮಗೇ ಇದನ್ನು ಪರಿಹಾರ ಮಾಡುವುದಕ್ಕೆ ನಿಮ್ಮಲ್ಲಿ ಪುರುಷತ್ವ ಇಲ್ಲವೇ ಎಂದು ಕೇಳುತ್ತೇನೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇಂತಿಂಥ ಭಾಗಗಳನ್ನು ಸ್ಕೇರ್ಸಿಟಿ ಏರಿಯಗಳು ಎಂದು ಮಾಡಬೇಕೆಂದು ಸ್ಪೆಸಿಫಿಕೇಷನ್ ಕೊಟ್ಟಿದ್ದೀರಾ ?

ಶ್ರೀ ಕೆ. ಹೆಚ್. ಹನುಮೇಗೌಡ.—ನಾವು ಹೇಳಿದ್ದೇವೆ. ಇಷ್ಟೇ ಅಲ್ಲದೆ ತಮ್ಮ ಬೀಗರ ಮನೆಗೆ ಹೋಗುವಾಗ ತಾವು ಕೂಡ ನೋಡಿದ್ದೀರಿ. ಪ್ರಪಂಚದಲ್ಲಿಯೇ ಜಲಪ್ರಳಯವಾದರೂ ಈ ಮೈಸೂರು, ಮಂಡ್ಯ, ಹಾಸನ, ನಾಗಮಂಗಲ ಕಡೆಗಳಲ್ಲಿ ಮಳೆ ಬರುವುದಿಲ್ಲ ಇವತ್ತು ದೇಶ ಸಮೃದ್ಧವಾಗಿದೆ ಎಂದು ಹೇಳಬೇಕಾದರೆ ಪ್ರತಿಯೊಂದು ಜಿಲ್ಲಾ, ತಾಲ್ಲೂಕುಗಳೂ ಸಮೃದ್ಧವಾಗಿ ಆಗಬೇಕು. ತಾವು ಹತ್ತಾರು ವರ್ಷಗಳಿಂದ ಅಧಿಕಾರದಲ್ಲಿದ್ದೀರಿ. ಈ ಅಧಿಕಾರ ಇದ್ದರೆ ಎಷ್ಟು, ಹೋದರೆ ಎಷ್ಟು ಜನಗಳಿಗೆ ಅನುಕೂಲ ಮಾಡಿಕೊಡೋಣವೆಂದು ಹೋರಾಟ ಮಾಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೋರಾಟ ಏತಕ್ಕೆ ಮಾಡಬೇಕು ವಾಸ್ತವಾಂಶವನ್ನು ವಾಸ್ತವಾಂಶ ಎಂದು ಹೇಳಿ. ಅದನ್ನು ಮುಚ್ಚಿಡುವುದು ಏತಕ್ಕೆ ? ಏನು ಕೆಲಸ ಮಾಡಬೇಕೋ ಅದನ್ನು ಮಾಡೋಣ.

ಶ್ರೀ ಕೆ. ಹೆಚ್. ಹನುಮೇಗೌಡ.—ಮಾಸ್ತಾದುವುಗಳನ್ನು ಹೇಳಿ ನಾವು ಮಾಡಿಸುತ್ತೇವೆ ಎಂದು ಭರವಸೆ ಕೊಟ್ಟರೆ ಸಾಕು. ಆದರೆ ಅದು ಮತ್ತೆ ಹುಸಿ ಆಗಬಾರದು.

ಶ್ರೀ ಹೆಚ್. ಎಂ ಚನ್ನಬಸಪ್ಪ.—ನಿಮ್ಮ ಕೆಲಸ ಏನು ಹೇಳಿ, ಮಾಡೋಣ.

ಶ್ರೀ ಬಿ ಪುಟ್ಟಸ್ವಾಮಯ್ಯ.—ಮಾನ್ಯ ಚನ್ನಬಸಪ್ಪನವರು ಮೈಸೂರು ಕಡೆಯವರು, ಅವರು ಹೇಳಲಿ. ಯಾವ ಯಾವ ಭಾಗ ಏನೇನು ಎಂಬುದನ್ನು. ಶಾನುಭೋಗರು ಹೇಳುವಂತೆ ನೋಡೋಣ, ಮಾಡೋಣ ಎಂದು ಹೇಳಿದರೆ ಇದು ಸರ್ಕಾರದ ನೀತಿಯೆ ?

ಶ್ರೀ ಎಸ್. ಬಂಗಾರಪ್ಪ.—ಪತ್ರದ ಮೂಲಕ ಬರೆದು ಕೇಳುವುದು ದೊಡ್ಡದೋ ಅಥವಾ ಈ ಸಭೆಯಲ್ಲಿ ಅಧ್ಯಕ್ಷರ ಮೂಲಕ ಕೇಳುವುದು ಮುಖ್ಯವೋ ?

ಶ್ರೀ ಹೆಚ್. ಎಂ ಚನ್ನಬಸಪ್ಪ.—ರೈನ್ ಷ್ಯಾಡೋ ಏರಿಯಾಸ್ ಇದೆ ಎಂದು ಹೇಳಿದರು. ಅದು ಯಾವ ಯಾವ ಭಾಗಕ್ಕೆ ಸೇರಿದೆ ಎಂದು ಕೇಳಿದೆ ಅಷ್ಟೆ.

ಶ್ರೀ ಕೆ. ಹೆಚ್. ಹನುಮೇಗೌಡ.—ದೇಶದ ಸ್ಥಿತಿಗತಿಗಳನ್ನು ಅಳೆಯುವುದಕ್ಕೆ ಸರ್ಕಾರದ ಅಧಿಕಾರಿಗಳ ಒಂದು ದೊಡ್ಡ ಸೈನ್ಯವೇ ಇದೆ ಅವರನ್ನೇ ಕೇಳಿದರೆ ಹೇಳುತ್ತಾರೆ. ನಿಮ್ಮ ಮೈಸೂರು ಜಿಲ್ಲೆಯಲ್ಲಿ ಇರತಕ್ಕ ಜನ ಎಷ್ಟು ಕಷ್ಟವನ್ನು ಅನುಭವಿಸುತ್ತಿದ್ದಾರೆ ಎಂದು. ಈಗ ಈ ಪ್ರದೇಶದ ಹಿತದೃಷ್ಟಿಯಿಂದ ಕೇಂದ್ರಸರ್ಕಾರದವರು ಯಾವ ಯಾವಕೆಲಸಗಳನ್ನು ಮಾಡಬೇಕೋ ಅದನ್ನು ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪ್ಲಾನಿಂಗ್‌ಗೆ ಸಂಬಂಧಪಟ್ಟ ಹಾಗೆ ಹೇಳುತ್ತೇನೆ. ಭೂಗರ್ಭದಲ್ಲಿ ಜಲ ಇದೆ. ಸ್ವಾಮಿ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಹೋದವರ್ಷ ನಾನು ಹರಿಯಾಣ ರಾಜ್ಯಕ್ಕೆ ಹೋಗಿದ್ದಾಗ ಅಲ್ಲಿನ ಕೆಲಸಕಾರ್ಯಗಳನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಇಲ್ಲಿರುವಂತೆಯೇ ಅಲ್ಲೂ ಕೂಡ ಕೆಲವು ಕಡೆ ನೀರಾವರಿ ಇದೆ, ಕೆಲವು ಕಡೆ ಇಲ್ಲ, ಅಲ್ಲಿ ಒಂದು ಅಂಡರ್ ಗ್ರೌಂಡ್ ವಾಟರ್ ಲಿಫ್ಟಿಂಗ್ ಕಾರ್ಪೊರೇಷನ್ ಎಂದು ಇದೆ, ಅದರಲ್ಲಿ ಸುಮಾರು 25-30 ಹೈ ಪವರ್ ಮಿಷನ್ಸ್ ಇವೆ, ಟೆಕ್ನೀಷಿಯನ್ಸ್ ಇದ್ದಾರೆ. ಅವರು ಯಾರೊಬ್ಬರನ್ನೂ ಕೇಳುವುದಿಲ್ಲ. ಎಲ್ಲಿ ನೀರು ಬರುತ್ತದೆಂದು ಗೊತ್ತಾದರೆ ಅಲ್ಲಿ ಬೋರ್ ಹಾಕುತ್ತಾರೆ ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್‌ನವರು ಲೈನ್ ಎಳೆಯುತ್ತಾರೆ, ನೀರು ಬರದಿಲ್ಲ ಎಂದರೆ ಹಾಗೆಯೇ ಹೊರಟುಹೋಗುತ್ತಾರೆ ಆದರೆ ಅವರು ಮೂರು ಕಾಸೂ ಕೂಡ ಛಾರ್ಜ್ ಮಾಡುವುದಿಲ್ಲ. ಇಂಥ ಒಂದು ಕೆಲಸವನ್ನಾದರೂ ನೀವು ಮಾಡುವುದು ಬೇಡವೆ ? ಆ ರಾಜ್ಯದಲ್ಲಿ ವಿಶೇಷವಾಗಿ ಗೋಧಿಯನ್ನು ಬೆಳೆದು ಬೇರಕಡೆಗೂ ಕಳುಹಿಸುತ್ತಾರೆ. ಈ ವರ್ಷ ಇಷ್ಟು ನೀರಿನ ಚಾರ್ಜಸ್ ಕೊಡಬೇಕಾಗುತ್ತದೆ. ಕರೆಂಟ್ ಇಷ್ಟು ಉರಿಸಿರುತ್ತೀರೆಂದು ಎಲ್ಲ ಒಟ್ಟಿಗೆ ಇಷ್ಟುಕೊಡಬೇಕಾಗುತ್ತದೆಂದು ಬಿಲ್‌ಮಾಡಿ ಕಳುಹಿಸಿಕೊಡುತ್ತಾರೆ. ಈರೀತಿಯಾಗಿ ಮೂರು ಜಿಲ್ಲೆಗಳನ್ನು ಕವರ್ ಮಾಡಿರುತ್ತೇವೆ, ಇನ್ನು ಎರಡು ವರ್ಷಗಳಲ್ಲಿ ಉಳಿದ ಜಿಲ್ಲೆಗಳನ್ನು ಕವರ್‌ಮಾಡುತ್ತೇವೆಂದು ಹೇಳಿದ್ದಾರೆ. ನಮ್ಮಲ್ಲಿಯೂ ಅದೇರೀತಿ ಮಾಡಿದರೆ ಒಳ್ಳೆಯದೆಂದು, ಇದರಿಂದ ರೈತರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ; ನಾವು ಪದೇಪದೇ ಹೇಳುತ್ತಲೇ ಇದ್ದೇವೆ ಬರಗಾಲಬಂದಾಗ ಅಲ್ಲಿ ಇಲ್ಲಿ ಸ್ವಲ್ಪ ಕೆಲಸಗಳನ್ನು ಮಾಡಿ ದುಡ್ಡು ಲೂಟಿಮಾಡುತ್ತಿದ್ದಾರೆ. ದೇಶದ ಹಿತದೃಷ್ಟಿಯಿಂದ; ದೇಶದ ಜನ ಬಾಳಿ ಬದುಕಬೇಕು ಎನ್ನುವ ದೃಷ್ಟಿಯಿಂದ ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಇಲ್ಲ. ನಮ್ಮ ಜನ ನಿಮ್ಮನ್ನು ನಂಬಿಕೊಂಡು ಅಧಿಕಾರಕ್ಕೆ ತಂದು ಕೂಡಿಸಿದ್ದಾರೆ. ಆದ್ದರಿಂದ ನೂರಾರುವರ್ಷಗಳಕಾಲ ನೆನಪುಇಟ್ಟುಕೊಳ್ಳುವಂತ ಒಳ್ಳೆಯ ಕೆಲಸಗಳನ್ನು ಮಾಡಿ ಎಂದು ಹೇಳಬಯಸುತ್ತೇನೆ.

3-00 P M.

ಇನ್ನು ಜನರಲ್ ಆಡ್ಮಿನಿಸ್ಟ್ರೇಶನ್‌ಬಗ್ಗೆ ಹೇಳುವುದಾದರೆ ತುರ್ತುಪರಿಸ್ಥಿತಿಯನ್ನು ಜಾರಿಗೆ ತಂದಿರಿ. ತಂದ ಹೊಸದರಲ್ಲಿ 15-20 ದಿವಸಗಳು ಚನ್ನಾಗಿ ಕೆಲಸ ನಡೆಯಿತು. ಯಾರೋ ಶಾಸ್ತ್ರಗಾರನ ಹತ್ತಿರ ಹೋಗಿ ಶಾಸ್ತ್ರ ಕೇಳಿದರಂತೆ, ದುಡ್ಡಿಗೆ ಕಷ್ಟ, ಮನೆಯಲ್ಲಿ ಮಕ್ಕಳಿಗೆ ಕಾಯಿಲೆ, ಏನುಮಾಡುವುದೆಂದು. ಅದಕ್ಕೆ ಶಾಸ್ತ್ರಗಾರ ಹೇಳಿದ ಒಂದೆರಡುವರ್ಷ ಕಳೆದಮೇಲೆ ಎಲ್ಲ ಸರಿಹೋಗುತ್ತದೆಂದು. ಆಮೇಲೆ ಏನಾ

ಗುತ್ತದೆಂದು ಕೇಳಿದ್ದಕ್ಕೆ ನೀವೆ ಡಿಕ್ಟೇಟರ್ಸ್ ಆಗುತ್ತೀರೆಂದು ಹೇಳಿದನಂತೆ ಹಾಗಾಗಿದೆ ನಮ್ಮ ದೇಶದ ಪರಿಸ್ಥಿತಿ. ತುರ್ತುಪರಿಸ್ಥಿತಿ ಜಾರಿಗೆತಂದು ಹಾಗೂ ಹೀಗೂ ಓಡಾಡಿದರು, ಅಲ್ಲಿ ಇಂಜಿನಿಯರನ್ನು ಹಿಡಿದರು, ಸೂಪರ್‌ವೈಸರ್‌ನ್ನು ಹಿಡಿದರು, ವಿಲೇಜ್ ಅಕೌಂಟೆಂಟರನ್ನು ಹಿಡಿದರು ಎಂದು ದಿನಪತ್ರಿಕೆಗಳಲ್ಲಿ ಬರುವುದಕ್ಕೆ ಶುರುವಾಯಿತು. ಆದರೂ ಅವರ ವ್ಯವಹಾರ ನಡೆಸುತ್ತಲೇ ಇರುತ್ತಾರೆ. ಇದರಿಂದ ಎಮರ್ಜನ್ಸಿ ಬೆಲೆ ಏನಾಯಿತೆಂದು ಹೇಳಿದರೆ, ಮೊದಲು 50 ರೂಪಾಯಿಗಳನ್ನು ಕೊಟ್ಟರೆ ತೆಗೆದು ಕೊಳ್ಳುತ್ತಿದ್ದರು ಎಮರ್ಜೆನ್ಸಿ ಟೈಮ್ 100 ರೂಪಾಯಿ ಕೊಟ್ಟರೆ ಕೆಲಸಮಾಡಿ ಕೊಡುತ್ತೇವೆಂದು ಗ್ರೇಡ್ ಏರಿದರು ಎಲ್ಲ ಅಧಿಕಾರಿಗಳ ಬಗ್ಗೆಯೂ ಹೇಳುತ್ತಾ ಇಲ್ಲ. ಕೆಲವರು ಯೋಗ್ಯರು, ಸುಸಂಸ್ಕೃತರು, ಅಭಿಮಾನವನ್ನು ಇಟ್ಟು ಕೊಂಡಿರುವ ಅಧಿಕಾರಿಗಳೂ ಇದ್ದಾರೆ; ಅವರಿಗೆ ಒಳ್ಳೆಯ ಪುರಸ್ಕಾರ ಸಿಕ್ಕಬೇಕು. ತಾತ್ಸಾರಭಾವನೆ ಹೋಗಬೇಕು ಎಂದು ಹೇಳುತ್ತೇನೆ ಎಮರ್ಜನ್ಸಿಬಂದಮೇಲೆ ಸ್ವಲ್ಪ ಮಟ್ಟಿಗೆ ಒಳ್ಳೆಯ ವಾತಾವರಣ ಉಂಟಾಗಿರುತ್ತದೆ. ಇದು ಹೀಗೆಯೇ ಸ್ವಲ್ಪದಿವಸ ಮುಂದುವರೆದರೆ ದೇಶಕ್ಕೆ ಒಳ್ಳೆಯದಾಗುತ್ತದೆಂದು ಹೇಳಬಯಸುತ್ತೇನೆ.

ಪೋಲೀಸ್ ಇಲಾಖೆಯಬಗ್ಗೆ ಹೇಳುವುದಾದರೆ, ಈಗಾಗಲೇ ಅನೇಕಜನ ಮಾನ್ಯ ಸದಸ್ಯರು ಮಾತನಾಡಿರುತ್ತಾರೆ. ಕೆಲವುಕಡೆ ಒಳ್ಳೆಯ ಪೋಲೀಸ್ ಅಧಿಕಾರಿಗಳು ಇರುತ್ತಾರೆ, ಇನ್ನು ಕೆಲವುಕಡೆ ಪೋಲೀಸ್ ಸ್ಟೇಶನ್‌ಗೆ ಕಂಪ್ಲೇಂಟ್ ತೆಗೆದುಕೊಂಡು ಹೋದರೆ, ಕಂಪ್ಲೇಂಟ್ ಕೊಡುವುದಕ್ಕೆ ಹೋದವರನ್ನೆ ಹೊಡೆದು ಬೈದು ಒಳಕ್ಕೆ ತಳ್ಳಿ ದುಡ್ಡನ್ನು ಹೊಡೆಯುತ್ತಿರುವುದು ನಡೆಯುತ್ತಿದೆ. ಅವರಿಗೆ ಮೊದಲನೆಯದಾಗಿ ಮಾನವೀಯತೆ, ಸೌಜನ್ಯತೆ ಇಲ್ಲವೇ ಇಲ್ಲ. ಹೆಣ್ಣು ಮಕ್ಕಳಬಗ್ಗೆಯಂತೂ ಕೇಳಲೇ ಬೇಡಿ. ಹಳ್ಳಿಗಳಲ್ಲಿ ಸಣ್ಣಪುಟ್ಟ ವ್ಯವಹಾರಕ್ಕೆ ಗಲಾಟೆಮಾಡಿ ಕೊಂಡು ಪೋಲೀಸ್ ಸ್ಟೇಷನ್‌ಗೆ ಬಂದರೆ ಅವರಿಗೆ ಹಾಗೆ ಮಾಡಬಾರದೆಂದು ವಿವೇಕಹೇಳಿ ಕಳುಹಿಸಿದರೆ ವಾತಾವರಣ ಸ್ವಲ್ಪಮಟ್ಟಿಗೆ ತಿಳಿಯಾಗುತ್ತದೆ. ಅದು ಬಿಟ್ಟು ಯಾವುದೋ ಸೆಕ್ಷನ್‌ಗೆ ಗುರಿಪಡಿಸಿ ಕೋರ್ಟಿಗೆ ಎಳೆಯುವುದಲ್ಲದೆ ಸಿಕ್ಕಿದಷ್ಟು ದುಡ್ಡು ಸುಲಿಗೆ ಮಾಡುವುದೂ ಕೂಡ ನಡೆಯುತ್ತದೆ. ಇದು ಆಗಬಾರದೆಂದು ಹೇಳುತ್ತೇನೆ. ನಾಲ್ಕುವರ್ಷಗಳ ಹಿಂದೆ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೆ. ನಮ್ಮ ಜಿಲ್ಲೆಯಲ್ಲಿ ಶ್ರೀ ಕಾರಿಯಪ್ಪ ಎಂಬ ಒಬ್ಬರು ಸಬ್‌ಇನ್‌ಸ್ಪೆಕ್ಟರವರು ಇದ್ದರು, ಅವರಿಗೆ ಯಾವ ಪ್ರಶಸ್ತಿಯನ್ನು ಕೊಡಲಿಲ್ಲ. ಅವರು ಏನುಮಾಡುತ್ತಿದ್ದರೆಂದರೆ ಯಾರಾದರು ದೂರು ಕೊಟ್ಟರೆ ಅವರ ಊರಿಗೆ ಹೋಗಿ ವಿಚಾರಿಸಿ, ಕಷ್ಟಪಟ್ಟು ದುಡಿಯಿರಿ, ಏತಕ್ಕೆ ಎಲ್ಲರು ಜೈಲಿಗೆ ಹೋಗುತ್ತೀರಿ. ಎಂದು ವಿವೇಕ ಹೇಳುತ್ತಿದ್ದರು. ಅವರಿದ್ದಾಗ ವರ್ಷದಲ್ಲಿ 10 ಕೇಸು ಕೂಡ ರಿಜಿಸ್ಟರ್ ಆಗುತ್ತಿರಲಿಲ್ಲ. ಅಂತವರಿಗೆ ಪುರಸ್ಕಾರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಅವರು ಸರ್ವೀಸಿನಲ್ಲಿ ಇದ್ದಾರೆಯೇ ? ಈವಾಗ ಎಲ್ಲಿದ್ದಾರೆ, ಏನು ಮಾಡುತ್ತಿದ್ದಾರೆ ?

ಶ್ರೀ ಕೆ. ಎಚ್. ಹನುಮೇಗೌಡ.—ಅವರು ಈಗಾಗಲೇ ರಿಟೈರ್ ಆಗಿರುತ್ತಾರೆ. ಬೇರೆ ಇನ್ಯಾರಾದರೂ ಅಂಥಹವರು ಇದ್ದರೆ ಅವರಿಗೆ ಪುರಸ್ಕಾರ ಕೊಡಿ ಎಂದು ಹೇಳುತ್ತೇನೆ. ಇನ್ನು ಯುಟಿಲೈಜೇಶನ್ ಆಫ್ ಮ್ಯಾನ್‌ಪವರ್ ಎಂದು ಇರುತ್ತದೆ. ಇದರ ಇನ್ನೊಂದು ಅರ್ಥವೆಂದರೆ ಭ್ರಷ್ಟಾಚಾರವೆಂದು. ಕಾಂಟ್ರಾಕ್ಟರು ಬಿಲ್ಡಿಂಗ್ ಎಂದು ಮಾಡುತ್ತಾರೆ, ಸಿಕ್ಕಾಪಟ್ಟೆ ಬಿಲ್‌ಗಳನ್ನು ಮಾಡಿ ದುಡ್ಡನ್ನು ಹೊಡೆಯುತ್ತಿರುತ್ತಾರೆ. ನಿಜವಾಗಿಯೂ ಅದರಿಂದ ಏನೂ ಉಪಯೋಗವಾಗುತ್ತಿಲ್ಲ. ಕಾಳಿನದಿ ಪ್ರಾಜೆಕ್ಟನ್ನು ಕಟ್ಟಬೇಕೆಂದು ಪ್ರಯತ್ನ ಮಾಡಿರುವುದು ಒಳ್ಳೆಯದಿರುತ್ತದೆ. ಅದನ್ನು ಬೇಗನೆ ಕಟ್ಟಿಮುಗಿಸಿದರೆ ನಮಗೆ ಪುಣ್ಯ ಬರುತ್ತದೆ. ಕಷ್ಟಪಟ್ಟು ರೈತರು ದುಡಿಯುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಮ್ಯಾನ್‌ಪವರ್ ಯೂನಿಟ್ ಎಂದು ಇದೆ.

ಶ್ರೀ ಕೆ. ಎಚ್. ಹನುಮೇಗೌಡ.—ಬರಗಾಲಕ್ಕೆಂದು 40 ಸಾವಿರ ರೂಪಾಯಿಗಳನ್ನು ಯಾವುದೋ ಕಾಲದಲ್ಲಿ ಕೊಟ್ಟಿರುತ್ತೀರಿ.

ಅಧ್ಯಕ್ಷರು.— ನಮ್ಮ ತಾಲ್ಲೂಕು ವಿಚಾರ ಹೇಳುವುದಾದರೆ ಅನುಮತಿ ಕೊಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ರೈನ್‌ಷಾಡೋ ಏರಿಯಾ ಆದ ನಮ್ಮ ಹಾಸನ ಜಿಲ್ಲೆ, ಮೈಸೂರು ಮಂಡ್ಯ ಜಿಲ್ಲೆಗಳು ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತಲೇ ಇರುತ್ತವೆ. ಅಲ್ಲಿಂದ ರಿಪೋರ್ಟ್ ತರಿಸಿಕೊಂಡು ಯಾರ ಶಕ್ತಿ ಪ್ರಭಾವಕ್ಕೆ ಒಳಗಾಗದೆ ಸೂಕ್ತ ಕಾರ್ಯಕ್ರಮ ಮಾಡಬೇಕೆಂದು ಹೇಳುತ್ತೇನೆ. 50 ಜನ ತಹಸೀಲ್ದಾರರನ್ನು ಸರ್ವೀಸ್‌ನಲ್ಲಿರುವವರನ್ನೇ ತೆಗೆದುಕೊಂಡಿರುತ್ತೀರಿ. 1 : 10 ಜನರಂತೆ ಕೆಲಸ ಕೊಡಲು ಅರ್ಜಿಗಳನ್ನು ಕರೆದುದರಿಂದ 500 ಜನ ಅಪ್ಲಿಕೇಶನ್ ಹಾಕಿದರೆ 75 ಜನರನ್ನು ಸೆಲೆಕ್ಟ್ ಮಾಡಿರುತ್ತೀರಿ. ಇದರಿಂದ ಬೇರೆಯವರಿಗೆ ಅವಕಾಶ ತಪ್ಪಿಹೋಗುತ್ತದೆ. ಆದ್ದರಿಂದ ಇದನ್ನು ದಯವಿಟ್ಟು ವೆರಿಫೈ ಮಾಡಬೇಕು. ಇನ್ನು ಜಿಲ್ಲೆಗಳಲ್ಲಿ ಬಹಳ ಉತ್ತಮವಾದ ಕೆಲಸಗಳು ಆಗುತ್ತಾ ಇವೆ. ಬಹಳ ಸಂತೋಷ, ಇನ್ನು ಸುಧಾರಣೆಯಾಗಬೇಕಾದರೆ ಹೆಚ್ಚಿನ ಧನ ಸಹಾಯ ಮಾಡುವ ವ್ಯವಸ್ಥೆಯಾಗಬೇಕು. ಡಿ.ಐ.ಆರ್. ಪ್ರಕಾರ ಕೆಲವು ಕಾಲೇಜು ವಿದ್ಯಾರ್ಥಿಗಳನ್ನು ಅರೆಸ್ಟ್ ಮಾಡಿದ್ದಾರೆ. ಆ ವಿದ್ಯಾರ್ಥಿಗಳು ತಿಳಿದೋ ತಿಳಿಯದೆಯೋ ಚಳುವಳಿಯಲ್ಲಿ ಭಾಗವಹಿಸಿದ್ದಾರೆ. ಅವರಿಗೆ ಪರೀಕ್ಷೆ ಇದೆ ಮಾನವೀಯತೆಯ ದೃಷ್ಟಿಯಿಂದ ಅವರ ತಂದೆತಾಯಿಗಳ ಪರವಾಗಿ ನಾನು ಕ್ಷಮೆ ಕೇಳಿಕೊಳ್ಳುತ್ತೇನೆ ಅವರು ತಿಳಿದೋ ತಿಳಿಯದೆಯೋ ತಪ್ಪು ಮಾಡಿರುವುದನ್ನು ಗಮನಕ್ಕೆ ತೆಗೆದುಕೊಳ್ಳದೇ ಅವರಿಗೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನವನ್ನು ಮಾಡಿ ಅವರು ಮುಂದೆ ಸತ್ಪ್ರಜೆಗಳಾಗಿ ಬಾಳಿ ಬದುಕುವುದಕ್ಕೆ ವ್ಯವಸ್ಥೆ ಮಾಡಬೇಕಾದದ್ದು ಈ ರಾಜ್ಯದ ಮುಖ್ಯಮಂತ್ರಿಯವರ ಆದ್ಯ ಕರ್ತವ್ಯವೆಂದು ಹೇಳುತ್ತೇನೆ. ಅಲ್ಲಿ ಅವರಿಗೆ 75 ಪರ್ಸೆಂಟ್ ಅಟೆಂಡೆನ್ಸ್ ಇರಬೇಕು. 60 ಪರ್ಸೆಂಟ್ ಇರುವವರಿಗೆ ಸಂಬಂಧಪಟ್ಟ ಪ್ರಿನ್ಸಿಪಾಲರು ಪರ್ಮಿಷನ್ ಕೊಡಬಹುದೆಂದು ಹೇಳಿದ್ದಾರೆ. ಅವರದು 55–56 ಪರ್ಸೆಂಟ್ ಬರುತ್ತದೆ. ಸರ್ಕಾರದವರು ಅವರಿಗೆ ಎಗ್ಸಂಪ್ಷನ್ ಕೊಟ್ಟು ಪರೀಕ್ಷೆಗೆ ಹೋಗುವುದಕ್ಕೆ ವ್ಯವಸ್ಥೆಯನ್ನು ಮಾಡಿಕೊಡಬೇಕು.

ಶ್ರೀ ಎಂ. ಬಿ. ರಾಮಸ್ವಾಮಿ.—ಅವರು ಹೋಗುವುದು ಬೇಡವೆಂದು ಸ್ಟ್ರೈಕ್ ಮಾಡಿದರೆ

(*Mr. Deputy Speaker.—in the Chair*)

ಶ್ರೀ ಕೆ. ಎಚ್. ಹನುಮೇಗೌಡ.—ದಯಮಾಡಿ ಅವರು ಪರೀಕ್ಷೆಗೆ ಹೋಗುವಂತೆ ಮಾಡಿಕೊಡಿ. ಮಾನ್ಯ ಮುಖ್ಯಮಂತ್ರಿಯವರು ದೊಡ್ಡ ಮನಸ್ಸು ಮಾಡಿ ಆ ಮಕ್ಕಳಿಗೆ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ನಮ್ಮ ಕರ್ನಾಟಕ ರಾಜ್ಯದಲ್ಲಿ ಕಾಳಿ ಪ್ರಾಜೆಕ್ಟ್ ಮತ್ತು ಯಗಚಿ ಪ್ರಾಜೆಕ್ಟ್‌ಗೋಸ್ಕರ ಕುವಾಯಿತ್‌ನಿಂದ ದುಡ್ಡು ಕೊಟ್ಟಿದ್ದಾರೆ. ಈ ಪ್ರಾಜೆಕ್ಟ್‌ಗಳಿಗೆ ಮತ್ತು ಬೇರೆ ಪ್ರಾಜೆಕ್ಟ್‌ಗಳಿಗೆ ಮಾನ್ಯ ಮುಖ್ಯಮಂತ್ರಿಯವರು ವಚಸ್ ಸೇರಿ ಹೆಚ್ಚು ಹಣವನ್ನು ಕೊಡುವುದರ ಜೊತೆಗೆ ಯಗಚಿ ಪ್ರಾಜೆಕ್ಟನ್ನು ಶುರು ಮಾಡಿಸಿದರೆ ಒಳ್ಳೆಯದಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಎಲ್ಲಾ ಪ್ರಾಜೆಕ್ಟ್‌ಗಳನ್ನು ಮಾಡಿದರೆ, ಅವರೂ ನಮ್ಮ ಜನ ಅಲ್ಲವೇ ?

ಶ್ರೀ ಕೆ. ಎಚ್. ಹನುಮೇಗೌಡ.—ಇದರಿಂದ ನಮ್ಮ ಕ್ಷೇತ್ರದ ಜನಕ್ಕೆ ಒಳ್ಳೆಯದಾಗುತ್ತದೆ. ಇದರಿಂದ ಸುಮಾರು 55 ಸಾವಿರ ಎಕರೆ ನೀರಾವರಿಯಾಗುತ್ತದೆ. ತಾವು ಅಧಿಕಾರದಲ್ಲಿ ಇರುವುದರೊಳಗಾಗಿ ಕೇಂದ್ರದವರಲ್ಲಿ ಮಾತನಾಡಿ ಇದನ್ನು ಮಾಡಿಸಿಕೊಡಬೇಕು. ಇಷ್ಟು ಮಾತನಾಡಲು ಅವಕಾಶ ಕೊಟ್ಟಂತ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಸಿದ್ದಯ್ಯ (ಸಂತೆಮಾರನಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಯವರು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಪೂರ್ಣವಾಗಿ ಬೆಂಬಲಿಸುತ್ತಾ ಕೆಲವು ಸಲಹೆಗಳನ್ನು ಸರ್ಕಾರದ ಮುಂದೆ ಇಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ನಮ್ಮ ಈ ಸರ್ಕಾರ ಬಂದಮೇಲೆ ಅದರಲ್ಲೂ ಸಹ ನಮ್ಮ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಬಡವರಿಗೋಸ್ಕರ ಗರೀಬಿ ಹಟಾವೋ ಪ್ರೋಗ್ರಾಮನ್ನು ಇಟ್ಟುಕೊಂಡು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇದು ದೇಶದ ಜನತೆಯಲ್ಲೂ ಕಾಣತಕ್ಕಂಥ ವಿಷಯವಾಗಿದೆ. ಅದರಲ್ಲೂ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿರತಕ್ಕಂಥದ್ದು ಹಿಂದೆ ಯಾವ ಸರ್ಕಾರದವರೂ ಕೂಡ ಹಾಕಿಕೊಳ್ಳದೇ ಇರತಕ್ಕಂಥ ಹೊಸ ಹೊಸ ಕಾರ್ಯಕ್ರಮಗಳನ್ನು ಹೆಚ್ಚಿನ ಬೇಡಿಕೆಗಳು

ಬಡವರಿಗೆ ಸೇರುವ ರೀತಿಯಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡು ದೇಶದ ಜನತೆ ಇದರ ಸಹಾಯ ಸೌಲಭ್ಯಗಳನ್ನು ಪಡೆಯುತ್ತಾ ಇರತಕ್ಕಂಥಾದ್ದು ಇದರ ಬಗ್ಗೆ ಎಲ್ಲಾ ಜನರೂ, ನಮ್ಮ ಮಾನ್ಯ ಸದಸ್ಯರೂ ಅಲ್ಲದೇ ಮಾನ್ಯ ವಿರೋಧಪಕ್ಷದ ಸದಸ್ಯರೂ ಸಹ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ. ನಾವು ಯಾವ ಯೋಜನೆಯನ್ನೂ ಹಾಕಿಕೊಂಡರೂ ಸಹ ಹಳ್ಳಿಗಾಡಿನಲ್ಲಿ ಇರತಕ್ಕಂಥ ರೈತಕಾರ್ಮಿಕರು ಬಹುಪಾಲು ಇದ್ದಾರೆ ಆ ಜನಗಳ ಬಗ್ಗೆ ಹೆಚ್ಚಿನ ಯೋಜನೆಗಳು ಆಗಿ ಆ ಯೋಜನೆಗಳಿಂದ ಪರಿಣಾಮಕಾರಿಯಾದಂತ ಫಲ ಅವರಿಗೆ ದೊರೆಯುತ್ತಾ ಇಲ್ಲ. ನಮ್ಮ ಸರ್ಕಾರ ಬಂದಮೇಲೆ ಮಾರ್ಜಿನಲ್ ಲೇಬರರ್ಸ್, ಸ್ಮಾಲ್ ಫಾರ್ಮರ್ಸ್ ಅವರ ಬಗ್ಗೆ ಸ್ಪೆಷಲ್ ಕಾರ್ಯಕ್ರಮಗಳನ್ನು ಹಾಕಿಕೊಂಡು ಆ ದಿಕ್ಕಿನ ಹೆಜ್ಜೆ ಹಾಕುತ್ತಿದ್ದೇವೆ. ಇದು ಕೊನೆಯ ಹೆಜ್ಜೆ ಅಲ್ಲದಿದ್ದರೂ ಸಹ ಸರ್ಕಾರದವರು ಹೆಚ್ಚಾಗಿ ಮಾಡುವುದಕ್ಕೆ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಅದನ್ನು ಮಾಡುತ್ತಲೂ ಇದ್ದಾರೆ. ರೈತರ ಕಾರ್ಮಿಕರ ಬಗ್ಗೆ ಕೆಲವು ಸಲಹೆಗಳನ್ನು ಹೇಳುತ್ತೇನೆ. ಈ ಯೋಜನೆಗಳು ಬಡವರಿಗೆ ದೊರಕಬೇಕಾದರೆ ಯಾವ ಕಾರ್ಯಕ್ರಮಗಳು ಯಾವ ರೀತಿಯಲ್ಲಿ ಆದರೆ ಅದರ ಫಲ ದೊರೆಯುತ್ತದೆ. ಎಂಬುದರ ಬಗ್ಗೆ ಅನೇಕ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರಕ್ಕೆ ಕಷ್ಟ ಇದೆಯೆಂದು ನಾವು ಮನಗಂಡಿದ್ದೇವೆ. ಹಳ್ಳಿಗಾಡಿನ ಜನರಿಗೆ ಅದರಲ್ಲೂ ರೈತ ಕಾರ್ಮಿಕರಿಗೆ ಎಲ್ಲರಿಗೂ ಭೂಮಿಯನ್ನು ಪಡೆಯತಕ್ಕಂಥಾದಕ್ಕೆ ಪ್ರಯತ್ನ ಮಾಡುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಇನ್ನು ಬೇರೆಬೇರೆ ಕೆಲಸಕಾರ್ಯಗಳನ್ನು ಒದಗಿಸುವ ರೀತಿಯಲ್ಲಿ ಮಾಡುವುದಾದರೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಬೇಕಾದಷ್ಟು ಕೆಲಸಗಳು ಇವೆ. ಈ ಕೆಲಸಗಳನ್ನು ಒಂದು ಕೋಆಪರೇಟಿವ್ ಸೊಸೈಟಿಗಳ ಕಾಂಟ್ರಾಕ್ಟು ಮತ್ತು ಗೌರ್ನಮೆಂಟ್ ಕಾಂಟ್ರಾಕ್ಟಿನಿಂದ ಜನಗಳಿಗೆ ಸರ್ಕಾರ ಉತ್ತೇಜನ ಕೊಟ್ಟು ಸ್ಥಳೀಯ ಸಂಸ್ಥೆಗಳನ್ನು ಮಾಡಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನಿಂದ ಬರತಕ್ಕಂಥ ಸಹಾಯ ಸಹಕಾರ್ಯಗಳನ್ನು ಜನಗಳಿಗೆ ದೊರಕುವ ರೀತಿಯಲ್ಲಿ ಪರಿಣಾಮಕಾರಿಯಾಗಿ ಆಗಬೇಕಾದಂತ ಅವಕಾಶ ಇದೆ. ಇದನ್ನು ಸರ್ಕಾರ ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜೊತೆಗೆ ನಮ್ಮ ಸರ್ಕಾರದವರು ಈಚೆಗೆ 20 ಅಂಶದ ಕಾರ್ಯಕ್ರಮಗಳ ಬಗ್ಗೆ ಸಹ ಕನಿಷ್ಟ ವೇತನವನ್ನು ಹೆಚ್ಚಿಗೆ ಮಾಡಿದ್ದಾರೆ, ಅದರಲ್ಲಿ ಅಗ್ರಿಕಲ್ಚರಲ್ ಫಾರ್ಮರ್ಸ್‌ಗೆ, ರೈತಕಾರ್ಮಿಕರಿಗೆ ಜಾಸ್ತಿ ಮಾಡಿದ್ದಾರೆ. ಸರ್ಕಾರದ ಕೆಲವು ಡಿಪಾರ್ಟ್‌ಮೆಂಟ್‌ಗಳಲ್ಲಿರುವ ಕೂಲಿಗಾರರಿಗೆ ಅದೇರೀತಿ ಜಾಸ್ತಿ ಮಾಡಬೇಕೆಂದು ಸರ್ಕಾರದವರನ್ನು ನಾನು ಕೇಳಿಕೊಳ್ಳುತ್ತೇನೆ. ಫಾರೆಸ್ಟ್ ಡಿಪಾರ್ಟ್‌ಮೆಂಟ್ ಇದೆ, ಸರಿಕಲ್ಚರ್ ಡಿಪಾರ್ಟ್‌ಮೆಂಟ್ ಇದೆ, ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಇವೆ, ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್ ಇದೆ, ಈ ಡಿಪಾರ್ಟ್‌ಮೆಂಟ್‌ಗಳಲ್ಲಿ ಟೆಂಪರರಿ ಬೇಸಿಸ್ ಮೇಲೆ ಬಹಳ ಜನ ಕೂಲಿಗಾರರು ಕೆಲಸ ಮಾಡುತ್ತಾರೆ. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್‌ನಲ್ಲಿ ಬಹಳ ಜನ ಇದ್ದಾರೆ, ಅಂತಹವರ ಬಗ್ಗೆ ಕನಿಷ್ಟ ಕೂಲಿಯನ್ನು ತಾವು ನ್ಯಾಯವಾದ ರೀತಿಯಲ್ಲಿ ಮತ್ತೆ ಪರಿಶೀಲನೆ ಮಾಡಿದರೆ ಅನುಕೂಲವಾಗುತ್ತದೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಿನಿಮಮ್ ವೇಜಸ್ ಅವರಿಗೆ ಅನ್ವಯ ಆಗುತ್ತದೆಯೇ ?

ಶ್ರೀ ಕೆ. ಸಿದ್ದಯ್ಯ.—ಅಗ್ರಿಕಲ್ಚರಲ್ ಲೇಬರರ್ಸ್‌ಗೆ ಲ್ಯಾಂಡ್‌ಲೆಸ್ ಲೇಬರರ್ಸ್‌ಗೆ ಕೊಟ್ಟಿರುತ್ತಾರೆ. ಈ 20 ಅಂಶದ ಕಾರ್ಯಕ್ರಮದ ಪ್ರಕಾರ ಸರ್ಕಾರದವರು ಬೇರೆಬೇರೆ ಇಲಾಖೆಗಳಲ್ಲಿ ಕೆಲಸ ಮಾಡುವವರಿಗೆ ಸರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸಮಾಡತಕ್ಕ ಜನಗಳಿಗೆ ಕೆಲವು ತಿಂಗಳುಗಳ ಹಿಂದೆ ಜಾಸ್ತಿ ಮಾಡಿದ್ದಾರೆ. ಆ ತರಹ ಅವರ ಬಗ್ಗೆ ಕೊಟ್ಟಿರತಕ್ಕ ಹಣವನ್ನು ಕಂಪಲ್ಸರಿ ಡಿಪಾಸಿಟ್ ಸ್ಕೀಮ್‌ನಲ್ಲಿ ಇಟ್ಟುಕೊಂಡು ಅವರಿಗೆ ಒಂದೇ ಸಾರಿ ಕೊಟ್ಟಿದ್ದಾರೆ. ಇನ್‌ಸ್ಟಾಲ್‌ಮೆಂಟ್‌ನಲ್ಲಿ ವಾಪಸ್ ತೆಗೆದುಕೊಳ್ಳಬೇಕೆಂದು ಆರ್ಡರ್ ಆಗಿ ಈಗ ರಿಕವರೀಸ್ ಆಗುತ್ತಿದೆ. ಅದರಲ್ಲಿ ಕೆಲವು ಟೆಕ್ನಿಕಲ್ ಡಿಪಾರ್ಟ್‌ಮೆಂಟ್‌ನವರು ಹೇಳುತ್ತಾರೆ ಕಾನೂನು ಪ್ರಕಾರ, ಸೆಂಟ್ರಲ್ ಆಕ್ಟ್ ಪ್ರಕಾರ ಕಂಪಲ್ಸರಿ ಡಿಪಾಸಿಟ್ ಸ್ಕೀಮ್ ಪ್ರಕಾರ ಅವರ ಹತ್ತಿರ ವಸೂಲು ಮಾಡಿಕೊಳ್ಳಬೇಕೆಂದು ಹೇಳುತ್ತಾರೆ. ಸಾಧಾರಣವಾಗಿ ಈ ಒಂದು ಅಗ್ರಿಕಲ್ಚರಲ್ ಲೇಬರರ್ಸನ್ನು ಕಂಸಿಡರ್ ಮಾಡುವುದಕ್ಕಿಂತ ಈ ಟೆಕ್ನಿಕಲ್ ಲೇಬರ್ ಎಂದು ಅದಕ್ಕೆ ಒಂದು ಸ್ಪೆಷಲ್ ಸ್ಕಿಲ್ಡ್ ವರ್ಕರ್ಸ್ ಎಂದು ಮಾಡಿದಪಕ್ಷದಲ್ಲಿ ಇದರಲ್ಲಿ ಅಂತಹದು ಬರುವುದಿಲ್ಲವೆಂಬ

ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ಪರಿಶೀಲನೆ ಮಾಡಿದರೆ ಬಡಜನರಿಗೆ ಕೊಟ್ಟಿರ
ತಕ್ಕ ಹಣ ವಾಪಸ್ ಕೊಡತಕ್ಕ ಸನ್ನಿವೇಶ ಒದಗಿ ತಾವು ಅದನ್ನು ಪರಿಹಾರ ಮಾಡಿ ಕೊಟ್ಟಹಾಗಾ
ಗುತ್ತದೆ. ಇದನ್ನು ಪರಿಶೀಲನೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅಲ್ಲದೆ
ಹಳ್ಳಿಗಾಡಿನಲ್ಲಿರತಕ್ಕ ಬಡವರಿಗೆ ರೈತಕಾರ್ಮಿಕರಿಗೆ ಅನೇಕ ಯೋಜನೆಗಳಿಂದ ಬೇಕಾದಷ್ಟು
ಉತ್ಪಾದನೆ ಮಾಡಿದ್ದಾರೆ. ಅವರು ಉತ್ಪಾದನೆ ಮಾಡುವುದರ ಜೊತೆಗೆ ಆ ಉತ್ಪಾದನೆ ಯಾವ
ವರ್ಗಗಳಿಗೆ ಹೋಗುತ್ತದೆ. ಯಾವ ವರ್ಗಗಳಿಗೆ ಹೋಗುವುದಿಲ್ಲ ಅಂತಹವರ ಸ್ಥಿತಿಗತಿಗಳು ಉತ್ತ
ಮವಾಗುವುದಕ್ಕೆ ಯಾವ ರೀತಿಯಿಂದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನುವ
ದಿಕ್ಕಿನಲ್ಲಿ ಸರ್ಕಾರ ಹೆಚ್ಚಾಗಿ ಗಮನ ಕೊಡಬೇಕು. ಈಗಾಗಲೇ ತಾವು ಕಾರ್ಯಕ್ರಮವನ್ನು
ಹಾಕಿಕೊಂಡಿದ್ದೀರಿ. ಪ್ಲಾನಿಂಗ್ ಬ್ಯೂರೊ ಅವರು ಪರಿಶೀಲನೆ ಮಾಡುತ್ತಿದ್ದಾರೆ, ಅದಕ್ಕೆ ಒಂದು
ಕಮಿಟಿಯನ್ನು ಮಾಡಿದ್ದಾರೆ. ಅದರಲ್ಲಿ ನಮಗೆ ವಿಶ್ವಾಸ ಇದೆ. ಆದರೆ ತಾವು ಇದರ ಬಗ್ಗೆ
ಹೆಚ್ಚಿಗೆ ಗಮನಕೊಟ್ಟು ಗೌರ್ನಮೆಂಟ್ ಕಂಟ್ರಾಕ್ಟನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೆ
ಕೊಟ್ಟರೆ ಹೆಚ್ಚಿನ ಜನಗಳಿಗೆ ಸೌಲಭ್ಯ ಸಿಕ್ಕುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಅದರ
ಜೊತೆಗೆ ಅಗ್ರಿಕಲ್ಚರ್‌ನಲ್ಲಿ ಬೇಕಾದಷ್ಟು ಉತ್ಪನ್ನವಾಗುತ್ತದೆ. ಅದರಲ್ಲಿ ದೇಶದಲ್ಲಿ ಯಾವ ಉತ್ಪಾ
ದನೆಯೇ ಆಗಲೀ ಲ್ಯಾಂಡ್, ಲೇಬರ್ ಮತ್ತು ಕ್ಯಾಪಿಟಲ್ ಇವು ಮೂರು ಮುಖ್ಯವಾದ ಫ್ಯಾಕ್ಟರ್ಸ್
ಳಾಗಿವೆ ಇದರಲ್ಲಿ ಬಹಳ ಮುಖ್ಯವಾದದ್ದು ಲೇಬರ್ ಬಡರೈತರಿಗೆ ಲೆವಿ ರೂಪದಲ್ಲಿ ಇವತ್ತಿನ
ದಿವಸ ವಸೂಲು ಮಾಡುತ್ತಾ ಇರತಕ್ಕ ಕಾಲದಲ್ಲಿ ಆಹಾರ ಧಾನ್ಯಗಳು ಆ ಜನಗಳಿಗೆ ಪರಿಣಾಮಕಾ
ರಿಯಾಗಿ ಕೊನೆಯಪಕ್ಷ ತಿಂಗಳಿಗೆ 4-5 ಕೆ.ಜಿ. ಸಿಕ್ಕುವ ಮಟ್ಟದಲ್ಲಿ ಇಲ್ಲ. ಜನರು ಕಷ್ಟದಲ್ಲಿದ್ದಾರೆ.
ತಮ್ಮ ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿನಲ್ಲಿ ಫೇರ್‌ಪ್ರೈಸ್ ಷಾಪ್‌ಗಳನ್ನು ಓಪನ್ ಮಾಡು
ತ್ತಾರೆ ಎಂದು ವರದಿಯಲ್ಲಿ ಇದೆ ಎಂದು ತಿಳಿದುಕೊಂಡಿದ್ದೇನೆ. ಇನ್ನೂ ಹೆಚ್ಚಿಗೆ ಷಾಪ್‌ಗಳನ್ನು
ಮಾಡಿ ಸಹಾಯ ಮಾಡಿದರೆ ನಿಜವಾಗಿ ಬಡವರ ಬೆಂಬಲ ತಮಗೆ ದೊರೆಯುತ್ತದೆ. ಇತ್ತೀಚೆಗೆ
ನಮ್ಮ ಸರ್ಕಾರ ಬಂದಮೇಲೆ ತಮ್ಮ ನೇತೃತ್ವದಲ್ಲಿ ನಡೆಯತಕ್ಕ ಸರ್ಕಾರದಲ್ಲಿ ಬಡವರು ಎಂದೂ
ಕಾಣದೇ ಇರತಕ್ಕ ಫಲವನ್ನು ಕಂಡಿದ್ದಾರೆ. ಬಡಜನರಿಗೆ ವೀಕರ ಸೆಕ್ಷನ್ಸ್‌ಗೆ, ಷೆಡ್ಯೂಲ್ಡ್
ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್‌ಗೆ ದೊರೆತಿದೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟಿನಲ್ಲಿ ತಾವು ಕೆಲಸ
ಮಾಡುವಾಗ ಪ್ಲಾನಿಂಗಿನ ರಿವ್ಯೂ ಬೇಕು. ಪ್ಲಾನಿಂಗಿನ ಫಲ ಯಾರು ಯಾರಿಗೆ ಎಷ್ಟರಮಟ್ಟಿಗೆ
ಸಿಗುತ್ತದೆ, ಸಿಗದೇ ಇರುವವರು ಯಾರಾದರೂ ಇದ್ದಾರೆಯೆ, ಇದ್ದರೆ ಅವರಿಗೆ ಯಾವರೀತಿ
ಸಹಾಯ ಮಾಡಬೇಕು ಏನು ಯೋಜನೆ ಬೇಕು ಎಂಬುದರ ರಿವ್ಯೂ ಮಾಡಿದರೆ ದೇಶದ ಕ್ಷೇಮಕ್ಕೆ,
ಬಡವರ ಕ್ಷೇಮಕ್ಕೆ ಒಳ್ಳೆಯದಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಈ ಅಭಿಪ್ರಾಯವನ್ನು
ಮಾನ್ಯ ಪ್ರಧಾನಮಂತ್ರಿಗಳು ಹೂಸಾ ಅಣೆಕಟ್ಟಿನ ಕಾರ್ಯಕ್ರಮಕ್ಕೆ ಬಂದಿದ್ದಾಗ ವ್ಯಕ್ತ
ಪಡಿಸಿದ್ದಾರೆ ಇದೇನೂ ನಾನು ಹೊಸದಾಗಿ ಹೇಳುತ್ತಿಲ್ಲ. ಇದರ ಬಗ್ಗೆ ಸರ್ಕಾರ ತೀವ್ರವಾದ
ಗಮನ ಕೊಟ್ಟರೆ ಶತಶತಮಾನಗಳಿಂದ ನರಳುತ್ತಾ ಇರತಕ್ಕ ಬಡವರಿಗೂ ಪರಿಹಾರ ದೊರಕುತ್ತದೆ.
ಇದರ ಬಗ್ಗೆ ಬ್ಯೂರೊ ಆಫ್ ಸೋಷಿಯಲ್ ಅಂಡ್ ಎಕನಾಮಿಕ್ ಛೇಂಜ್ ಎಂದು ಒಂದು ಸಂಸ್ಥೆ
ಇದೆ ಅದು ಬೆಂಗಳೂರು ಸಿಟಿಗೆ ಮಾತ್ರ ಕನ್‌ಫೈನ್ ಆಗಿದೆ ಅಂಥದ್ದು ಸೋಷಿಯೊ ಎಕನಾಮಿಕ್
ಸರ್ವೆ ಎಲ್ಲಾ ಕಡೆಯಲ್ಲೂ ಮಾಡಿದರೆ ಒಳ್ಳೆಯದೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.
ಆ ರೀತಿ ಸರ್ವೆ ಮಾಡಿದರೆ ನಿಜವಾಗಿ ಅಲ್ಲಿರತಕ್ಕ ಬಡವರು ಯಾರು, ಬಡತನಕ್ಕೆ ಸಿಕ್ಕಿರತಕ್ಕ
ವರ್ಗಗಳು ಯಾವುವು, ಅವರಿಗೆ ಪ್ರತಿಫಲವನ್ನು ಒದಗಿಸುವುದಕ್ಕೆ ಯಾವ ಯಾವ ಯೋಜನೆಗಳನ್ನು
ಹಾಕಿಕೊಳ್ಳಬಹುದು ಎಂಬುದು ಸರ್ಕಾರಕ್ಕೆ ಗೊತ್ತಾಗುತ್ತದೆ. ಮತ್ತು ತಕ್ಕ ಕ್ರಮ ತೆಗೆದು
ಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಸೋಷಿಯೋ ಎಕನಾಮಿಕ್ ಸರ್ವೆ ಎಲ್ಲಾ
ಕಡೆಗಳಲ್ಲಿ ಅಥವಾ ಕೆಲವು ಊರುಗಳಲ್ಲಿ ಮಾಡಿ ಸರ್ಕಾರ ರಿಪೋರ್ಟ್ ತರಿಸಿಕೊಂಡು ಸೂಕ್ತ ಕ್ರಮ
ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟ
ಪಡುತ್ತೇನೆ. ನಿಜವಾಗಿ ಸರ್ಕಾರ ಇತ್ತೀಚೆಗೆ ಡಿಲೇ ಆಗುತ್ತಿದ್ದ ಸರ್ಕಾರದ ವ್ಯವಹಾರಗಳ ಬಗ್ಗೆ,
ರೆಕಾರ್ಡ್‌ಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡಿದ್ದೀರಿ. ಸರ್ಕಾರಕ್ಕೆ ಕಾಗದ ಪತ್ರಗಳು
ಹೋದರೆ ವರ್ಷವಾದರೂ ಬಗೆಹರಿಯುವುದಿಲ್ಲ ಎಂದು ಹಳ್ಳಿಗಾಡಿನಲ್ಲಿರುವವರು ಹೇಳತಕ್ಕದ್ದು

ಸರ್ವೇಸಾಮಾನ್ಯವಾಗಿದೆ. ವಿಶೇಷ ಕಾರಣಗಳಿಂದ ಕೆಲವು ವ್ಯವಹಾರಗಳು ತಡವಾಗಿರತಕ್ಕ ಕೆಲವು ವಿಷಯಗಳಿರಬಹುದು. ಕಚೇರಿಗಳಲ್ಲಿ ಸಂಬಂಧಪಟ್ಟ ಗುಮಾಸ್ತರುಗಳ ಹತ್ತಿರ ಪೆಂಡಿಂಗ್ ಲಿಸ್ಟ್ ಇರುತ್ತದೆ. ಯಾತಕ್ಕೋಸ್ಕರ ಪೆಂಡಿಂಗ್ ಇಟ್ಟಿದೆ ಎಂದು ಕಾರಣ ಅದರಲ್ಲಿರುತ್ತದೆ. ಕೆಲವು ಸಂದರ್ಭಗಳಲ್ಲಿ ಇನ ಕಂಪ್ಲೀಟ್ ಆಗಿ ಪರ್ಟಿಕ್ಯುಲರ್‌ಗೋಸ್ಕರವಾಗಿ ಮೇಲಿನಿಂದ ಕೆಳಕ್ಕೆ, ಕೆಳಗಿನಿಂದ ಮೇಲಕ್ಕೆ ಓಡಾಡುವುದರಿಂದ ಕಾಗದಪತ್ರಗಳ ವಿಲೇವಾರಿ ತಡವಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಅಪ್ರೋಪ್ರಿಯೇಟ್ ಆಕ್ಷನ್ ತೆಗೆದುಕೊಂಡಿರುವುದಿಲ್ಲ. ಮತ್ತು ಯಾವ ಕೆಲಸದ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೀರಿ, ಆ ತೀರ್ಮಾನಕ್ಕೆ ಬೇಕಾದಂಥ ಸಂಪೂರ್ಣವಾದ ಪರ್ಟಿಕ್ಯುಲರ್ಸ್ ಇಲ್ಲದೇ ಇರುವುದರಿಂದ ನಿಧಾನವಾಗುತ್ತದೆ. ಇದನ್ನು ತಪ್ಪಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಷಯ ರೆಕ್ರೂಟ್‌ಮೆಂಟ್ ಬಗ್ಗೆ ಹೇಳಿ ನನ್ನ ಭಾಷಣವನ್ನು ನಿಲ್ಲಿಸುತ್ತೇನೆ. ರೆಕ್ರೂಟ್‌ಮೆಂಟ್ ಬಗ್ಗೆ ನಮ್ಮ ಸ್ನೇಹಿತರು ಕೆಲವರು ಹೇಳಿದರು, ಹಿಂದುಳಿದ ವರ್ಗಗಳಿಗೆ ಸ್ಕೈಕಲ್ ಆಫ್ ಅಪಾಯಿಂಟ್‌ಮೆಂಟ್ ಕಿತ್ತು ಹಾಕಿದ್ದಾರೆ ಎಂದು. ಅದರಲ್ಲಿ ದೇವದಾಸ್ ವರ್ಸಸ್ ಯೂನಿಯನ್ ಗೌರ್ನಮೆಂಟ್ ಆಫ್ ಇಂಡಿಯಾ, ಈ ಒಂದು ಕೇಸ್‌ನ ಬಗ್ಗೆ ಹಿಂದುಳಿದ ವರ್ಗಕ್ಕೆ 50 ಪರ್ಸೆಂಟಿಗಿಂತ ಜಾಸ್ತಿಯಾಗಬಾರದು ಎಂದು ತೀರ್ಮಾನ ಕೊಟ್ಟಿರುವ ಬಗ್ಗೆ ಸ್ಕೈಕಲ್ ಆಫ್ ಅಪಾಯಿಂಟ್‌ಮೆಂಟ್ ಕಿತ್ತು ಹಾಕಿರುವ ಸಂಬಂಧದಲ್ಲಿ ಲಿಸ್ಟ್ ಮಾಡಿರತಕ್ಕದ್ದು ರೆಕ್ರೂಟ್‌ಮೆಂಟ್ ಲಿಸ್ಟ್‌ನಲ್ಲಿದೆ. ಹಿಂದುಳಿದ ವರ್ಗದವರು ಕೊನೆಯಲ್ಲಿದ್ದರೂ ಸಹ, ಆಹಾರವಿಲ್ಲದ ಬಡವರಿಗೆ ಆಹಾರ ಸಿಗಲಿ, ಜೀವನ ಮಾರ್ಗ ಸಿಕ್ಕಲಿ ಎಂಬ ದೃಷ್ಟಿಯಿಂದ ಅಪಾಯಿಂಟ್‌ಮೆಂಟ್ ಮುಂಚೆ ಮಾಡಬೇಕು ಎಂದು ಮಾಡಿದ್ದೀರಿ. 50 ಪರ್ಸೆಂಟಿಗಿಂತ ಜಾಸ್ತಿಯಾಗಬಾರದು ಎಂದು ಕೊಟ್ಟಿರತಕ್ಕ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟಿಗೆ ಯಾವ ರೀತಿಯಿಂದಲೂ ಅಡಚಣೆಯಾಗುವುದಿಲ್ಲ. ಇದನ್ನು ಪರಿಶೀಲನೆ ಮಾಡಬೇಕು ಎಂದು ಅನೇಕ ಸಾರಿ ಕೇಳಿಕೊಂಡಿದ್ದೇನೆ ಈಗಲಾದರೂ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ತಮ್ಮ ಸರ್ಕಾರ ಬಂದಮೇಲೆ ಬಡವರ ಬಗ್ಗೆ ರೆಕ್ರೂಟ್‌ಮೆಂಟ್ ವಿಚಾರದಲ್ಲಿ ಅನೇಕ ಕೆಲಸಗಳನ್ನು ಮಾಡಿದ್ದೀರಿ. ತಮ್ಮ ಸರ್ಕಾರದ ಬಗ್ಗೆ ಹಳ್ಳಿಯಲ್ಲಿ ಮುಕ್ತಕಂಠದಿಂದ ಹೊಗಳುತ್ತಿದ್ದಾರೆ. ಅದರಲ್ಲೂ ಬ್ಯಾಕ್‌ವರ್ಡ್ ಕ್ಲಾಸ್, ಬ್ಯಾಕ್‌ವರ್ಡ್ ಟ್ರೈಬ್ಸ್, ಎಕ್ಸ್ ಸರ್ವೀಸ್‌ಮೆನ್, ಇತರ ಹಿಂದುಳಿದವರು ನಿಜವಾಗಿ ಕಾನ್‌ಸ್ಟಿಟ್ಯೂಷನ್ ಪ್ರಕಾರ ಬ್ಯಾಕ್‌ವರ್ಡ್ ಕ್ಲಾಸ್ ಇಲ್ಲದೇ ಹೋದರೂ ಕೂಡ ಮಾನವೀಯತೆ ದೃಷ್ಟಿಯಿಂದ ಆ ಜನಗಳಿಗೆ ಸಹಾಯ ಮಾಡಬೇಕು. ಅಂತಹವರಿಗೆ ಸಹಾಯ ಮಾಡತಕ್ಕದ್ದು ಸರಿಯಲ್ಲ ಎಂದು ಖಂಡಿತ ಹೇಳುವುದಿಲ್ಲ. ಅವರ ಬಗ್ಗೆ ತಾವು ಕೊಟ್ಟಿರುವುದು ಒಂದು ಪರ್ಸೆಂಟ್, ಎರಡು ಪರ್ಸೆಂಟ್ ವೈಟೇಜ್ ಕೊಟ್ಟರೂ ಚಿಂತೆ ಇಲ್ಲ. ದೊಂಬರು ಮತ್ತು ನೊಮ್ಯಾಡಿಕ್ ಟ್ರೈಬ್ಸ್ ಇವರಿಗೆ ಸಾವಿರಾರು ವರ್ಷಗಳಿಂದ ವಿಶೇಷ ರಿಯಾಯಿತಿ ಕೊಟ್ಟಿದ್ದೀರಿ. ಹಿಂದೆ ಯಾರೂ ಹೀಗೆ ಮಾಡಿರಲಿಲ್ಲ. ಕಾನ್‌ಸ್ಟಿಟ್ಯೂಷನ್‌ನಲ್ಲಿ ಆಗದೇ ಇರತಕ್ಕ ವಿಷಯ ಅದರೂ ಸಹ ನಾವು ಅಪೋಸ್ ಮಾಡುವುದಿಲ್ಲ. ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ರಿಪೋರ್ಟ್ ಬಂದಾಗ ವಿಶಾಲದೃಷ್ಟಿಯಿಂದ ತೋರಿಸಿದರೆ ನಿಜವಾಗಿ ನಮ್ಮದೇಶಕ್ಕೆ ಕಲ್ಯಾಣವಾಗುವುದರಲ್ಲಿ ಯಾವ ಸಂಶಯವೂ ಇಲ್ಲ ಎಂದು ಹೇಳುತ್ತೇನೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್ ವಿಚಾರದಲ್ಲಿ ಹೆಚ್ಚು ರಿಸರ್ವೇಷನ್ ಕೊಡುವುದಕ್ಕೆ ಪ್ರಯತ್ನಮಾಡುತ್ತೇನೆ ಎಂದು ಹೇಳಿದ್ದಿರಿ ಅದರಂತೆ ತಾವು ಮಾಡಿದ್ದೀರಿ. ಆದರೆ ಎಷ್ಟೋ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಪೂರ್ತಿ ರಿಜರ್ವೇಶನ್ ಕೊಟ್ಟೇ ಇಲ್ಲ. ಫೈನಾನ್ಸ್ ಕಾರ್ಪೋರೇಷನ್ ಇದೆ. ನಾನು ಒಂದು ಕಮಿಟಿಯಲ್ಲಿ ಹೋಗಿದ್ದಾಗ ಒಂದು ಅಪಾಯಿಂಟ್‌ಮೆಂಟ್ ಕೊಟ್ಟಿಲ್ಲ ಎಂದು ಗೊತ್ತಾಯಿತು. ಅಂಥಾದ್ದು ಹಿಂದೆ ಆಗಿರತಕ್ಕದ್ದು. ಹಿಂದೆ ಗೌರ್ನಮೆಂಟ್ ಆರ್ಡರ್‌ನಲ್ಲಿ ಯಾವ ರಿಸರ್ವೇಷನ್ ಕೊಟ್ಟರೂ ಸಹ ಅಂಥ ಗೌರ್ನಮೆಂಟ್ ಆರ್ಡರ್ ಇವರಿಗೆ ಅಪ್ಲೈ ಆಗುವುದಿಲ್ಲ ಎಂದು ಹೇಳುತ್ತಾರೆ. ಇಪ್ಸೋ ಫ್ಯಾಕ್ಟೋ ಅಪ್ಲೈ ಆಗದೇ ಇದ್ದರೆ ಯಾವರೀತಿ ಅಪ್ಲೈ ಆಗಬೇಕು ಎಂದು ಡಿಪಾರ್ಟ್‌ಮೆಂಟಲ್ ಆಫೀಸರ್ ಸರ್ಕಾರವನ್ನೂ ಕೂಡ ಕೇಳಲಿಲ್ಲ. ಇದು 10—12 ವರ್ಷಗಳ ಹಿಂದೆ ಆಗಿರತಕ್ಕ ವಿಷಯ. ತಾವು ಕ್ರಮ ತೆಗೆದುಕೊಂಡಿದ್ದೀರಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಅನೇಕ ಕಡೆ ನಾನ್‌ಆಫಿಷಿಯಲ್ ಛೇರ್ಮನ್ ಇದ್ದಾರೆ; ಅವರೇ ಅಪಾಯಿಂಟ್‌ಮೆಂಟ್ ಅಥಾರಿಟಿ ಆಗಿದ್ದಾರೆ. ಪೊಲಿಟಿಕಲ್ ಪಾರ್ಟಿಗೆ ಸೇರಿರುವುದರಿಂದ ಅನೇಕ ಸಾರಿ ಕಾನೂನನ್ನು ಉಲ್ಲಂಘನೆ ಮಾಡಿ ಅಪಾಯಿಂಟ್‌ಮೆಂಟ್ ಮಾಡಿರುತ್ತಾರೆ. ಅಂತಹವರ ಮೇಲೆ ಯಾವ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೂ ಸರ್ಕಾರಕ್ಕೆ

ಕಷ್ಟವಾಗುತ್ತದೆ. ಅಂಥವರಿಂದ ಅಧಿಕಾರ ಕಿತ್ತು ಹಾಕುವುದು ಒಳ್ಳೆಯದು. ಇದರ ಬಗ್ಗೆ ರಿಪೋರ್ಟ್ ತರಿಸಿಕೊಳ್ಳಿ. ಇನ್ನೂ ಅನೇಕ ವಿಷಯ ಹೇಳಬೇಕೆಂದಿದ್ದೆ. ಕಾಲಾವಕಾಶ ಇಲದೇ ಇರುವುದರಿಂದ ಇಷ್ಟನ್ನು ಮಾತ್ರ ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

3-30 P.M.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂತಹ ಬೇಡಿಕೆಗಳನ್ನು ವಿರೋಧಿಸಿ ಕೆಲವು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನೀವು ಏಕೆ ವಿರೋಧ ಮಾಡುತ್ತೀರಿ ?

ಶ್ರೀ ಎಸ್. ಬಂಗಾರಪ್ಪ.—ಒಳ್ಳೆಯ ಕೆಲಸವನ್ನು ಮಾಡಿದರೆ ಸ್ವಾಗತ, ಒಳ್ಳೆಯದನ್ನು ಮಾಡದೆ ಇದ್ದರೆ ವಿರೋಧ. ಮಾನ್ಯ ಅಧ್ಯಕ್ಷರೇ, ಸಾಮಾನ್ಯ ಆಡಳಿತವನ್ನು ಕುರಿತು ಮೊಟ್ಟ ಮೊದಲನೆಯದಾಗಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾದ ನಂತರ ಉದಾಹರಣೆಗೆ ನಮ್ಮ ಸೆಕ್ರಟರಿಯೇಟನ್ನು ತೆಗೆದುಕೊಂಡು ವಿಚಾರ ಮಾಡುವುದಾದರೆ ಈಗಾಗಲೇ ಮಾನ್ಯ ಸದಸ್ಯರುಗಳನೇಕರು ಆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ತುರ್ತು ಪರಿಸ್ಥಿತಿ ಜಾರಿಗೆ ಬಂದ ಬಳಿಕ ಶಿಸ್ತು ಎಷ್ಟರ ಮಟ್ಟಿಗೆ ಬಂದಿತ್ತೆಂದರೆ. ಬೆಳಿಗ್ಗೆ ಹತ್ತೂವರೆಯಿಂದ ಸಾಯಂಕಾಲ ಐದೂವರೆವರೆಗೆ ಕಛೇರಿಗಳಲ್ಲಿ ಯಾವ ರೀತಿ ಕೆಲಸ ನಡೆಯುತ್ತಿತ್ತೆಂಬುದು ಎಲ್ಲರಿಗೂ ತಿಳಿದಿತ್ತು, ಮತ್ತು ಎಲ್ಲಾ ಇಲಾಖೆಗಳಲ್ಲಿರತಕ್ಕ ಸರ್ಕಾರಿ ನೌಕರರು ಕಛೇರಿ ವೇಳೆಯಲ್ಲಿ ಕಾಫಿಗೆ ಹೋಗುವುದಕ್ಕಾಗಲಿ, ಸ್ನೇಹಿತರೊಡಗೂಡಿ ಮಾತನಾಡುವುದಕ್ಕೆ ಹೋಗುವುದಕಾಗಲಿ ಅವಕಾಶ ಕೊಡದಂತೆ ನೋಡಿಕೊಳ್ಳುವುದಕ್ಕೆ ಕೆಲವು ಅಧಿಕಾರಿಗಳನ್ನು ನೇಮಕ ಮಾಡಿದರು. ಅವರು ಈಗಲೂ ಇರಬಹುದು; ಅವರಿಗೆ ಸಂಬಳವನ್ನು ಕೊಡುತ್ತಿರಬಹುದು ಈ ರೀತಿ ತುರ್ತು ಪರಿಸ್ಥಿತಿ ಘೋಷಣೆ ಆದಕೂಡಲೆ ಸರ್ಕಾರಿ ಕಛೇರಿಗಳ ಎಲ್ಲಾ ಖುರ್ಚಿಗಳು ಭರ್ತಿಯಾಗಿ ಎಲ್ಲಾ ಕೆಲಸ ಕಾರ್ಯಗಳು ಬಹಳ ಚನ್ನಾಗಿ ನಡೆಯುತ್ತಿದ್ದವು. ಅದೇ ರೀತಿ ಎಲ್ಲಾ ಜಿಲ್ಲೆಗಳಲ್ಲಿಯೂ ಕೂಡ ನಡೆಯುತ್ತಿತ್ತು. ಆದರೆ ಈಗ, ಸರ್ಕಾರ ತುರ್ತು ಪರಿಸ್ಥಿತಿಯ ಫಲಿತಾಂಶವನ್ನು ಏನು ನಿರೀಕ್ಷಣೆ ಮಾಡಿತ್ತೋ ಅದನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂಬುದು ಗೊತ್ತಾಗುತ್ತಿದೆ. ತುರ್ತು ಪರಿಸ್ಥಿತಿಗೆ ಸರ್ಕಾರದ ನೌಕರರು ಈಗಾಗಲೇ ಹೊಂದಿಕೊಂಡಿದ್ದಾರೆ. ತುರ್ತು ಪರಿಸ್ಥಿತಿ ಎಂದರೆ ದಿನನಿತ್ಯದ ಒಂದು ಹೊಸ ಕಾನೂನು ಇದ್ದ ಹಾಗೆ ಇದೂ ಒಂದು ನಿಯಮವೆಂದು ಸರ್ಕಾರಿ ನೌಕರರು ಭಾವಿಸುತ್ತಿರುವುದರಿಂದ ಕೆಲಸದ ವೇಳೆಯಲ್ಲಿ ಖಾಲಿ ಖುರ್ಚಿಗಳನ್ನು ಈಗ ನಾವು ಕಾಣಬಹುದು. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೆಚ್ಚಿನ ಗಮನ ಕೊಡುವುದು ಅಗತ್ಯವೆಂದು ನನ್ನ ಭಾವನೆ. ಇನ್ನು ಸರ್ಕಾರಿ ಸೇವೆಯಲ್ಲಿರತಕ್ಕ ಜನರಲ್ಲಿ ಪ್ರಮುಖವಾಗಿ ಎರಡು ಭಾಗವನ್ನು ಮಾಡಿದ್ದಾರೆ; ಒಂದನೆಯದು ಐ.ಎ.ಎಸ್. ಕೆ.ಎ.ಎಸ್. ಎಂದು ಮತ್ತು ಎರಡನೆಯದಾಗಿ ಉಳಿದವರನ್ನು ಕ್ಲಾಸ್, 1,2,3,4, ಈ ಪ್ರಕಾರ ವಿಂಗಡಣೆ ಮಾಡಿದ್ದಾರೆ. ಹಿಂದೆ ರಾಜ್ಯಾಂಗದಲ್ಲಿ ಐ.ಸಿ.ಎಸ್. ಆಫೀಸರ್ಸ್ ಎಂದು ಏನು ಇದ್ದರೋ ಅವರು ಅನೇಕ ಸೌಲಭ್ಯಗಳನ್ನು ಪಡೆಯುತ್ತಿದ್ದರು ಅವರ ಪಟ್ಟಿಯನ್ನು ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. The present IAS Officers have almost stepped into the shoes of the ICS Officers ಇದನ್ನು ದೇಶದಲ್ಲಿ ತಪ್ಪಿಸಬೇಕು ; ಇಲ್ಲದಿದ್ದರೆ ಏನಾಗುತ್ತದೆಂದರೆ, ಸರ್ಕಾರಿ ಸೇವೆಯಲ್ಲಿರತಕ್ಕ ಒಂದು ವರ್ಗಕ್ಕೂ ಮತ್ತೊಂದು ವರ್ಗಕ್ಕೂ ಬೃಹತ್ ವ್ಯತ್ಯಾಸ ಮಾಡಿದಂತಾಗುತ್ತದೆ. ಆದಕ್ಕೋಸ್ಕರ ನಮ್ಮ ರಾಜ್ಯಾಂಗದಲ್ಲಿ ಆರ್ಟಿಕಲ್ 309ನ್ನು ಸ್ಪಷ್ಟವಾಗಿಟ್ಟಿದ್ದಾರೆ. ಕೇಂದ್ರ ಸರ್ಕಾರದ ನೌಕರರಿಗೆ ಸಂಬಂಧಪಟ್ಟ ಕಾನೂನನ್ನು ಮಾಡತಕ್ಕ ಶಕ್ತಿ ಪಾರ್ಲಿಮೆಂಟಿಗೆ ಇದೆ ಮತ್ತು ಕೇಂದ್ರ ಸರ್ಕಾರಕ್ಕೆ ಇದೆ ನಮಗೂ ಸಹ ಅದೇ ರೀತಿ ಇದೆ. That has been specifically stated in Article 309 of the Constitution of India: "Subject to the provisions of this Constitution Acts of

the appropriate Legislature may regulate the recruitment, and conditions of service of persons appointed, public service and posts in connection with the affairs of the Union or of any State.

Provided that it shall be competent for the President or such person as he may direct in the case of services and posts in connection with the affairs of the Union, and for the Governor of a State or such person as he may direct in the case of services and posts in connection with the affairs of the State, to make rules regulating the recruitment and the conditions of service of persons appointed, to such services and posts until provision in that behalf is made by our under an Act of theappropriate Legislature under this article and any rules so made shall have effect subject to the provisions of any such Act." ಈ ಬಗ್ಗೆ ಪವರ್ಸ್‌ನ್ನು ಕೇಂದ್ರದ ನೌಕರರಿಗೆ ಕೇಂದ್ರ ಸರ್ಕಾರದವರಿಗೆ ಬಿಟ್ಟರೆ, ರಾಜ್ಯ ಸರ್ಕಾರದ ಸೇವೆಯಲ್ಲಿರುವವರ ಬಗ್ಗೆ ನಮ್ಮ ಲೆಜಿಸ್ಲೇಚರಿಗೆ ಪವರ್ ಇದ್ದರೂ ಇಲ್ಲಿಯವರೆಗೆ ಏನುಮಾಡಿದ್ದಾರೆಂದು ಕೇಳಬಯಸುತ್ತೇನೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಸರ್ಕಾರವನ್ನು ಕೇಳುವುದೇನೆಂದರೆ, ಸಿ ಸಿ ಎ ಮತ್ತು ಕೆ ಸಿ ಎಸ್ ಆರ್ 1966ನ್ನು 31-3-1971ರವರೆಗೆ ಏನು ತಿದ್ದುಪಡಿ ಮಾಡಿದ್ದೀರೋ ಅದರಲ್ಲಿ ಸರ್ಕಾರಿ ಸೇವೆಯಲ್ಲಿರತಕ್ಕ ನೌಕರರು ಯಾವರೀತಿ ನಡವಳಿಕೆಗಳನ್ನು, ಸಂಹಿತೆಯನ್ನು ಇಟ್ಟುಕೊಳ್ಳಬೇಕೆಂಬ ವಿಚಾರಗಳಿರುವುದರಿಂದ ಆ ಪ್ರತಿಯೊಬ್ಬ ಸರ್ಕಾರಿ ನೌಕರನಿಗೂ ಕೊಡಬೇಕು. ಅದರಲ್ಲಿ ಏನು ಹೇಳುತ್ತದೆಂದರೆ, ಸರ್ಕಾರಿ ನೌಕರರು ರಾಜಕೀಯದಲ್ಲಿ ಭಾಗವಹಿಸಬಾರದು ಮತ್ತು ಸಂಬಂಧವಿಲ್ಲದ ಇತರ ಅನೇಕ ಕೆಲಸಗಳಲ್ಲಿ ಭಾಗವಹಿಸಬಾರದು ಯಾವ ರೀತಿ ನಡವಳಿಕೆಯನ್ನಿಟ್ಟುಕೊಳ್ಳಬೇಕು, ಆಸ್ತಿಯನ್ನು ಯಾವ ರೀತಿ ಹೊಂದಬೇಕು, ಮೂವಬಲ್ಸ್ ಆಗಲಿ ಇಮ್ ಮೂವಬಲ್ಸ್ ಆಗಲಿ ಎಷ್ಟೆಷ್ಟು ಪ್ರಾಪರ್ಟಿ ಇಟ್ಟುಕೊಳ್ಳಬೇಕೆಂದು ಎಲ್ಲ ಹೇಳಿದೆ ಸರ್ಕಾರಿ ಸೇವೆಯಲ್ಲಿರತಕ್ಕ ಅಧಿಕಾರಿಗಳು ಸ್ವಾತಂತ್ರ್ಯ ಬಂದನಂತರ ಎಷ್ಟು ಜನ ಎಷ್ಟೆಷ್ಟು ಆಸ್ತಿ ಮಾಡಿದ್ದಾರೆಂಬುದನ್ನು ವಿಚಾರ ಮಾಡಿದ್ದೀರಾ? ಐಎಎಸ್. ಕೇಡರ್‌ನಲ್ಲಿರತಕ್ಕವರು ಲಕ್ಷಾಂತರ ರೂಪಾಯಿ ಬೆಲೆಬಾಳತಕ್ಕ ಆಸ್ತಿಯನ್ನು ಮಾಡಿದ್ದಾರೆ. ಕ್ಲಾಸ್ 1, ಅಧಿಕಾರಿಗಳು ಸಹ ಬೇಕಾದಷ್ಟು ಆಸ್ತಿಯನ್ನು ಮಾಡಿದ್ದಾರೆ. ಉದಾಹರಣೆಗೆ ಸೈಟ್ ಅಲಾಟ್‌ಮೆಂಟ್ ವಿಚಾರದಲ್ಲಿ ಸಿ ಐ.ಟಿ.ಬಿ. ಅವರು (ಈಗಿನವರಲ್ಲ) ಐಎಎಸ್. ಅಧಿಕಾರಿಗಳಿಗೆ 80 × 120 ಹಾಗೂ 150 × 200 ಸೈಟುಗಳನ್ನು ಕೊಟ್ಟಿದ್ದಾರೆ ಈ ರೀತಿ ಕೊಡುವುದಕ್ಕೆ ಯಾವ ಕಾನೂನಿನಲ್ಲಿ ಪ್ರಾವಿಶನ್ ಇದೆ ಎಂಬುದನ್ನು ನಾನು ತಿಳಿಯಬೇಕಾಗಿದೆ.

ಶ್ರೀ ಎಂ. ಬಿ ರಾಮಸ್ವಾಮಿ —ನಿರ್ದಿಷ್ಟವಾದ ನಿದರ್ಶನಗಳಿದ್ದರೆ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ನಿರ್ದಿಷ್ಟವಾದ ನಿದರ್ಶನಗಳ ಬಗ್ಗೆ ಈಗ ಹೇಳುವುದು ಬೇಡ, ಆ ಬಗ್ಗೆ ಒಂದು ದೊಡ್ಡ ಪಟ್ಟಿಯೇ ನನ್ನ ಹತ್ತಿರ ಇದೆ

ಉಪಾಧ್ಯಕ್ಷರು.—ಸರಿಯಾದ ಆಧಾರ ಇದ್ದರೆ ಕೆಲವು ಹೆಸರುಗಳನ್ನಾದರೂ ಹೇಳಿ.

SRI S. BANGARAPPA.—You know my politics. Once I say something it must be based on facts and figures; otherwise I do not say. I am having the list and I can send it to the Chief Minister later on and not now.

SRI D. DEVARAJA URS.—They are general observations.

SRI S BANGARAPPA.—It is true. what I am making general observations. I want to know why special treatment is accorded to an I.A.S Officer. After all, the rules of the C.I.T.B. treat all officers on part. ಅವರನ್ನು ಸ್ಪೆಷಲ್ ಆಗಿ ಟ್ರೀಟ್ ಮಾಡಿದ್ದಾರೆಂದು ಎಲ್ಲರಿಗೂ ಗೊತ್ತಿದೆ.

ಆಸ್ತಿ ಒಂದು ಲಕ್ಷ ರೂಪಾಯಿಗಿಂತ ಮೀರಿರಬಾರದೆಂದು ತಮ್ಮ ಸಂಹಿತೆಯಲ್ಲಿ ಇದೆ. ಆದರೆ ಈ ರೂಲ್ಸನ್ನು ಎಷ್ಟು ಜನ ಅಧಿಕಾರಿಗಳು, ಇಲಾಖೆ ಮುಖ್ಯಾಧಿಕಾರಿಗಳು, ಕಮೀಶನರ್‌ಗಳು ಫಾಲೋ ಮಾಡಿದ್ದಾರೆ? ಎಷ್ಟು ಜನ ಫಾಲೋ ಮಾಡಿಲ್ಲ ಎಂಬ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ? ಹಾಗೆ ಬಂದಿದ್ದ ಪಕ್ಷದಲ್ಲಿ ಎಷ್ಟು ಜನರ ಮೇಲೆ ಕ್ರಮ ತಗೆದುಕೊಂಡಿದ್ದೀರಿ ಎಂಬ ವಿಚಾರವನ್ನು ತಿಳಿಯಬೇಕಾಗಿದೆ. ಈ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿಗಿಂತ ಹೆಚ್ಚಿನ ಆಸ್ತಿ ಇದ್ದಾಗ ಏನು ಮಾಡಬೇಕೆಂಬ ಬಗ್ಗೆ ನಾನು ಒಂದು ಸಲಹೆ ಕೊಡಬಯಸುತ್ತೇನೆ. ಮಾನ್ಯ ಮಂತ್ರಿಗಳು ಆಡಳಿತದಲ್ಲಿ ಒಂದು ದೊಡ್ಡ ಗುರಿಯನ್ನಿಟ್ಟುಕೊಂಡಿದ್ದಾರೆ. ಆದರೆ ಕೆ.ಸಿ.ಎಸ್.ಆರ್. 1966ಕ್ಕೆ ವಿರುದ್ಧವಾಗಿ ಅಧಿಕಾರಿಗಳು ಏನು ಆಸ್ತಿಯನ್ನು ಹೊಂದಿದ್ದಾರೋ ಅವರನ್ನು ತಮ್ಮ ಸಂಹಿತೆ ಪ್ರಕಾರ ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲವೆ? It has been our experience that the net result of these rules is a big zero. ಅದಕ್ಕೆ ಏನು ಮಾಡಬೇಕೆಂದರೆ ನಾನು ಒಂದು ಸಲಹೆಯನ್ನು ಕೊಡುವುದೇನೆಂದರೆ, ಆಲ್ ಸರ್ವೀಸಸ್ ಆಕ್ಟ್ ಎಂಬುದನ್ನು ಮಾಡಿ ಅದರಲ್ಲಿ ಏನೇನು ವಿಷಯಗಳನ್ನು ಕವರ್ ಮಾಡಬೇಕೆಂದರೆ ಇದೇ ಕೆ.ಸಿ.ಎಸ್.ಆರ್. ಏನು ಇದೆ ಅದನ್ನು ತಾವು ಆಕ್ಟ್ ಆಗಿ ಈ ಸದನಕ್ಕೆ ತೆಗೆದುಕೊಂಡು ಬಂದರೆ ನಾವು ಪಾಸ್ ಮಾಡೋಣ. ಅದಕ್ಕೆ ಅಧಿಕಾರಿಗಳ ಗ್ರಿವೆನ್ಸಸ್ ಏನಾದರೂ ಇದ್ದರೆ let there be a Tribunal constituted for that purpose and let it go deep into the matter and decide the grievances of the civil servants. so for as punishment is concerned, if any officer contravenoes the rules or the provisions of the proposed Act there should be an agency to punish that officer. Which is that officer? Which is that agency? ವಿಜಿಲೆನ್ಸ್ ಕಮಿಷನ್ನಿಗೆ ಕೊಡಬೇಕಾಗುತ್ತದೆ. ಅಥವಾ ಜುಡಿಷಿಯಲ್ ಆಫೀಸರು ಇರತಕ್ಕ ಟ್ರಿಬ್ಯುನಲ್‌ಗೆ ಕೊಡಬೇಕಾಗುತ್ತದೆ. ಈ ರೀತಿ ಮಾಡದಿದ್ದರೆ ಆಫೀಸರನ್ನು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಒಬ್ಬ ಆಫೀಸರು ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಆಸ್ತಿ ಮಾಡಿದ್ದರೆ, ಅದನ್ನು ಪ್ರಕಟ ಮಾಡತಕ್ಕ ಅಧಿಕಾರ ಇರಬೇಕು If an officer acquires property contraveing the rule that has to be placed on the Table. If an officer acqulres property costing more than one lakh of rupees either in his name or in the name of any member of his family, that should be placed on the Table. ಯಾವುದೇ ಅವರ ಸಂಬಂಧೀಕರ ಹೆಸರಿನಲ್ಲಾಗಲಿ, ಸ್ನೇಹಿತರ ಹೆಸರಿನಲ್ಲಾಗಲೀ ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಆಸ್ತಿಯನ್ನು ಮಾಡಿಕೊಂಡಿದ್ದರೆ ಅಂಥಾದ್ದನ್ನು ಅಫಿಷಿಯಲ್ ಗೆಜೆಟ್‌ನಲ್ಲಿ ಪಬ್ಲಿಷ್ ಮಾಡಬೇಕು. ಏತಕ್ಕೆಂದರೆ ಜನಗಳು ಅದನ್ನು ತಿಳಿದುಕೊಳ್ಳಬೇಕು. ಸರ್ವೀಸಸ್ ಆಕ್ಟ್ 309 ಆರ್ಟಿಕಲ್ ಪ್ರಕಾರ We have ample powers to bring a legislation to meet this purpose.

ಅನೇಕ ಡಿಪಾರ್ಟ್‌ಮೆಂಟ್‌ಗಳಲ್ಲಿ ಅನೇಕ ತಾರತಮ್ಯಗಳು ಇವೆ. ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ವಿಷಯದಲ್ಲಿ, ಪ್ರಮೋಷನಲ್ ವಿಷಯದಲ್ಲಿ ಅನೇಕ ತಾರತಮ್ಯಗಳು. ಇವುಗಳನ್ನು ಸರಿಪಡಿಸಬೇಕು. ಈಗ ಉದಾಹರಣೆಗೆ ಹೇಳುವುದಾದರೆ ಹಾರ್ಟಿಕಲ್‌ಚರಲ್ ಡಿಪಾರ್ಟ್‌ಮೆಂಟ್‌ನಲ್ಲಿ, ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟ್‌ನಲ್ಲಿ ಇನ್ನೂ ಕೆಲವು ಡಿಪಾರ್ಟ್‌ಮೆಂಟ್‌ಗಳಲ್ಲಿ ಪ್ರಮೋಷನ್ ಕೊಡುವ ಕೋಟಾವನ್ನು ಫಿಕ್ಸ್ ಮಾಡಬೇಕು. ಸೀನಿಯಾರಿಟಿ ಲಿಸ್ಟ್ ಅನ್ನು ಸರಿಯಾಗಿ ಮೆಂಟೇನ್ ಮಾಡಿ ಅದರ ಪ್ರಕಾರ ಪ್ರಮೋಷನ್‌ಗಳನ್ನು ಕೊಡಬೇಕು. ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಅನ್ನು ಬೇಗ ಫೈನಲೈಜ್ ಮಾಡಬೇಕು. ಸೀನಿಯಾರಿಟಿ ಲಿಸ್ಟ್‌ನಲ್ಲಿ ಹೆಚ್ಚು ಕಡಿಮೆ ಆಗಿ, ಸರ್ವೀಸ್ ಮ್ಯಾಟರ್‌ಗಳಲ್ಲಿ ಸರ್ಕಾರದವರು ತಾರತಮ್ಯ ಮಾಡಿದ್ದಾರೆನ್ನುವ ಕಾರಣದ ಮೇಲೆ ಅನೇಕ ಆಫೀಸರು ಹೈಕೋರ್ಟಿಗೆ ರಿಟ್ ಪಿಟಿಷನ್ ಹಾಕಿದ್ದಾರೆ. ಇಂಥಾ ರಿಟ್ ಪಿಟಿಷನ್‌ಗಳು ಅನೇಕ ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇವೆ. ಇದನ್ನೆಲ್ಲಾ ತಪ್ಪಿಸುವ ದೃಷ್ಟಿಯಿಂದ ಆಲ್ ಸರ್ವೀಸಸ್ ಆಕ್ಟ್ ಮಾಡಿ ಇದನ್ನು ತೀರ್ಮಾನ ಮಾಡುವ ಅಧಿಕಾರವನ್ನು ಟ್ರಿಬ್ಯುನಲ್‌ಗೆ ಕೊಡಬೇಕು. ಆ ರೀತಿ ಮಾಡುವುದಾದರೆ ನೌಕರರು ಸುಲಭವಾಗಿ ತಮ್ಮ ಗ್ರಿವೆನ್ಸಸ್ ಅನ್ನು ಟ್ರಿಬ್ಯುನಲ್‌ನಲ್ಲಿ ರೆಡ್ರೆಸ್ ಮಾಡಿಕೊಳ್ಳಬಹುದು. ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳು

ತ್ತೇನೆ. ಆಲ್ ಸರ್ವೀಸಸ್ ಆಕ್ಟ್ ಮಾಡಿದರೆ ಮಾತ್ರ ಅಡ್ಮಿನಿಸ್ಟ್ರೇಟೀವ್ ಬಿಹೇವಿಯರ್‌ನಲ್ಲಿ ಮಾರ್ವೆಲೆಸ್ ಚೇಂಜಸ್ ತರುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಆ ಒಂದು ಕೆಲಸವನ್ನು ಮಾಡಬೇಕು. ಅದಕ್ಕಾಗಿ ಆರ್ಟಿಕಲ್ 309 ಅನ್ನು ತಿದ್ದುಪಡಿ ಮಾಡಬೇಕು ಎಂದು ನಾನು ಹೇಳಬಯಸುತ್ತೇನೆ.

ಇನ್ನು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳು ವುದಕ್ಕೆ ಅಪೇಕ್ಷೆ ಮಾಡುತ್ತೇನೆ. ಮೊದಲು ಬೆಂಗಳೂರು ನಗರದಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಸೈಟುಗಳನ್ನು ಫಾರಂ ಮಾಡಿ ಜನಗಳಿಗೆ ಅವುಗಳನ್ನು ಹಂಚುತ್ತಿತ್ತು. ಇದಕ್ಕೆ ಹೌಸಿಂಗ್ ಬೋರ್ಡ್ ಮತ್ತು ಪ್ಲಾನಿಂಗ್ ಅಥಾರಿಟಿ ಇವೆಲ್ಲಾ ಸೇರಿತ್ತು. ಈಗ ಇಲ್ಲಿ ಡೆಲ್ಲಿ ಡೆವಲಪ್‌ಮೆಂಟ್ ಅಥಾರಿಟಿಯ ಮಾದರಿಯಲ್ಲಿ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯನ್ನು ಮಾಡಿದ್ದಾರೆ. ಡೆಲ್ಲಿ ಡೆವಲಪ್‌ಮೆಂಟ್ ಅಥಾರಿಟಿಗೆ ಅದು ಪ್ರಾರಂಭವಾದಾಗ ಕೇಂದ್ರ ಸರ್ಕಾರದವರು 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಮೇಲೆ ಡೆಲ್ಲಿ ಡೆವಲಪ್‌ಮೆಂಟ್ ಅಥಾರಿಟಿಯವರು 5 ಕೋಟಿ ರೂಪಾಯಿಗಳ ಸ್ಪೆಷಲ್ ಅಸಿಸ್ಟೆಂನ್ಸ್ ಪಡೆದುಕೊಂಡು 5 ಸಾವಿರ ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಂಡರು ಎಂದು ನಾನು ಕೇಳಿದ್ದೇನೆ. ಅದೇ ರೀತಿ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಮಾಡಿದ ಮೇಲೆ ಅದರ ಪವರ್ಸ್ ಏನು ಎಂಬುದನ್ನು ಡಿಫೈನ್ ಮಾಡಿಲ್ಲ. ಹೌಸಿಂಗ್ ಬೋರ್ಡಿನ ಪವರ್ಸ್ ಏನು ಎಂಬುದು ಡಿಫೈನ್ ಆಗಿಲ್ಲ. ಅದು ಇನ್ನೂ ಆಫೀಸರ್ ಹತ್ತಿರ ಡಿಸ್‌ಕ್ರಷನ್‌ನಲ್ಲೇ ಇದೆ. ಆದ್ದರಿಂದ ಡೆಲ್ಲಿ ಡೆವಲಪ್‌ಮೆಂಟ್ ಅಥಾರಿಟಿಗೆ ಕೇಂದ್ರ ಸರ್ಕಾರ ದವರು ಯಾವ ರೀತಿ ಹಣ ಸಹಾಯ ಮಾಡಿದ್ದಾರೆಯೋ ಅದೇ ರೀತಿ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೂ ಕೂಡ ಎರಡು ಕೋಟಿ ರೂಪಾಯಿಗಳ ಫೈನಾನ್ಷಿಯಲ್ ಅಸಿಸ್ಟೆಂಟ್ಸ್ ಕೊಡಬೇಕು, ಮತ್ತು ಮೂರು ಕೋಟಿ ರೂಪಾಯಿಗಳ ಲೋನ್ ಕೊಡಬೇಕು. ಈ ಹಣವನ್ನು 10 ವರ್ಷ ಅಥವಾ 15 ವರ್ಷಗಳ ಇನ್‌ಸ್ಟಾಲ್‌ಮೆಂಟಿನಲ್ಲಿ ವಾಪಸ್ಸು ಪಡೆಯುವಂತೆ ಮಾಡಬೇಕು. ಈ ರೀತಿ ಸರ್ಕಾರದವರು 5 ಕೋಟಿ ರೂಪಾಯಿಗಳ ಹಣ ಸಹಾಯವನ್ನು ಬಿ.ಡಿ.ಎ.ಗೆ ಕೊಟ್ಟರೆ ಆಗ ಅದು ಒಂದು ದೊಡ್ಡ ಕೆಲಸವನ್ನು ಸಾಧನೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಈ ಬಿ.ಡಿ.ಎ.ನಲ್ಲಿ ಒಂದು ದೊಡ್ಡ ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಬೆಂಗಳೂರು ಸಿಟಿಯನ್ನು ಒಂದು ಸುಂದರ ನಗರವನ್ನಾಗಿ ಮಾಡುವ ಯೋಜನೆಯೂ ಇದರಲ್ಲಿ ಸೇರಿದೆ. ಬೆಂಗಳೂರು ನಗರ ದಿನೇ ದಿನೇ ಬೆಳೆಯುತ್ತಿದೆ. ಇಲ್ಲಿ ಕೈಗಾರಿಕೆಗಳು ಬೆಳೆಯುತ್ತಿವೆ. ವ್ಯಾಪಾರ ವಾಣಿಜ್ಯ ಜಾಸ್ತಿಯಾಗು ತ್ತಿದೆ. ಇದರಿಂದಾಗಿ ಅಲ್ಲಿ ಟ್ರಾಫಿಕ್ ಕೂಡ ಜಾಸ್ತಿಯಾಗುತ್ತಿದೆ. ಆದ್ದರಿಂದ ಬೊಂಬಾಯಿ ನಗರವನ್ನು ಯಾವ ರೀತಿ ಗ್ರೇಟರ್ ಬೊಂಬೆ ಎಂದು ಮಾಡುತ್ತಿದ್ದಾರೆಯೋ ಅದೇ ರೀತಿ ಇಲ್ಲಿಯೂ ಬೆಂಗಳೂರನ್ನು ಡೆವಲಪ್ ಮಾಡಬೇಕು ಎಂದು ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಟ್ರಾಫಿಕ್ ಒತ್ತಡ ಜಾಸ್ತಿ ಇದೆ. ಆದ್ದರಿಂದ ದೊಡ್ಡ ದೊಡ್ಡ ರೋಡುಗಳು ಎಂದರೆ ಈಗ ಮೈಸೂರು ರೋಡು ಏನಿದೆ ಅದನ್ನು ಹೊಸಹಳ್ಳಿ, ಸಾಣೆಗುರುವನಹಳ್ಳಿ ಮೂಲಕ ತುಮಕೂರಿಗೆ ಸೇರಿಸಬೇಕು. ಹಾಗೆಯೇ ರಾಜಾಜಿನಗರದ ಟ್ರಾಫಿಕ್ ಅನ್ನು ಸಹ ಕಡಿಮೆ ಮಾಡಬೇಕು. ಮದ್ರಾಸ್ ರೋಡನ್ನು ಮೈಸೂರು ರೋಡಿಗೆ ಸೇರಿಸಬೇಕು. ಈ ರೀತಿ ಮಾಡುವುದಕ್ಕೆ ಯೋಚನೆ ಮಾಡಬೇಕು.

ಬೆಂಗಳೂರು ನಗರವನ್ನು ಸುಂದರನಗರವನ್ನು ಮಾಡುವುದಕ್ಕಾಗಿ ನಾನು ಇನ್ನೊಂದು ಸಲಹೆಯನ್ನು ಕೊಡುತ್ತೇನೆ. ಬೆಂಗಳೂರಿನಲ್ಲಿರುವ ಲಾಲ್‌ಬಾಗ್ ಬಹಳ ಹೆಸರುವಾಸಿಯಾಗಿದೆ. ಈ ಕಬ್ಬನ್‌ಪಾರ್ಕ್ ಮತ್ತು ಲಾಲ್‌ಬಾಗ್‌ಗಳಲ್ಲಿ ಜನಗಳ ಒತ್ತಡವನ್ನು ಕಡಿಮೆ ಮಾಡುವುದಕ್ಕೆ ರಾಜಾಜಿನಗರದಲ್ಲಿ ಪಕ್ಕದಲ್ಲಿಯೇ ಮತ್ತೊಂದು ಲಾಲ್‌ಬಾಗ್ ಅನ್ನು ಏತಕ್ಕೆ ಪ್ರಾರಂಭ ಮಾಡಬಾರದು ? ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನಲ್ಲಿ ಸೈಟುಗಳನ್ನು ವಿತರಣೆ ಮಾಡುವುದಕ್ಕೆ ಸಂಬಂಧಪಟ್ಟ ಹಾಗೆ 20 ಅಂಶಗಳ ಒಂದು ದೊಡ್ಡ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಎಂದು ನಾನು ಕೇಳಿದ್ದೇನೆ. ಸೈಟುಗಳನ್ನು ವಿತರಣೆ ಮಾಡುವ ಬಗ್ಗೆ ಹಾಗೂ ಬಡವರಿಗೂ ಸೈಟು ಗಳನ್ನು ಕೊಡುವ ಬಗ್ಗೆ ಸಿ.ಐ.ಟಿ.ಬಿ.ಯವರು ಹೆಚ್ಚು ಗಮನ ಕೊಟ್ಟಿದ್ದಾರೆ ಎನ್ನುವ ವಿಷಯವನ್ನು ನಾನು ಕೇಳಿದ್ದೇನೆ. ಅದಕ್ಕೆ ಬೆಂಬಲ ಕೊಡುವ 20 ಅಂಶಗಳ ಕಾರ್ಯಕ್ರಮ ಕೂಡ ಇದರಲ್ಲಿ ಬರುತ್ತದೆ. ಆದ್ದರಿಂದ ಆದಷ್ಟು ಯಾರು ಯಾರಿಗೆ ಸೈಟುಗಳು ಇಲ್ಲವೋ, ಅದರಲ್ಲೂ ಬಡವರಿಗೆ ಹೆಚ್ಚು ಸೈಟುಗಳನ್ನು ಒದಗಿಸತಕ್ಕ ಒಂದು ಕಾರ್ಯವನ್ನು ಮಾಡಬೇಕು. ಜೊತೆಗೆ

ನಗರದಲ್ಲಿ ಗಿಡಮರಗಳನ್ನು ಜಾಸ್ತಿ ಬೆಳೆಸಬೇಕು. ಇದು ದೊಡ್ಡ ಯೋಜನೆ, ಈ ಯೋಜನೆಗೆ ಬಿ.ಡಿ.ಎ. ಹೆಚ್ಚು ಗಮನ ಕೊಡಬೇಕು. ಈ ದೃಷ್ಟಿಯಿಂದ ಹೆಚ್ಚಿನ ಹಣ ಮತ್ತು ಅಧಿಕಾರವನ್ನು ಸರ್ಕಾರದವರು ಕೊಡಬೇಕು.

ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಕೆಲವೊಂದು ವಿಚಾರಗಳನ್ನು ಹೇಳುವುದಕ್ಕೆ ನಾನು ಅಪೇಕ್ಷೆ ಮಾಡುತ್ತೇನೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಪೋಲೀಸ್ ಇಲಾಖೆಯ ಬಗ್ಗೆ ಮಾತನಾಡಿದ್ದಾರೆ. ಪೋಲೀಸ್ ಇಲಾಖೆ ಯಾವ ರೀತಿ ನಡೆಯುತ್ತದೆ ಎಂಬುದನ್ನು ಹೇಳಿದ್ದಾರೆ, ಮತ್ತೆ ಕೆಲವು ಅಪಾದನೆಗಳನ್ನು ಮಾಡಿದ್ದಾರೆ. ಈಗ ಉದಾಹರಣೆಗೆ ಹೇಳುವುದಾದರೆ, ಎಮರ್ಜೆನ್ಸಿ ಪವರ್ಸ್‌ನ್ನು ದುರುಪಯೋಗ ಪಡಿಸಿಕೊಂಡಿರತಕ್ಕ ಅಧಿಕಾರಿಗಳನ್ನು ನಾವು ಬೇಕಾದಷ್ಟು ಕಂಡಿದ್ದೇವೆ. ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ನಂಜನಗೂಡು ತಾಲ್ಲೂಕಿನ ಮಾನ್ಯ ಕೆ. ಬಿ, ಶಿವಯ್ಯನವರ ಕ್ಷೇತ್ರದಲ್ಲಿ ಒಬ್ಬ ಹರಿಜನ ಮಾದಯ್ಯ ಎನ್ನತಕ್ಕವರನ್ನು ಅರೆಸ್ಟ್ ಮಾಡಿದ್ದಾರೆ. That boy by name Madiah was arrested under section 419 of the Indian Penal Code on charges of impersonation. ಇಂಪರ್ಸೊನೇಷನ್ ಮಾಡುತ್ತಾ ಇದ್ದಾರೆ. ಹರಿಜನ ಬಾಯನ್ನು ಗ್ರಾಮಸೇವಕ ಎಂದು ಪ್ರಚಾರ ಮಾಡುತ್ತಾ ಇದ್ದಾರೆ. ಆಕ್ಚುಯಲ್ ಆಗಿ ಅಸಿಸ್ಟೆಂಟ್ ಕಮಿಷನರ್ ಅವನನ್ನು ಅಪಾಯಿಂಟ್ ಮಾಡಿದ್ದಾರೆ. Actually there is an order passed by the Assistant Commissioner of Nanjangud Taluk asking him to find out the persons who have pledged the articles and with whome they have pledged it ಪತ್ತೆ ಹಚ್ಚುವುದಕ್ಕೆ ಅಪಾಯಿಂಟ್‌ಮೆಂಟ್ ಮಾಡಿರತಕ್ಕ ಆರ್ಡರ್ ಇದೆ. ಇದನ್ನು ಸಹಿಸದೇ ಇರತಕ್ಕ ಕೆಲವು ಜನ ಇವನು ಗ್ರಾಮಸೇವಕ ಎಂದು ಪ್ರಚಾರಮಾಡಿ, ಅಸಿಸ್ಟೆಂಟ್ ಕಮಿಷನರ್ ಕೊಟ್ಟಿರತಕ್ಕ ಆರ್ಡರನ್ನು ತೋರಿಸಿದರೂ ಕೂಡ ಹಣವನ್ನು ತಿನ್ನುತ್ತಾನೆ ಎಂದು ಸೆಕ್ಷನ್ 419ರ ಪ್ರಕಾರ ಅರೆಸ್ಟ್ ಮಾಡಿದ್ದಾರೆ. He was remanded to Judicial custody for three to four days. No charge-sheet is filed and the matter is still under investigation. ಕೊನೆಗೆ ಅರೆಸ್ಟ್ ಮಾಡಿಸಿದರು. ಗಟವಾಡಿ ಪುರದ ವಿ. ಪಿ. ಚೇರ್‌ಮನ್ ಮತ್ತು ಉಳಿದಿರತಕ್ಕ ಜನ ಮೋಟಾರ್ ಸೈಕಲ್‌ನಲ್ಲಿ ಬಂದು ಇವನನ್ನು ತೆಗೆದುಕೊಂಡು ಹೋಗಿ ಪೋಲೀಸ್ ಸ್ಟೇಷನ್‌ಗೆ ಕೊಟ್ಟು ಕೇಸ್ ಹಾಕಿಸಿಬಿಟ್ಟು ಗ್ರಾಮಸೇವಕ ಎಂದು ಇಂಪರ್ಸೊನೇಷನ್ ಮಾಡಿ ಎಂದು ಚಾರ್ಜ್ ಮಾಡಿದ್ದಾರೆ Assistant Commissioner of Nanjangud Taluk has written a letter to the Sub-Inspector stating that he had asked the boy to go into that matter and he has asked according to the misfunctions given by him, ಎನ್ನತಕ್ಕ ಮಾತನ್ನು ಹೇಳಿದರೂ ಕೂಡ ಅವರ ಮಾತನ್ನು ಮೀರಿ ಸಬ್ ಇನ್‌ಸ್ಪೆಕ್ಟರ್ ನಡೆದುಕೊಂಡಿದ್ದಾರೆ. This matter is reported to the Dy. S.P. who in turn has reported to the S.P. to keep the Sub-Inspector under suspension. Even the S.P. has also recomended for keeping the Sub Inspector under suspension.

I want to know from the Government why hitherto the said Sub-Inspector has not been kept under suspension though both the Assistant Commissioner and the Superintendent of Police have recommended for keeping him under suspension? ಇವತ್ತು 20 ಪಾಯಿಂಟ್ ಎಕನಾಮಿಕ್ ಪ್ರೋಗ್ರಾಂನ್ನು ಅನೌನ್ಸ್ ಮಾಡುತ್ತೀರಿ. ಇದರ ಬಗ್ಗೆ ಕಾರ್ಯಕರ್ತರು ಹೋದಾಗ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಪೋಲೀಸ್ ಆಫೀಸರು ಅನ್ಯಾಯ ಮಾಡುತ್ತಾರೆ. ನನಗೆ ಮಾತನಾಡುವುದಕ್ಕೆ ಕಾಲ ಹೆಚ್ಚಿಲ್ಲ. ಪೋಲೀಸ್ ಇಲಾಖೆಯಲ್ಲಿ ಲಂಚ ಗುಳಿತನ ಕಡಿಮೆಯಾಗಿಲ್ಲ ಎನ್ನತಕ್ಕ ಅಂಶವನ್ನು ಸರ್ಕಾರದವರು ಒಪ್ಪಬೇಕು. ಹಿಂದೆ ಈ ಸದನ ದಲ್ಲಿ, ಲಂಚ ಇಲ್ಲ ಎನ್ನತಕ್ಕ ಮಾತನ್ನು ಹೇಳುವುದಿಲ್ಲ, ಆದರೆ ನೀವು ಹೇಳುವಷ್ಟು ಇಲ್ಲ ಎಂದು

ಎನ್ನುವ ಮಾತನ್ನು ಹೇಳಿದ್ದಾರೆ. ಇದು ಎಷ್ಟರ ಮಟ್ಟಿಗೆ ಇದೆ, ಯಾವ ಪ್ರಮಾಣದಲ್ಲಿ ಇದೆ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಸದನಕ್ಕೆ ಹೇಳಬೇಕು ಎಂದು ಕೇಳಿಕೊಂಡು, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಹೊರಕೇರಿ (ಗುಳೇದಗುಂಡ್).—ಮಾನ್ಯ ಸಭಾಧ್ಯಕ್ಷರೇ, ನಮ್ಮ ರಾಜ್ಯದ ಬೃಹತ್, ಮಧ್ಯಮ ಮತ್ತು ಚಿಕ್ಕ ನೀರಾವರಿಗಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳು, ರಾಜ್ಯ ಮಂತ್ರಿಗಳು ಮಂಡಿಸಿದ ಬೇಡಿಕೆಗಳನ್ನು ನಾನು ಸ್ವಾಗತ ಮಾಡುತ್ತಾ ಒಂದೆರಡು ಮಾತುಗಳನ್ನು ಹೇಳುತ್ತಾ ಇದ್ದೇನೆ. ಈ ನೀರಾವರಿ ವಿಚಾರ ಎಂದರೆ, ಆಹಾರಕ್ಕಿಂತಲೂ ನೀರು ಮೊದಲನೆಯದು ಎಂದು ಹೇಳಬಹುದು. ನೀರಿಂದಲೇ ಆಹಾರ ಹುಟ್ಟುತ್ತದೆ. ನೀರು you here live ಹೀಗೆ ಕನ್ನಡದಲ್ಲಿ ನೀರು ಶಬ್ದಕ್ಕೆ ಅರ್ಥ ಪೂರ್ಣವಿದೆ. ಆ ಪ್ರಕಾರ ನೀರಾವರಿಗೆ ಮಹತ್ವ ಮತ್ತು ಪ್ರಾಶಸ್ತ್ಯ ಕೊಟ್ಟಿದ್ದುಂಟು. ಬೃಹತ್ ನೀರಾವರಿಯಲ್ಲಿ ಘಟಪ್ರಭ ಹೇಮಾವತಿ, ಹಾರಂಗಿ ಅಣೆಕಟ್ಟಿನಲ್ಲಿ ನೀರನ್ನು ಸಂಗ್ರಹಿಸುವಂತೆ ಪ್ರಾವಿಜನ್‌ನ್ನು ಬಜೆಟ್‌ನಲ್ಲಿ ಮಾಡಿದ್ದಾಗಿದೆ. ಮಲಪ್ರಭ ನದಿ ಬೆಳಗಾಂ ಧಾರವಾಡ, ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಹರಿಯುತ್ತಾ ಇದೆ. ಇದು ಹರಿಯತಕ್ಕ ಪ್ರಮಾಣ ಎಂದರೆ ಮಲೆನಾಡಿನಲ್ಲಿ ಮಲಪ್ರಭ ಪ್ರಾರಂಭವಾಗಿ ನಮ್ಮ ಬಯಲು ನಾಡಿನಲ್ಲಿ, ಬರಗಾಲದ ಪ್ರದೇಶದಲ್ಲಿ ಹರಿಯುತ್ತಾ ಇದೆ. ಅದಕ್ಕೆ ಮಲಪ್ರಭ ಎಡದಂಡೆ, ಬಲದಂಡೆ ಯೋಜನೆ ಎಂದು ಮಾಡಿ ಜನರಿಗೆ ವರ ಪ್ರದಾನ ತಂದುಕೊಟ್ಟಿದ್ದಾಗಿದೆ. ಇಂತಹ ಪ್ರಸಂಗದಲ್ಲಿ ಬೃಹತ್ ನೀರಾವರಿ, ಮಧ್ಯಮ ನೀರಾವರಿ ಮತ್ತು ಚಿಕ್ಕ ನೀರಾವರಿ ಸದ್ಯ ಪ್ರಸಂಗದಲ್ಲಿ ಉಪಯೋಗ ಮುಂದಿನ ಜನಾಂಗಕ್ಕೆ ಅತ್ಯಗತ್ಯವಾದ ಕೆಲಸ ಕಾರ್ಯಗಳು ಆಗುತ್ತಾ ಇವೆ. ಈಗ ಮಲಪ್ರಭಾ ನದಿಯಿಂದ ಕೆಲವೊಂದು ಭಾಗ ಮಾತ್ರ ನೀರಾವರಿಯಾಗುತ್ತಾ ಇದೆ. ನವಿಲುತೀರ್ಥದಲ್ಲಿ ಕಟ್ಟಿದ ಅಣೆಕಟ್ಟಿನಲ್ಲಿ ಸಂಗ್ರಹಿಸಿದ ನೀರಿನ ಸಾಮರ್ಥ್ಯದಿಂದ ಆ ಕ್ಷೇತ್ರದ ಬರಗಾಲದ ಬವಣೆ ತೀರಿಸುವಂಥ ಸಂದರ್ಭ ಬರಬಹುದು. ಆದರ ಮುಂದೆ ಇನ್ನೂ ಹಲವಾರು ಫಲವತ್ತಾದ ಕ್ಷೇತ್ರಗಳಿದ್ದು ಅದಕ್ಕೆ ನೀರಿನ ಅಗತ್ಯ ಇದೆಯೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಬೆಳಗಾಮಿನ ಖಾನಾಪುರ ತಾಲ್ಲೂಕಿನಲ್ಲಿ ಮಲಪ್ರಭ ಹುಟ್ಟಿ ಸಂಗಮದಬಳಿ ಕೃಷ್ಣ ನದಿಗೆ ಕೂಡುತ್ತಾ ಇದೆ. ಅದಕ್ಕೆ ಸಮಾಂತರವಾಗಿ ಮಹದಾಯಿ ನದಿ ಇದೆ. ಮಹದಾಯಿ ಎಂದರೆ ದೊಡ್ಡ ತಾಯಿ ಎಂದು. ಆ ನದಿ ಖಾನಾಪುರ ತಾಲ್ಲೂಕಿನಲ್ಲಿ ೨೦೦ ಇಂಚು ಮಳೆಬೀಳುವ ಪ್ರದೇಶದಲ್ಲಿ ಹುಟ್ಟಿ ಅಲ್ಲಿಂದ ಇದರ ವಿರುದ್ಧ ದಿಕ್ಕಿನಲ್ಲಿ ಬೆಳಗಾಮಿನ ಖಾನಾಪುರ ತಾಲ್ಲೂಕಿನಲ್ಲಿ ಹರಿದು ಗೋವಾದಲ್ಲಿ ಮುಂದುವರಿದು ಅರಬಿ ಸಮುದ್ರದಲ್ಲಿ ಕೂಡುತ್ತದೆ. ಈ ಮಹದಾಯಿ ನದಿಯ ಒಂದು ಹನಿ ನೀರನ್ನೂ ಆ ಕಡೆ ಜನ ಉಪಯೋಗಿಸಿಲ್ಲ, ಅದು ಸಮುದ್ರದಲ್ಲಿ ಬಿದ್ದು ವ್ಯರ್ಥವಾಗುತ್ತಿದೆ. ಗಂಗಾನದಿಯನ್ನು ಕಾವೇರಿಗೆ ಕೂಡಿಸಿ ಆ ಪ್ರದೇಶದಲ್ಲಿ ನೀರಾವರಿ ಅಭಿವೃದ್ಧಿ ಮಾಡುವಂಥ ಸಂದರ್ಭದಲ್ಲಿ ನಮ್ಮ ರಾಜ್ಯದೊಳಗೆ ಖಾನಾಪೂರಕ್ಕೆ ೬ ಮೈಲು ಅಂತರದಲ್ಲಿರುವ ಮಹದಾಯಿ ನೀರನ್ನು ಮಲಪ್ರಭಾಕ್ಕೆ ಕೂಡಿಸಿದರೆ ಅದರ ಸಾಮರ್ಥ್ಯ ಹೆಚ್ಚಾಗುತ್ತದೆ ಗುಲ್ಬರ್ಗ, ಬಿಜಾಪುರ ಜಿಲ್ಲೆಗಳಲ್ಲಿ ನೀರಾವರಿಯನ್ನು ವಿಸ್ತಾರ ಮಾಡಲಿಕೆ ಅನುಕೂಲವಾಗುತ್ತದೆ ನಮ್ಮ ಮುಖ್ಯ ಸಚಿವ ಅರಸರು ರಾಜ್ಯ ಸಂಪುಟದಲ್ಲಿ ಸಾಕಷ್ಟು ಹಣವನ್ನು ನೀರಾವರಿಗೆ ಅವಕಾಶ ಕೊಟ್ಟಿದ್ದಾಗಿದೆ. ಹಿಂದಿನ ೧೬ ವರ್ಷಗಳ ಅವಧಿಯಲ್ಲಿ ೨೨೬ ಕೋಟಿ ರೂಪಾಯಿ ಇತ್ತು. ನೀರಾವರಿ ಬಾಬಿನಲ್ಲಿ ಹೂಡಿದ ಬಂಡವಾಳ ೪೭೮ ಕೋಟಿಯಲ್ಲಿ ೩೯೦ ಕೋಟಿ ಮಾತ್ರ ಭಾರಿ ನೀರಾವರಿಗೆ ಇಟ್ಟು ೮೮ ಕೋಟಿಯನ್ನು ಮಧ್ಯಮ ಮತ್ತು ಸಣ್ಣ ನೀರಾವರಿಗೆ ಇಟ್ಟಿದ್ದಾರೆ. ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದು ಏನೆಂದರೆ, ಈ ಮಹದಾಯಿ ನೀರು ವ್ಯರ್ಥವಾಗಿ ಸಮುದ್ರವನ್ನು ಕೂಡಿ ಉಪ್ಪಾಗುವುದನ್ನು ತಪ್ಪಿಸಿ, ಮಲಪ್ರಭಾಕ್ಕೆ ಕೂಡಿಸಬೇಕು ಎಂದು ಅನೇಕ ತಾಂತ್ರಿಕ ತಜ್ಞರು ಸಮೀಕ್ಷೆ ಮಾಡಿದ್ದಾರೆ. ಈ ಮಹದಾಯಿ ನದಿ ಬೆಳಗಾಂನಲ್ಲಿ ೩೭ ಮೈಲಿ ಹರಿದು, ೨೫ ಮೈಲಿ ಗೋವಾದಲ್ಲಿ ಹರಿಯುತ್ತದೆ. ೧೨ ಟಿ.ಎಂ.ಸಿ.ಎಫ್.ಟಿ. ವಾಟರ್ ಬರುತ್ತದೆ. ತಜ್ಞರ ಅಭಿಪ್ರಾಯದ ಹಾಗೆ ೧ ಲಕ್ಷ, ೨೦ ಸಾವಿರ ಎಕರೆ ಕ್ಷೇತ್ರ ಹೆಚ್ಚಿಗೆ ವಿಸ್ತರಣೆ ಮಾಡಲಿಕ್ಕೆ ಬರುತ್ತದೆ.

4-00 P. M.

ನಮ್ಮ ಬಾದಾಮಿ ತಾಲ್ಲೂಕಿನಲ್ಲಿ ಮಲಪ್ರಭಾ ನದಿ ಹರಿದರೂ ಸಹ ಸಾಕಷ್ಟು ಎಕರೆ ನೀರಾವರಿ ಯಾಗಿಲ್ಲ. ಕಾಲುವೆಗಳ ಮೂಲಕ ನೀರನ್ನು ಹರಿಸಿ ಲಿಫ್ಟ್ ಇರಿಗೇಷನ್‌ಗೆ ಅನುಕೂಲ ಮಾಡಿದರೆ ಅಲ್ಲಿನ ಕೆಂಪು ಭೂಮಿಗೆ ಅನುಕೂಲವಾಗುತ್ತದೆ. ಗುಲ್ಬರ್ಗ ಜಿಲ್ಲೆ, ಹುನಗುಂದ ತಾಲೂಕಿನಲ್ಲಿ ಏತದ ನೀರಾವರಿಯನ್ನು ಕೊಟ್ಟರೆ ಸುಮಾರು ೫೦ ಸಾವಿರ ಎಕರೆ ಮೇಲ್ಪಟ್ಟು ನೀರಾವರಿಯಾಗುತ್ತದೆ. ಇಂಥ

ನೀರಾವರಿಯನ್ನು ನಮ್ಮ ಸರ್ಕಾರದವರು ಕೈಗೊಳ್ಳಲು ಸೂಕ್ತ ಕ್ರಮತೆಗೆದುಕೊಳ್ಳಬೇಕು. ನಾಳೆ ಮಹಾಜನ ವರದಿಯ ನಂತರ ಯಾವ ಭಾಗ ಎಲ್ಲಿ ಉಳಿಯುತ್ತದೆಯೋ ಏನು ಆಗುತ್ತವೆಯೋ ಗೊತ್ತಿಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಕೂಲಂಕುಷವಾಗಿ ಅಭ್ಯಾಸ ಮಾಡಿ, ರಾಜ್ಯಕ್ಕೆ ಇದು ಮಹತ್ವವಾದಂಥ ಹಾಗೂ ವರಪ್ರಧಾನವಾದಂಥ ಪ್ರಾಜೆಕ್ಟ ಆಗಿ ಮಾಡಿಕೊಡಬೇಕು. ಹಾಗೆಯೇ ಮಹಾದಾಯಿ ನದಿ, ನಮ್ಮ ಖಾನಾಪುರದ ಹತ್ತಿರ ೮೦೦ ಅಡಿಗಳ ಕೆಳಗೆ ಕೊಳದಲ್ಲಿ ಹರಿದು ಬರುತ್ತದೆ. ಇಲ್ಲಿ ಎಲೆಕ್ಟ್ರಿಸಿಟಿಯನ್ನು ಉತ್ಪತ್ತಿ ಮಾಡಲು ಅನುಕೂಲವಿದೆ. ಇದರಿಂದ ಅನೇಕ ರಾಜ್ಯಗಳಿಗೆ ನಾವು ವಿದ್ಯುಚ್ಛಕ್ತಿಯನ್ನು ಕೊಡಲು ಅನುಕೂಲವಾಗುತ್ತದೆ. ಈ ಎರಡು ಮಹತ್ತರ ಯೋಜನೆಗಳನ್ನು ಸರ್ಕಾರದವರು ಮಾಡಿಕೊಡಬೇಕು ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಪ್ರಾರ್ಥಿಸಿಕೊಂಡು ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್ ವೈ ಪಾಟೀಲ್ (ಸಿಂಧಗಿ).—ಮಾನ್ಯ ಸಭಾಧ್ಯಕ್ಷರೇ, ಇಲ್ಲಿ ನಾವುಗಳು ಔಪಚಾರಿಕವಾಗಿ ಮಾತನಾಡುವುದರಲ್ಲಿ ಯಾವ ಅರ್ಥವೂ ಇಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿದಂಥ ಬೇಡಿಕೆಯನ್ನು ಏಕೆ ವಿರೋಧ ಮಾಡುತ್ತೇನೆ ಎನ್ನತಕ್ಕದ್ದಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ. ವಿರೋಧ ಪಾರ್ಟಿಯ ಮನುಷ್ಯ, ನಾನು ವಿರೋಧ ಮಾಡುತ್ತೇನೆ ಎನ್ನತಕ್ಕದ್ದಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ, ವಿರೋಧ ಪಾರ್ಟಿಯ ಮನುಷ್ಯ, ನಾನು ವಿರೋಧಮಾಡುವುದು, ಆ ಕಡೆಯ ಪಾರ್ಟಿಯ ಜನರು ಅದನ್ನು ಸಮರ್ಥನೆ ಮಾಡುವುದು, ಇದು ಒಂದು ರೂಢಿಯಾದಂಥ ರೀತಿಯಲ್ಲಿ ಮಾತನಾಡುವುದು ಆಗಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೧೦ ಮೇಜರ್ ಪ್ರಾಜೆಕ್ಟಗಳು ಇವೆ. ನಾವು ನಿಮ್ಮನ್ನು ಈಗ ಕೇಳುವುದಕ್ಕಿಂತ ಯಾರುಆಡಳಿತವನ್ನು ನಡೆಸುತ್ತೀರೋ ಅವರು ಸ್ವಲ್ಪ ತಮ್ಮ ಆತ್ಮವನ್ನು ಮುಟ್ಟಿ ಕೊಂಡು ನಮಗೆ ಉತ್ತರಕೊಟ್ಟರೆ ಅದು ಸ್ವಲ್ಪ ಶೋಭಾಯಮಾನವಾಗುತ್ತದೆ ಈ ರೀತಿಯಾಗಿ ತಾವು ವಿಚಾರ ಮಾಡುವುದು ಒಳ್ಳೆಯದು. ಏಕೆಂದರೆ ಒಬ್ಬನಿಗೆ ೧೦ ಮಕ್ಕಳು ಇದ್ದು, ಒಬ್ಬ ಮಗನದು ಮಾತ್ರ ಲಗ್ನ ಮಾಡದೆ ಇದ್ದರೆ ಅವನ್ನು ಸ್ಮಶಾನಕ್ಕೆ ಹೋಗಬೇಕೆ ಒಂದೇ ಕಡೆ ಇದ್ದು ಎಲ್ಲರಿಗೂ ಪ್ರಮೋಷನ್ ಆದಾಗ ಒಬ್ಬನಿಗೆ ಪ್ರಮೋಷನ್ ಕೊಡದಿದ್ದರೂ ಹೋಗಲಿ, ಅವನನ್ನು ಸಸ್ಪೆಂಡ್ ಮಾಡಿದರೆ ಹೇಗೆ ? ಈ ರೀತಿಯಾಗಿ ಘಟಪ್ರಭಾ ಮತ್ತು ಮಲಪ್ರಭಾ ಹಾರಂಗಿ ಹೇಮಾವತಿ ಯೋಜನೆಗಳು ಎಲ್ಲಾ ಇರಲಿ. ಆದರೆ ಬಿಜಾಪುರ ಜಿಲ್ಲೆಯನ್ನು ದುಷ್ಕಾಲ ಬಿದ್ದಂಥಾದ್ದು ಎಂದು ತಿಳಿದುಕೊಂಡು ಆಡಳಿತ ನಡೆಸುವವರು ನಮ್ಮ ಜಿಲ್ಲೆಯಲ್ಲಿರುವ ಅಪ್ಪರ್‌ಕೃಷ್ಣ ಯೋಜನೆಯನ್ನು ಕಾರ್ಯಗತಗೊಳಿಸಬೇಕು. ನಮಗೆ ಆಡಳಿತದಲ್ಲಿ ಯಾರೇ ಮುಖ್ಯ ಮಂತ್ರಿಗಳು ಇರಲಿ, ಸ್ಪೀಕರ್ ಯಾರೇ ಇರಲೀ ಯಾವ ತರಹದ ಹೂವಾದರೂ ಇರಲಿ ನಮಗೆ ನಾತ ಆದರೆ ಸಾಕು. ಮಾನ್ಯ ಸ್ನೇಹಿತರನೇಕರು ಮಾತನಾಡುತ್ತಾ ಕೆಲವು ವರ್ಗದವರಿಂದ ಕೆಲವು ವರ್ಗಗಳ ಶೋಷಣೆಯಾಗಿದೆ ಎಂದು ಹೇಳಿದರು. ಈ ರೀತಿಯಾಗಿ ಅವರು ಕೆಲವರ ಮೇಲೆ ಡೆಫಿನೇಟ್ ಚಾರ್ಜಸ್ ಮಾಡಿದರು ಬ್ರಾಹ್ಮಣ ಸಮಾಜದಲ್ಲಿಯೂ ಸಹ ಬಹಳ ಬಡವರು ಇದ್ದಾರೆ ಲಿಂಗಾಯತ ಸಮಾಜದಲ್ಲಿ ಒಂದು ಸೀರೆಯನ್ನು ತಂದು ಹದಿನೈದು ವರ್ಷದವರಗೂ ತರಲಿಕ್ಕಾಗದಂಥ ದುರ್ದೈವಿಗಳು ಇದ್ದಾರೆ ಹಿಂದಿನ ಘಟನೆಗಳಿಂದ ಯಾರಿಗೆ ಅನುಕೂಲವಾಗಿದೆ ? ಯಾರಿಗೆ ಅನುಕೂಲವಾಗಿದೆಯೋ ಅವರಿಗೆ ವಿದ್ಯಾವಂತರಾಗಿದ್ದಾರೆ, ಅವರು ಎಂ ಎಲ್ ಎ ಆಗಿದ್ದಾರೆ ಆಗ ಮಾನ್ಯ ದೇವರಾಜ ಅರಸ್ ಅವರು ಎಷ್ಟೇ ಪ್ರಯತ್ನ ಮಾಡಿದರೂ ಅವರು ಕ್ಯಾಬಿನೆಟ್ ಮಂತ್ರಿಗಳಾಗಿ ಬರುವುದಕ್ಕೆ ಸಾಧ್ಯವಾಗಲಿಲ್ಲ. ಯಾರು ಶೋಷಣೆ ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಸದಸ್ಯರು ಸ್ಪಷ್ಟವಾಗಿ ಹೇಳಬೇಕು ನಮ್ಮ ಬಿಜಾಪುರ ಜಿಲ್ಲೆಯ ಉತ್ತರ ಭಾಗದಲ್ಲಿ ನಮ್ಮ ಭಾಗದ ಜನರಿಗೆ ಸಮಗ್ರ ಜನತೆಯಿಂದ ಶೋಷಿಸಲ್ಪಟ್ಟಂಥವರ್ಗವಾಗಿದೆ ಇವತ್ತು ಮೇಜರ್ ಪ್ರಾಜೆಕ್ಟಗಳಲ್ಲಿ ಘಟಪ್ರಭ, ಮಲಪ್ರಭ ಕಬಿನಿ, ತುಂಗಭದ್ರ, ಇವೆಲ್ಲಾ ಮುಗಿಯುವ ಮಟ್ಟಕ್ಕೆ ಬಂದಿದೆ ಆದರೆನಮ್ಮ ಯೋಜನೆ, ಹಿಂದೆ ೧೩೦ ಕೋಟಿ ರೂಪಾಯಿಗಳಿಗೆ ಎಸ್ಟಿಮೇಟ್ ಆಗಿದ್ದು ಈಗ ಅದು ೩೦೦ ಕೋಟಿರೂಪಾಯಿಯವರೆಗೆ ಹೋಗಿದೆ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಾಲ್ಕು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆನ್ನುವುದನ್ನು ಅವರ ಜನರಿಗೆ ತಂದುಕೊಡುತ್ತಿದ್ದೇನೆ. ಸಬ್ ಮರ್ಜ ಏರಿಯಾ ಏನು ಇದೆ ಅದು ಸುಧಾರಣೆಯಾಗಬೇಕು. ಇಲ್ಲದೇ ಹೋದರೆ ನಾನು ಸರ್ಕಾರಕ್ಕೆ ಮತ್ತೆ ಮತ್ತೆ ಕೇಳಿಕೊಳ್ಳಬೇಕಾಗುತ್ತದೆ ಇದನ್ನು ನಾನು ಚಾರ್ಜ ಮಾಡುತ್ತೇನೆಂದಾದರೂ ತಿಳಿಯಿರಿ ಅಥವ ಏನಾದರೂ ತಿಳಿಯಿರಿ. ಮಾನ್ಯ ಮುಖ್ಯ ಮಂತ್ರಿಗಳು ಹೇಳಬಹುದು, ಮಾನ್ಯ ವೀರೇಂದ್ರ ಪಾಟೀಲರು ನಿಮಗೆ ಏನು ಮಾಡಿದರು, ಮುಂಬೈ ಸರ್ಕಾರದವರು ಏನು ಮಾಡಿದರು, ಎಂದು, ಮುಂಬೈ ಸರ್ಕಾರದವರು ಇದ್ದಾಗ ನಮಗೆ ಮಲತಾಯಿ ಧೋರಣೆಯಿಂದ ನೋಡುತ್ತಿದ್ದರು ಈಗ ನಾವು ಕರ್ನಾಟಕಕ್ಕೆ ಬಂದಮೇಲೆ ಎಲ್ಲಾ ಅನುಕೂಲಗಳು ನಮಗೆ ಬರಬೇಕು.

ಆದರೂ ಇವತ್ತು ನಮಗೆ ಹೆಚ್ಚಿನ ಅನುಕೂಲಗಳು ಆಗಿಲ್ಲ. ಹೆಚ್ಚಿನ ಅನುಕೂಲ ಆದರೆ ನಮ್ಮ ಜನರ ಕಲ್ಯಾಣವಾಗುತ್ತದೆ ಈ ದೃಷ್ಟಿಯಿಂದ ನಾವು ನಿಮ್ಮನ್ನು ನಂಬಿ, ಪ್ರೀತಿಯಿಂದ ನೋಡುತ್ತೀರೆಂದು ತಿಳಿದು ಬಂದಿದ್ದೇವೆ. ನಮ್ಮ ಮುಖ್ಯ ಮಂತ್ರಿಗಳನ್ನು ಯಾರೂ ಅಲುಗಾಡಿಸುವುದಕ್ಕೆ ಆಗುವುದಿಲ್ಲ ಎನ್ನುವ ಮಾತು ಕೇಳಿ ಬರುತ್ತಿದೆ. ಇವರು ಕೇಂದ್ರ ಸರ್ಕಾರದವರೊಂದಿಗೆ ವ್ಯವಹರಿಸಿ ಒತ್ತಾಯವನ್ನು ತಂದು ನಮಗೆ ಮತ್ತು ನಮ್ಮ ಜಿಲ್ಲೆಯಲ್ಲಿ ಬೇಕಾಗಿರುವ ನೀರಿನ ಸೌಕರ್ಯವನ್ನು ಅಪ್ಪರ್ ಕೃಷ್ಣ ಪ್ರಾಜೆಕ್ಟಿನಿಂದ ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಎಲ್ಲಿಗೆ ಹೋದರೂ ನೀರು ನೀರೆ, ನೀವು ಕೇಂದ್ರ ಸರ್ಕಾರಕ್ಕೆ ಹೋಗಿ, ವರ್ಲ್ಡ್ ಗವರ್ನಮೆಂಟಿಗೆ ಹೋಗಿ ನೀರೇ ಶೃಂಗಾರ, ಆದ್ದರಿಂದ ತಾವು ಈ ನೀರಾವರಿ ಯೋಜನೆಯಲ್ಲಿ ಪರಿಣತೆಯನ್ನು ಪಡೆದಿರತಕ್ಕ ಶ್ರೀ ಬಾಳೇಕುಂದ್ರಿಯವರು ನಮ್ಮ ಜಿಲ್ಲೆ ಬಗ್ಗೆ ತಿಳಿದಂಥವರು, ಅವರನ್ನು ಈ ಕೆಲಸಕ್ಕೆ ನೇಮಿಸಿದರು ನಮ್ಮ ಕೆಲಸಕಾರ್ಯಗಳು ಸರಿಯಾಗಿ ಆಗುತ್ತವೆ. ಅವರು ಹಿಂದೆ ನಮ್ಮಲ್ಲಿದ್ದಾಗ ಈ ಪ್ರಾಜೆಕ್ಟಿನ ಎಲ್ಲಾ ಮಾಹಿತಿಯನ್ನು ಅವರು ತಿಳಿಸಿದ್ದಾರೆ ನಮ್ಮ ಏರಿಯಾ ಸಮಗ್ರ ರೀತಿಯಿಂದಲೂ ಶೋಷಣೆಗೆ ಒಳಗಾಗಿದೆ, ಎಲ್ಲರಿಗೂ ಊಟ ಹಾಕಿ,ನಾವು ಊಟಕ್ಕೆ ಬಂದಾಗ ನಾವು ಊಟಕ್ಕೆ ಏನು ಇದೆಯೆಂದು ಕೇಳಿದರೆ ಹೇಗೆ,ನಾವು ಹಸಿದುಕೊಂಡಿದ್ದೇವೆ ನಮಗೂ ಊಟ ಹಾಕಬೇಕು. ಎಂದು ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿಮಾಡಿ ಕೊಳ್ಳುತ್ತೇನೆ. ತಾವುಅಧ್ಯಕರು ಇದ್ದೀರಿ, ನಮ್ಮ ಭಾಗಕ್ಕೂ 20 ಅಂಶದ ಕಾರ್ಯಕ್ರಮವನ್ನು ತೆಗೆದುಕೊಂಡು ಮೇಜರ್‌ಪ್ರಾಜೆಕ್ಟಗಳನ್ನು ಮುಗಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ, ಇಲ್ಲಿವಿದ್ಯುಚ್ಛಕ್ತಿ ಮಂತ್ರಿಗಳು ಇದ್ದಾರೆ. ಅವರಲ್ಲಿಯೂ ನಾನು ಕೇಳಿಕೊಳ್ಳುತ್ತೇನೆ. ನಮ್ಮ ಪ್ರಾಜೆಕ್ಟಗಳಿಂದ ಹೆಚ್ಚಿನ ಉಪಯೋಗವನ್ನು ತಾವು ಮಾಡಿಕೊಳ್ಳಬೇಕು, ಇದು ಮುಖ್ಯವಾದಂಥ ಸ್ಕೀಂ, ಇದನ್ನು ತಾವು ಅರ್ಥಮಾಡಿಕೊಂಡು ನಮ್ಮ ಅಪ್ಪರ ಕೃಷ್ಣ ಪ್ರಾಜೆಕ್ಟನ್ನು ಮುಗಿಸಿ, ಇದರಿಂದ ವಿದ್ಯುಚ್ಛಕ್ತಿಯನ್ನು ಮತ್ತು ನೀರಾವರಿ ಯೋಜನೆಯ ಲಾಭವನ್ನು ಪಡೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈ ಒಂದು ಯೋಜನೆಯಿಂದ ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಅನುಕೂಲವಾಗುತ್ತದೆ, ಇದನ್ನು ತಾವು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ನಾನು 10 ನಿಮಿಷಕ್ಕೆ ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲ. I request the Chief Minister to get money from the Central Government as well as from the world Bank and go ahead with the work. ಇದು ವರ್ಲ್ಡ್ ಗೌರ್ನಮೆಂಟ್ ಎಂದು ನನ್ನ ಬಾಯಿಂದ ಬಂದಿದೆ ಈ ಬಾಯಿ ಸಾಮಾನ್ಯವಾದುದಲ್ಲ. ನಾನು ಹೇಳಿದ ಮಾತು ಒಂದಲ್ಲೊಂದು ಕಾಲಕ್ಕೆ ನಿಜವಾಗುತ್ತದೆ. ಒಟ್ಟಿನಲ್ಲಿ ನೀವು ಎಲ್ಲಿಂದಲಾದರೂ ತೆಗೆದುಕೊಂಡು ಬನ್ನಿ. ನಮಗೆ ಕೆಲಸ ಆಗುವುದು ಮುಖ್ಯ. ತಾವು ಬಹಿರಂಗವಾಗಿ ಗಂಟೆಯನ್ನು ಹೊಡೆದರೂ ಅಂತರಂಗದಲ್ಲಿ ಗಂಟೆಯನ್ನು ಹೊಡೆದಿಲ್ಲವೆಂದು ನಾನು ತಿಳಿದುಕೊಂಡು ಇಷ್ಟು ಮಾತುಗಳನ್ನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ ರೆಡ್ಡಿ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಈ ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧ ಮಾಡುತ್ತಾ ಕೆಲವೊಂದು ಮಾತುಗಳನ್ನು ನಾನು ಹೇಳಬಯಸುತ್ತೇನೆ.

ಈಗ ಮೊದಲನೆಯದಾಗಿ ಪೋಲಿಸ್ ಇಲಾಖೆಯ ಬಗ್ಗೆ ಹೇಳುವುದಾದರೆ ಪೋಲಿಸ್ ಇಲಾಖೆಯಲ್ಲಿ ಒಳ್ಳೆಯ ದಕ್ಷ ಅಧಿಕಾರಿಗಳು ಇದ್ದಾರೆ. ಉದಾಹರಣೆಗೆ ಹೇಳುವುದಾದರೆ ಪೋಲೀಸ್ ಡೆಪ್ಯುಟಿ ಕಮಿಷನರ್ ಇದ್ದಾರೆ, ಡಿ. ಐ. ಜಿ. ಇದ್ದಾರೆ, ಕೆಲವು ಸಬ್ ಇನ್ಸ್‌ಪೆಕ್ಟರ್‌ಗಳೂ ಇದ್ದಾರೆ. ಆದರೆ ನಾನು ಪೋಲಿಸ್ ಇಲಾಖೆಯಲ್ಲಿರುವ ಎಲ್ಲ ಅಧಿಕಾರಿಗಳ ಬಗ್ಗೆಯೂ ನಾನು ಆಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಕೆಲವು ಪೋಲಿಸ್ ಸ್ಟೇಷನ್‌ಗಳಲ್ಲಿ ನಗರದ ಸಾಮಾನ್ಯ ಜನತೆಗೆ ನ್ಯಾಯ ಸಮ್ಮತವಾದ ರೀತಿಯಲ್ಲಿ ನ್ಯಾಯ ದೊರೆಯುತ್ತಿಲ್ಲ. ಉದಾಹರಣೆಗೆ ಹೋಟೆಲ್ ಕಾರ್ಮಿಕರು ತಮ್ಮ ಹೋಟೆಲ್ ಮಾಲಿಕರ ಮೇಲೆ ಯಾರೂ ದೂರು ಕೊಡುವುದಿಲ್ಲ. ಆದರೆ ಈ ಕಾರ್ಮಿಕರು ಹೋಟೆಲ್ ಮಾಲಿಕರ ಹತ್ತಿರ ತಮ್ಮ ನ್ಯಾಯವಾದ ಬೇಡಿಕೆಗಳನ್ನು ಕೇಳುವುದಕ್ಕೆ ಹೋದಾಗ ಮಾಲೀಕರು, ಈ ಕಾರ್ಮಿಕರ ಮೇಲೆ ಇಲ್ಲದ ಸಲ್ಲದ ಆಪಾದನೆಗಳನ್ನು ಮಾಡಿ ಪೋಲೀಸ್ ಸ್ಟೇಷನ್‌ಗೆ ದೂರುಗಳನ್ನು ಕೊಟ್ಟಿದ್ದಾರೆ. ಇವತ್ತು ಒಬ್ಬ ಹೋಟೆಲ್ ಮಾಲೀಕ ಇಲ್ಲದ ಸಲ್ಲದ ದೂರುಗಳನ್ನು ಕೊಡಬಹುದು, ಅವರ ದೂರುಗಳನ್ನು ಕೇಳುವವರಿದ್ದಾರೆ. ಆದರೆ ಆದೇ ಕಾರ್ಮಿಕರು ದೂರುಗಳನ್ನು ಕೊಡುವುದಕ್ಕಾಗುತ್ತಿಲ್ಲ. ಇವರನ್ನು ಕೇಳುವವರು ಯಾರೂ

ಇಲ್ಲ. ಈ ಮಾಲಿಕರ ದೂರುಗಳನ್ನು ಸತ್ಯಸಂಗತಿ ಎಂದು ತಿಳಿದುಕೊಂಡು ಕಾರ್ಮಿಕರನ್ನು ಆರೆಸ್ಟ್ ಮಾಡುವಾಗ ಯಾರದು ತಪ್ಪು, ಯಾರದು ಸರಿ ಎಂಬುದನ್ನು ವಿಮರ್ಶೆ ಮಾಡಿ ನೋಡಬೇಕೆಂದು ಹೇಳುತ್ತೇನೆ. ಇಂಥ ವಿಷಯಗಳಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಗಮನವನ್ನು ಹರಿಸಬೇಕೆಂದು ಸೂಚಿಸಬಯಸುತ್ತೇನೆ.

ಇನ್ನು ಪೋಲೀಸ್ ನಾಯಿಗಳ ಬಗ್ಗೆ ಹೇಳುವುದಾದರೆ, ಇವತ್ತು ಈ ಪೋಲೀಸ್ ನಾಯಿಗಳ ಕೆಲಸದ ಬಗೆಗೆ ಜನರಿಗೆ ನಂಬಿಕೆ ಹೊರಟು ಹೋಗಿದೆ. ಉದಾಹರಣೆಗೆ ಹೇಳುವುದಾದರೆ ಈಗ್ಗೆ ೭-೮ ವರ್ಷಗಳ ಹಿಂದೆ ಚಾಮರಾಜಪೇಟೆಯಲ್ಲಿ ನಡೆದ ಒಂದು ಕೊಲೆಯ ಪ್ರಕರಣವನ್ನು ಪತ್ತೆ ಮಾಡುವ ಸಲುವಾಗಿ ಈ ಪೋಲೀಸ್ ನಾಯಿಗಳನ್ನು ಬಿಟ್ಟರು. ಆ ನಾಯಿಗಳು ಎಲ್ಲಿಯೋ ಹೋಗಿ ಈ ಕೊಲೆಗೆ ಸಂಬಂಧ ಇಲ್ಲದೇ ಇರುವವನೊಬ್ಬನನ್ನು ಮೂಸಿದವು. ಆಗ ಆತನೇ ಕೊಲೆಗಾರ ಎಂದು ಆತನಿಗೆ ಸಾಕಷ್ಟು ಶಿಕ್ಷೆ ಮಾಡಿದರು. ಇದರಿಂದಾಗಿ ಜನರು ಈ ನಾಯಿಗಳ ಬಗ್ಗೆ ಬಹಳ ಹೆದರಿದ್ದಾರೆ.

ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಇನ್ನೊಂದು ಉದಾಹರಣೆಯನ್ನು ಕೊಡುವುದಾದರೆ ಹನುಮಂತ ನಗರದ ಒಬ್ಬ ನಾಗರೀಕರು ತಮ್ಮ ಮನೆಯಲ್ಲಿ ಯಾವುದೊ ಒಂದು ವಸ್ತು ಕಳುವಾಯಿತು ಎಂದು ಕಂಪ್ಲೈಂಟ್ ಕೊಡಲು ಹೋದಾಗ ಸಂಬಂಧಪಟ್ಟ ಪೋಲೀಸ್ ಸ್ಟೇಷನ್‌ನ ಸಬ್ ಇನ್‌ಸ್ಪೆಕ್ಟರ್ ರವರು ಬಹಳ ಬೇಜವಾಬ್ದಾರಿಯಿಂದ ನಿಮ್ಮ ವಸ್ತುಗಳನ್ನು ನೀವು ಜವಾಬ್ದಾರಿಯಿಂದ ನೋಡಿಕೊಳ್ಳಬೇಕಾಗಿತ್ತು ಎಂದು ದಬಾಯಿಸಿ ಕಳುಹಿಸಿದ್ದಾರೆ. ಈ ವಿಷಯವನ್ನು ತಿಳಿದು ನಾನು ಪೋಲೀಸ್ ಸ್ಟೇಷನ್‌ಗೆ ಹೋಗಿ ಸಬ್‌ಇನ್‌ಸ್ಪೆಕ್ಟರನ್ನು ಕೇಳಿದಾಗ, ಅವರು ಆಗಲಿ ಸ್ವಾಮಿ, ನಾವು ಇದನ್ನು ನೋಡುತ್ತೇವೆ ಎಂದು ಹೇಳಿಕಳುಹಿಸಿದರು. ಅನಂತರ ವಸ್ತುವನ್ನು ಕಳೆದುಕೊಂಡಿದ್ದವರನ್ನು ಕರೆಸಿ ''ಏನ್ರಿ ನೀವು ಹೋಗಿ ಎಂ. ಎಲ್. ಎ.ಗೆ ಹೇಳಿಕೊಟ್ಟು ಕರೆದುಕೊಂಡು ಬಂದಿದ್ದೀರಿ'' ಎಂದು ಮತ್ತೆ ದಬಾಯಿಸಿ ಕಳುಹಿಸಿದ್ದಾರೆ.

ಅದೇ ರೀತಿ ಮೊನ್ನೇ ತಾನೆ ನಡೆದ ಮತ್ತೊಂದು ಪ್ರಕರಣವನ್ನು ತಮ್ಮ ಅವಗಾಹನೆಗೆ ತರುತ್ತೇನೆ. ಯಾರೋ ಒಬ್ಬ ಹೆಂಗಸು ಒಂದು ಬಾವಿಯಲ್ಲಿ ಬಿದ್ದು ಸತ್ತಿದ್ದಳು. ಆಗ ನಾನು ಪೋಲೀಸ್‌ಗೆ ಫೋನ್ ಮಾಡಿ, ಪಾತಾಳ ಗಂಗೆಯನ್ನು ಹಗ್ಗ ಕಟ್ಟಿ ಬಿಟ್ಟು ಹೆಣವನ್ನು ತೆಗೆಯಬೇಕೆಂದು ಹೋದಾಗ, ಅಷ್ಟು ಹೊತ್ತಿಗೆ ಪೋಲಿಸ್‌ನವರು ಬಂದು ಈಗಲೇ ಹೆಣವನ್ನು ಎತ್ತುವುದಕ್ಕೆ ನಿಮಗೆ ಅವಕಾಶ ಕೊಡುವುದಿಲ್ಲ. ಈ ಬಗ್ಗೆ ಇನ್ನೂ ಆಗಬೇಕಾದ ಕೆಲಸ ಬೇಕಾದಷ್ಟಿದೆ. ಈಗ ನೀವು ಈ ಹೆಣವನ್ನು ಎತ್ತಿದರೆ ನೀವೇ ನೇಣು ಹಾಕಿದ್ದೀರಿ ಎಂದು ಹೇಳುತ್ತಾರೆ ಎಂದು ಹೇಳಿದರು. ಆ ಕಡೆ ನೋಡಿದರೆ ಹೆಣದ ಕಡೆಯವರ ಗೋಳು ಹೇಳತೀರದು, ಇಂಥ ಒಂದು ಪರಿಸ್ಥಿತಿ ಈ ಪೋಲಿಸ್ ಇಲಾಖೆಯಲ್ಲಿದೆ.

ಇನ್ನು ಆಡಳಿತ ಭಾಷೆ ಕನ್ನಡ ಮಾಡಬೇಕು ಎನ್ನುವ ಬಗ್ಗೆ ಹೇಳುದಾದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯಕ್ಕೆ ''ಕರ್ನಾಟಕ'' ಎಂದು ನಾಮಕರಣ ಮಾಡುವ ಬಗ್ಗೆ ಬಹಳ ಶ್ರಮಿಸಿ ಒಳ್ಳೆಯ ಕೀರ್ತಿಯನ್ನು ಗಳಿಸಿದ್ದಾರೆ. ಅದೇ ರೀತಿಯಲ್ಲಿ ಕನ್ನಡವನ್ನೂ ಕೂಡ ಆಡಳಿತ ಭಾಷೆಯನ್ನಾಗಿ ಮಾಡಿ ಕರ್ನಾಟಕದ ಮುಕ್ಕೋಟಿ ಕನ್ನಡಿಗರ ಬೆಂಬಲವನ್ನು ಗಳಿಸಲೆಂದು ಹೇಳಬಯಸುತ್ತೇನೆ.

ಇನ್ನು ಮೊನ್ನೆ ಮಹಾರಾಷ್ಟ್ರ ಅಸೆಂಬ್ಲಿಯಲ್ಲಿ ನಡೆದಂಥ ವರದಿಯನ್ನು ನೋಡಿದರೆ, ಮಹಾಜನ್ ಕಮಿಷನ್ ವರದಿಯನ್ನು ಕೈಬಿಡುವಂತೆ ಕಾಣುತ್ತದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಒಂದು ಕಳಕಳಿಯ ಮನವಿ ಎಂದರೆ ಈ ಮಹಾಜನ್‌ಕಮೀಷನ್ ವರದಿಯನ್ನು ಕಾರ್ಯಗತ ಮಾಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ಹೇರಬೇಕೆಂದು ಹೇಳಿ ಇಷ್ಟು ಮಾತುಗಳನ್ನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—(ವಿದ್ಯುಚ್ಛಕ್ತಿ ಶಾಖೆಯ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಉಪಾಧ್ಯಕ್ಷರೆ, ಈ ವಿದ್ಯುಚ್ಛಕ್ತಿ ಖಾತೆಗೆ ಸಂಬಂಧಪಟ್ಟಂತೆ ಸುಮಾರು ೭೩ ಕೋಟಿ ರೂಪಾಯಿಗಳ ಮಂಜೂರಾತಿಯ ಬಗ್ಗೆ ಬೇಡಿಕೆಯನ್ನು ಈ ಸಭೆಯ ಮುಂದಿಟ್ಟ ಸಂದರ್ಭದಲ್ಲಿ ಅನೇಕ ಮಾನ್ಯ ಸದಸ್ಯರು ವಿದ್ಯುಚ್ಛಕ್ತಿ ಮತ್ತು ಅದರ ಬಳಕೆಯ ಬಗ್ಗೆ ಸೂಕ್ತವಾದಂಥ ಸಲಹೆಗಳನ್ನು ತಿಳಿಸುತ್ತಾರೆಂದು ನಾನಾದರೂ ಭಾವಿಸಿದ್ದೆ. ಆದರೆ ಬಹುಮಂದಿ ಮಾನ್ಯ ಸದಸ್ಯರು ಮಾತನಾಡಿದರೂ ಕೂಡ ಸೂಕ್ತವಾದ ಸಲಹೆಗಳನ್ನು ಕೊಡದೇ ಇದ್ದುದರಿಂದ ನನಗಾದರೂ ಭಾಸವಾಗುತ್ತದೆ. ಈ ಒಂದು ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಬಳಕೆಯ ಬಗ್ಗೆ ಎಲ್ಲರಿಗೂ ಮೆಚ್ಚುಗೆಯಾಗಿದೆ ಎಂದು ಭಾವಿಸಿದ್ದೇನೆ.

ಮಾನ್ಯ ಅಧ್ಯಕ್ಷರೆ, ಈ ವಿದ್ಯುಚ್ಛಕ್ತಿ ಉತ್ಪಾದನೆಯ ಬಗ್ಗೆ ಸುಮಾರು ೪ ವಿದ್ಯುಚ್ಛಕ್ತಿ ಉತ್ಪಾದನಾ ಆಗರಗಳನ್ನು ಪೂರ್ಣಮಾಡುವ ಬಗ್ಗೆ ಈಗಾಗಲೇ ಹಂತಹಂತವಾಗಿ ಕೆಲಸ ಸಾಗುತ್ತಿದೆ. ಬಹುಮುಖ್ಯವಾದ ಹಾಗೂ ಅತಿ ದೊಡ್ಡದಾದ ಈ ಕಾಳಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟಿನ ಮೊದಲನೇ ಹಂತವನ್ನು ಪೂರ್ಣ ಮಾಡುವ ಬಗ್ಗೆ ಕಳೆದ ವರ್ಷ ರಾಜ್ಯ ಸರ್ಕಾರದಿಂದ ಸುಮಾರು ೨೪ ಕೋಟಿ ರೂಪಾಯಿಗಳನ್ನೂ ಮತ್ತು ಕೇಂದ್ರ ಸರ್ಕಾರದಿಂದ ಸುಮಾರು ಹತ್ತು ಕೋಟಿ ರೂಪಾಯಿಗಳನ್ನೂ ನಿಗದಿ ಮಾಡಿತ್ತು. ೧೯೭೬-೭೭ನೇ ಸಾಲಿಗೆ ಸುಮಾರು ೫೦ ಕೋಟಿ ರೂಪಾಯಿಗಳನ್ನು ಈಗಾಗಲೇ ಈ ಕೆಲಸಕ್ಕಾಗಿ ಮೀಸಲಿಡಲಾಗಿದೆ. ತಮಗೆಲ್ಲಾ ಗೊತ್ತಿರುವಂತೆ ಕೇಂದ್ರ ಸರ್ಕಾರದ ಸಹಾಯದಿಂದ ಕುವೈತ್ ಸರ್ಕಾರದಿಂದ ಸುಮಾರು ೬೫ ಕೋಟಿ ರೂಪಾಯಿಗಳ ಸಹಾಯ ಧನವನ್ನು ಸಾಲದ ರೂಪದಲ್ಲಿ ಈ ಒಂದು ಪ್ರಾಜೆಕ್ಟಿಗೆ ತೆಗೆದುಕೊಂಡು ಬಂದಿದ್ದೇವೆ.

ಈ ಒಂದು ಸಾಲ ಸುಮಾರು ೩ ವರ್ಷಗಳ ಕಾಲ ನಮಗೆ ಉಪಯೋಗಿಸುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಈ ಕೆಲಸಗಳನ್ನು ನಿಗದಿಯಾದಂತ ವೇಳೆಯಲ್ಲಿಯೇ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಎರಡನೆಯದು ತಮಗೆ ಗೊತ್ತಿರುವ ಹಾಗೆ ಲಿಂಗನಮಕ್ಕಿ ಪವರ್ ಹೌಸ್ ೧೨೨ ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದು ೧೯೭೪-೭೫ನೇ ವರ್ಷದಲ್ಲಿ ಹಾಗೂ ೧೯೭೬-೭೭ನೇ ವರ್ಷಕ್ಕಾಗಿ ೩೩ ಲಕ್ಷ ರೂಪಾಯಿಗಳನ್ನು ಈ ಕಾರ್ಯವನ್ನು ಪೂರ್ಣಮಾಡುವುದಕ್ಕೆ ಸರ್ಕಾರ ಈಗಾಗಲೇ ಬಜೆಟ್‍ನಲ್ಲಿ ಒದಗಿಸಲಾಗಿದೆ. ಲಿಂಗನಮಕ್ಕಿ ಮೊದಲನೆಯ ಯೂನಿಟ್‍ನ್ನು ೧೯೭೫ರ ಅಂತ್ಯದ ವೇಳೆಗೆ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಆಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಇನ್ಸ್ಟಲೇಶನ್ ವಿಷಯ ತಮಗೆ ಗೊತ್ತಿರುತ್ತದೆ. ೯ ಹಾಗೂ ೧೦ ಯೂನಿಟ್ಟುಗಳ ಕೆಲಸವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಈಗಾಗಲೇ ಮಾರ್ಚ್ ಅಥವಾ ೧೯೭೬ನೇ ಏಪ್ರಿಲ್ ವೇಳೆಗೆ ಒಂದು ಜನರೇಷನ್ ಸಹಾ ಪ್ರಾರಂಭವಾಗುತ್ತದೆಂದು ನಾನಾದರೂ ಭಾವಿಸಿದ್ದೇನೆ, ಮತ್ತು ೧೭೮ ಕೋಟಿ ರೂಪಾಯಿಗಳ ನೆಟ್ಟ ಅವಕ್ಕ ಒದಗುತ್ತದೆಂದು ಭಾವಿಸಿದ್ದೇನೆ. ಲಿಂಗನಮಕ್ಕಿ ಜನರೇಷನ್ ಸ್ಟೇಷನ್ ಆದಷ್ಟು ಜಾಗ್ರತೆ ಕೆಲಸ ಪ್ರಾರಂಭ ಮಾಡುತ್ತವೆಂದು ಹೇಳುತ್ತೇನೆ. ಸನ್ಮಾನ್ಯ ಕೋಣಂದೂರು ಲಿಂಗಪ್ಪನವರು ಮಾತನಾಡುತ್ತಾ ಪಂಚವಾರ್ಷಿಕ ಯೋಜನೆಯಲ್ಲಿ ಚಕ್ರ, ಬೇಡತಿ, ವರಾಹಿ ಈ ಯೋಜನೆಗಳು ಪೂರ್ಣಗೊಳ್ಳುವ ಬಗ್ಗೆ ಹೇಳಿದ್ದಾರೆ ಈ ಕೆಲಸಗಳನ್ನು ೩ ವರ್ಷಗಳಲ್ಲಿಯೇ ಪೂರ್ಣಮಾಡುವುದಕ್ಕೆ ಈಗಾಗಲೇ ಪ್ರಾರಂಭ ಮಾಡಿದ್ದೇವೆ ಈ ವರ್ಷ ಸುಮಾರು ೧.೪ ಲಕ್ಷ ರೂಪಾಯಿಗಳ ವೆಚ್ಚವನ್ನು ಮಾಡುವುದಕ್ಕೆ ಇದಕ್ಕಾಗಿ ನಿಗದಿ ಮಾಡಿದ್ದೇವೆ ೧೯೭೬-೭೭ಕ್ಕೆ ೯ ನೂರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೫೪ ಕೋಟಿ ರೂಪಾಯಿ ಚಕ್ರ ಪವರ್ ಸ್ಕೀಮು ಮುಗಿದ ಮೇಲೆ ತಮಗೆ ಗೊತ್ತಿರುವ ಹಾಗೆ ಈ ಒಂದು ನೀರಿನ ಅಭಾವ ಕಡಿಮೆಯಾಗುತ್ತದೆ ಅಲ್ಲದೆ ವಿದ್ಯುಚ್ಛಕ್ತಿ ಉತ್ಪಾದನೆಯು ಸಾಂಗವಾಗಿ ಆಗುತ್ತದೆ. ಇದಕ್ಕಾಗಿ ಯೋಜನೆಯು ಕೂಡ ಸಿದ್ಧವಾಗಿದೆ. ಬಹುಮುಖ್ಯವಾಗಿ ಶ್ರೀ ಕೋಣಂದೂರು ಲಿಂಗಪ್ಪನವರು ಮಾತನಾಡುತ್ತಾ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ವರಾಹಿ ಮತ್ತು ಬೇಡತಿ ಯೋಜನೆಗಳ ಬಗ್ಗೆ ಒಂದು ಹೆಚ್ಚಿನ ಆತಂಕವನ್ನು ವ್ಯಕ್ತಪಡಿಸಿದರು, ಈಗಾಗಲೇ ನಮ್ಮ ಸರ್ಕಾರದವರು ಪ್ರಾಜೆಕ್ಟುಗಳನ್ನು ತಯಾರು ಮಾಡಿ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದಿರುವುದಲ್ಲದೆ ಪ್ಲಾನಿಂಗ್ ಕಮಿಷನ್ ಒಪ್ಪಿಗೆಯನ್ನು ಸಹ ಪಡೆದಿರುತ್ತದೆ. ನಮ್ಮ ಸರ್ಕಾರದವರು ಬಹುಮುಖ್ಯವಾಗಿ ಮುಖ್ಯಮಂತ್ರಿಯವರು ಅದಕ್ಕೆ ಹೆಚ್ಚಿನ ಧನಸಹಾಯವನ್ನು ಅಳವಡಿಸಿ ಆದಷ್ಟು ಜಾಗ್ರತೆ ಕಾಳಿನದಿ ಪ್ರಾಜೆಕ್ಟನ್ನು ಮುಗಿಸತಕ್ಕ ಅಂತ್ಯದಲ್ಲಿಯೇ ವರಾಹಿ ಮತ್ತು ಬೇಡತಿ ಪವರ್ ಪ್ರಾಜೆಕ್ಟ್ ಹಾಗೂ ಇರಿಗೇಷನ್ ಎರಡಕ್ಕೂ ಅನುಕೂಲವಾಗುವಂಥ ಈ ಪ್ರಾಜೆಕ್ಟುಗಳನ್ನು ಜಾಗ್ರತೆ ಮಾಡಬೇಕೆಂದು ಸರ್ಕಾರ ಈ ದಿಸೆಯಲ್ಲಿ ಯೋಚನೆ ಮಾಡುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ನಿರ್ವಸತಿಗಾರರಾಗಿರತಕ್ಕವರಿಗೆ ಯಾವ ರೀತಿ ಪುನರ್ ವ್ಯವಸ್ಥೆಯನ್ನು ಮಾಡಿದ್ದೀರಿ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಯಾವುದೇ ಯೋಜನೆಯಲ್ಲಿಯೂ ಸಹ ಮುಳುಗಡೆಯಾಗಿರತಕ್ಕಂಥದ್ದಕ್ಕೆ ಅಧ್ಯತೆಯನ್ನು ಕೊಟ್ಟಿರುತ್ತೇವೆ. ಇಲ್ಲಿಯೂ ಕೂಡ ನಮ್ಮ ಗಮನಕ್ಕೆ ಬಂದಿರುತ್ತದೆ. ಮುಳುಗಡೆಯಾಗಿರತಕ್ಕ ಪ್ರದೇಶಗಳಿಗೆ ಹೋಗಿ ತಗಲತಕ್ಕ ನಷ್ಟವನ್ನು ತುಂಬಿಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಪ್ರಾಜೆಕ್ಟ್‌ನಲ್ಲಿ ಕೆಲಸವಾಗುತ್ತಿದೆ, ಹಂತಹಂತವಾಗಿ ವಿದ್ಯುಚ್ಛಕ್ತಿಯ ಆಗರ

ಗಳನ್ನು ಆದಷ್ಟು ಜಾಗ್ರತೆ ಪೂರ್ಣವಾಡಿ, ವಿದ್ಯುಚ್ಛಕ್ತಿಯ ಅಭಾವ ಏನು ಇದೆ ಅದನ್ನು ನೀಗಿಸುವು ದಕ್ಕೆ ಎಲ್ಲ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆಂದು ನಾನಾದರೂ ಹೇಳುವುದಕ್ಕೆ ಇಷ್ಟಪಡು ತ್ತೇನೆ. ಬಹಳ ಮುಖ್ಯವಾಗಿ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಬಹಳ ಜಾಗ್ರತೆಯಿಂದ ಕೆಲಸಗಳನ್ನು ಮಾಡುತ್ತಾ ಇದ್ದಾರೆ. ಕಳೆದ ವರ್ಷ ಸುಮಾರು ೬ ನೂರು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸ ಬೇಕೆಂದು ೧೫ ಸಾವಿರ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದು ಅದನ್ನು ಪೂರ್ಣಮಾಡಿದ್ದಾರೆ. ಮುಂದಿನ ವರ್ಷವೂ ಸಹ ಇದೇ ರೀತಿ ಸಾಮಾನ್ಯವಾಗಿ ಅಭಾವ ರಾಜ್ಯದಲ್ಲಿ ತಲೆದೋರುವುದು ಇದ್ದು ಅದಕ್ಕೆ ಸರಿಸಮಾನವಾಗಿ ೧೬–೧೭ ಸಾವಿರ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ನಾವು ಈಗಾಗಲೇ ತೀರ್ಮಾನ ಮಾಡಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ತಂತಿ ಬಂತೆ ?

ಶ್ರೀ ಎಚ್, ಶ್ರೀಕಂಠಯ್ಯ.—ಬರುತ್ತಾ ಇದೆ.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಹಳ್ಳಿಗಳಲ್ಲಿ ಬರೆ ಕಂಬಗಳನ್ನು ಮಾತ್ರ ನಿಲ್ಲಿಸಿ ಬಿಟ್ಟಿದ್ದಾರೆ. ತಂತಿ ಇನ್ನೂ ಬಂದಿಲ್ಲ. ಕರೆಂಟ್ ಯಾವಾಗ ಕೊಡುತ್ತೀರಿ ?.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಕಂಬ ನಿಲ್ಲಿಸಿದ್ದರೆ ಕೆಲಸ ಆಯಿತು ಎಂದು ಅರ್ಥ. ಇಡಿ ರಾಜ್ಯದಲ್ಲಿ 52 ಪರ್ಸೆಂಟ್ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದೇವೆ. ರೂರಲ್ ಪಾಪ್ಯುಲೇಶನ್ 69 ಪರ್ಸೆಂಟ್, 52 ಪರ್ಸೆಂಟಿನಷ್ಟು ಎಲೆಕ್ಟ್ರಿಫಿಕೇಷನ್ ಆಗಿದೆ. 60 ಪರ್ಸೆಂಟ್‌ನಷ್ಟು ರೂರಲ್ ಪಾಪ್ಯುಲೇಷನ್ ಬೆನಿಫಿಟ್ ಆಗಿದೆ. ಸುಮಾರು 2 ಲಕ್ಷ ಚಿಲ್ಲರೆ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಯನ್ನು ಒದಗಿಸಿದ್ದೇವೆ. ಬಹಳ ಮುಖ್ಯವಾಗಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಸಾಲವನ್ನು ಪಡೆದಿರತಕ್ಕಂಥ ರೈತರಿಗೆ ಪ್ರಥಮ ಆದ್ಯತೆಯನ್ನು ಕೊಟ್ಟು ನೀರಾವರಿ ವಿದ್ಯುತ್ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಕೆಲಸ ಮಾಡುತ್ತಿದ್ದೇವೆ. ಎಲೆಕ್ಟ್ರಿಸಿಟಿ ಬೋರ್ಡ್‌ನವರಿಗೆ ಇದೇ ರೀತಿಯ ಆದೇಶವನ್ನೂ ಸಹ ನೀಡಿದ್ದೇವೆ. ಮಾನ್ಯ ಕೋಣಂದೂರು ಲಿಂಗಪ್ಪನವರು ಡಿಮ್ಯಾಂಡ್ ಚಾರ್ಜಸ್ ಬಗ್ಗೆ ಮಾತನಾಡಿದರು. ಮುಖ್ಯಮಂತ್ರಿಗಳಾಗಲಿ, ಸರ್ಕಾರವೇ ಆಗಲಿ ಪುನರ್ ಪರಿಶೀಲನೆ ಮಾಡಬೇಕೆಂದೂ ಒಂದು ತೀರ್ಮಾನವನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ರಾಜ್ಯದಲ್ಲಿರುವ ನೀರಾವರಿ ಪಂಪ್ ಸೆಟ್ಟುಗಳಿಗೆ ಏನು ಬೆಲೆ ನಿಗದಿ ಮಾಡಿದ್ದೇವೆ 10 ರೂಪಾಯಿಗಳಷ್ಟು ಅದು ನಮ್ಮ ರೈತರಿಗೆ ಹೊರೆಯಾಗಿದೆ ಎಂದು ಹೇಳಿದರು. 10 ರೂಪಾಯಿ ಹಾಕಿದರೂ ತಮಗೆ ಗೊತ್ತಿರುವ ಹಾಗೆ ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಕೋಟ್ಯಾಂತರ ರೂಪಾಯಿ ಲುಕ್ಸಾನ್ ಆಗುತ್ತಾ ಇದೆ.

ಶ್ರೀ ಕೆ. ಎಚ್. ಹನುಮೇಗೌಡ.–ಯಾವುದೇ ಕಾರಣದಿಂದ ಪವರ್‌ನ್ನು ಉಪಯೋಗಿಸದಿದ್ದರೂ ಕೂಡ ಡಿಮ್ಯಾಂಡ್ ಚಾರ್ಜಸ್‌ನ್ನು ಹಾಕಿರುತ್ತಾರೆ. ಇದನ್ನು ತಪ್ಪಿಸಬೇಕೆಂದು ಕೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ವಿದ್ಯುಚ್ಛಕ್ತಿಯನ್ನು ಉಪಯೋಗಿಸದ ರೈತನಿಗೆ ಏನು ಮಾಡಬೇಕೆಂಬುದನ್ನು ತೀರ್ಮಾನಮಾಡಿಲ್ಲ. ತಮಿಳುನಾಡಿನಲ್ಲಿ, ಮಹಾರಾಷ್ಟ್ರ ಯಾವರಾಜ್ಯ ಗಳಿಗೆ ಹೋಲಿಸಿದರೂ ನಮ್ಮ ರಾಜ್ಯದಲ್ಲಿ ಕಡಿಮೆ ಇರುತ್ತದೆ. ವಿದುಚ್ಛಕ್ತಿ ಬೋರ್ಡಿಗೆ ನಷ್ಟವನ್ನು ತುಂಬುವುದಕ್ಕೆ, 4-6 ಕೋಟಿ ರೂಪಾಯಿಗಳನ್ನು ಬೋರ್ಡಿನ ಸಾಹುಕಾರರಿಗೆ ಕೊಡಬೇಕಾದ ಬಾಕಿ ಬಾಕಿ ಇರುವುದರಿಂದ 10 ರೂಪಾಯಿ ನಿಗದಿ ಮಾಡಿರುವುದು ಸರಿಯೆಂದು ತೀರ್ಮಾನವನ್ನು ಸರ್ಕಾರ ಈಗಾಗಲೇ ತಗೆದುಕೊಂಡಿದೆ. ತಮಗೆ ಗೊತ್ತಿರುವ ಹಾಗೆ ಸರ್‌ಚಾರ್ಜ್‌ನ್ನು ವಿಧಿಸುವಾಗ ಪಂಪ್‌ಸೆಟ್ಟುಗಳಿಗೆ ಸರ್‌ಚಾರ್ಜ್‌ನ್ನು ವಿಧಿಸಿಲ್ಲ.

ಸರ್ಕಾರ ಆ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಿ ಪಂಪ್‌ಸೆಟ್‌ಗಳಿಗೆ ಪವರ್ ಕೊಟ್ಟು, ಎಕ್ಸ್‌ಕ್ಲೂಡ್ ಮಾಡಿ ಚಾರ್ಜ್ ಒದಗಿಸಲಾಗಿದೆ. ಆದರೆ ಸಣ್ಣ ಪುಟ್ಟ ಕೈಗಾರಿಕೆಗಳಿಗೆ ತೊಂದರೆ ಯಾಗಬಾರದೆಂದು ಹೇಳಿ ಸರ್ಕಾರದವರು ಅದನ್ನು ಮನಗಂಡು ಡಿಪಾಸಿಟ್ ಸ್ಕೀಮನ್ನು ತಂದಿದ್ದಾರೆ ಮತ್ತು ಸುಮಾರು 25 ಹಾರ್ಸ್ ಪವರ್‌ವರೆಗೂ ಸಹ ಬಹಳ ಮುಖ್ಯವಾಗಿ ಗ್ರಾಮಾಂತರ ಪ್ರದೇಶದಲ್ಲಿ ಪವರ್ ಟಿಲ್ಲರ್ ಕೊಟ್ಟು ಸಣ್ಣ ಪುಟ್ಟ ಕೈಗಾರಿಕೆಗಳಿಗೆ 25 ಹಾರ್ಸ್ ಪವರ್‌ವರೆಗೆ ವಿನಾಯಿತಿ ಕೊಟ್ಟಿದ್ದೇವೆ. ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು

ಕೊಡಬೇಕಾದರೆ ಈಗಾಗಲೇ ಕೆಲವು ಕಾನೂನುಗಳನ್ನು ಮಾಡಿದ್ದೇವೆ. ಅದು ಆ ರೀತಿಯಲ್ಲಿ ನಡೆದುಕೊಂಡು ಹೋಗುತ್ತದೆ. ಇದರಿಂದ ಸಣ್ಣ ಪುಟ್ಟ ಕೈಗಾರಿಕೆಗಳವರಿಗೆ ಮತ್ತು ರೈತನಿಗೆ ತೊಂದರೆಯಾಗುವುದಿಲ್ಲವೆಂದು ನಾವಾದರೂ ಯೋಚನೆ ಮಾಡಿದ್ದೇವೆ.

4-30 P.M.

ಶ್ರೀ ಟಿ. ಆರ್. ಶಾಮಣ್ಣ.—ರೈತರಿಗೆ ಬೇಕಾದಷ್ಟು ಪವರ್‌ನ್ನು ಕೊಡುತ್ತಿದ್ದಾರೆ. ಅವರಿಗೆ 10 ರೂವರೆಗೆ ಡಿಮ್ಯಾಂಡ್ ಚಾರ್ಜ್‌ಸ್ ಕೊಡುವುದರಿಂದ, ಇಲ್ಲಿ ಪಟ್ಟಣದಲ್ಲಿ ಎಲ್ಲರ ಮೇಲೆ ಡಿಮ್ಯಾಂಡ್ ಚಾರ್ಜಸ್ಸನ್ನು ಏತಕ್ಕೆ ಹಾಕಿದ್ದೀರಿ?

ಶ್ರೀ ಎಚ್ ಸಿ. ಶ್ರೀಕಂಠಯ್ಯ.—ಇನ್‌ಸ್ಟಾಲೇಷನ್ ಎಂದು ಹೇಳಿ 10 ರೂ ಡಿಮ್ಯಾಂಡ್ ಚಾರ್ಜಸ್ ಹಾಕಿರುವುದು ಇದೆ. ಇದು ರೈತರಿಗೆ ಒಬ್ಬರಿಗೇ ಅಲ್ಲ, ಎಲ್ಲಾ ಬಳಕೆದಾರರಿಗೂ 10 ರೂಪಾಯಿಗಳನ್ನು ಹಾಕಿದ್ದೇವೆ. ಈ ದಿಶೆಯಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ. ಬಹುಮುಖ್ಯವಾಗಿ ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನ್‌ನಿಂದ ಸುಮಾರು 54 ತಾಲ್ಲೂಕುಗಳಿಗೆ ನಮ್ಮ ರಾಜ್ಯದಲ್ಲಿ ಈ ಒಂದು ಸ್ಕೀಮನಲ್ಲಿ ಮಂಜೂರಾತಿ ಪಡೆದಿದೆ. ಸುಮಾರು 22 ಕೋಟಿ ರೂಪಾಯಿಗಳು. ...

ಶ್ರೀ ಎಂ. ಎಸ್. ಕೃಷ್ಣನ್.—ಇನ್‌ಸ್ಟಾಲೇಷನ್ ಚಾರ್ಜಸ್ ಕೊಡುತ್ತಾರೆಂದು ಹೇಳಿ ಇನ್‌ಸ್ಟಾಲ್ ಮಾಡಿದ್ದೀರಿ. ಮೊದಲು ಕಂಟ್ರಾಕ್ಟರ್ಸ್ ಅವರು ಬೇರೆ ದುಡ್ಡು ಕೊಡುತ್ತಾರೆ. ನೀವು ಬೇರೆ ಅವರು ಉಪಯೋಗ ಮಾಡಿದ್ದಾರೆಂದು ಇನ್‌ಸ್ಟಾಲೇಷನ್ ಚಾರ್ಜ ಹಾಕಿರುವುದು ಇದು ಯಾವ ನ್ಯಾಯ ?

ಶ್ರೀ ಡಿ. ದೇವರಾಜ ಅರಸ್.—ಲೇಬರ್ ಲೀಡರ್‌ರವರು ಹೆಚ್ಚಿಗೆ ಡಿಮ್ಯಾಂಡ್ ಮಾಡುವುದು ಇದು ಯಾವ ನ್ಯಾಯ ಎಂದು ಕೇಳಬೇಕಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಅವರು ಕೆಲಸ ಮಾಡುವ ಪ್ರಶ್ನೆ.

ಶ್ರೀ ಎಚ್ ಸಿ. ಶ್ರೀಕಂಠಯ್ಯ.—ಈಗ ರಾಷ್ಟ್ರೀಯ ವಿದ್ಯುಚ್ಛಕ್ತಿ ಕಾರ್ಪೊರೇಷನ್‌ನವರು 54 ತಾಲ್ಲೂಕುಗಳಿಗೆ ಸಾಲವನ್ನು ಮಂಜೂರು ಮಾಡಿದ್ದಾರೆ ಸುಮಾರು 22 ಕೋಟಿ ರೂಪಾಯಿಗಳ ಸಾಲವನ್ನು ಕೊಟ್ಟು ಈಗಾಗಲೇ ಎಲೆಕ್ಟ್ರಿಸಿಟಿ ಬೋರ್ಡನವರು 10 ಕೋಟಿ ರೂಪಾಯಿಗಳನ್ನು ಡ್ರಾ ಮಾಡಿ ಎಲ್ಲಾ ತಾಲ್ಲೂಕುಗಳಲ್ಲಿ 4-5 ವರ್ಷಗಳ ಅಂತರದಲ್ಲಿ ಕೆಲಸಕಾರ್ಯಗಳನ್ನು ಮುಗಿಸಬೇಕಾಗಿದೆ. ಈ ಕೆಲಸವನ್ನು ಮುಗಿಸಿ ಸುಮಾರು 2715 ಹಳ್ಳಿಗಳಿಗೆ ಈ ಸ್ಕೀಮ್‌ನಿಂದ ಲಾಭವಾಗಿದೆ, ಸುಮಾರು 27 ಸಾವಿರ ಪಂಪುಸೆಟ್ಟುಗಳಿಗೆ ಸಹ ಇದರಿಂದ ಲಾಭವಾಗಿದೆ ಈ ಒಂದು ದಿಶೆಯಲ್ಲಿ ಬಹುಮುಖ್ಯವಾಗಿ ಗ್ರಾಮಗಳ ವಿದ್ಯುದ್ದೀಕರಣ ಮತ್ತು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಸರ್ಕಾರದವರು ಎಲ್ಲಾ ಕಾರ್ಯಕ್ರಮಗಳನ್ನೂ ಹಾಕಿಕೊಂಡಿದೆ ಎಂದು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಂತಿ ತರುವುದಕ್ಕೆ ಏನು ಮಾಡಿದ್ದಾರೆ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈಗಾಗಲೇ ಒಂದು ಸಾವಿರ ಟನ್ನುಗಳಷ್ಟು ಅಲ್ಯೂಮಿನಿಯಂ ತಂತಿಯ ಸ್ಪೆಷಲ್ ಕೋಟಾವನ್ನು ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ. ಈ ಸಾವಿರ ಟನ್ ರಿಲೀಸ್ ಆಗಲಿಲ್ಲ ಮ್ಯಾನುಫ್ಯಾಕ್ಚರರಿಗೆ ಕಂಡಕ್ಟರ್ಸ್ ಮಾಡುವುದಕ್ಕೆ ಕೊಟ್ಟಿದ್ದೇವೆ. ಕೇವಲ 10-15 ದಿವಸದಲ್ಲಿ ಪರಿಸ್ಥಿತಿ ಸುಧಾರಣೆಯಾಗುತ್ತದೆಂಬ ಪೂರ್ಣ ನಂಬಿಕೆ ನಮಗಿದೆ. ಈ ಗ್ರಾಮಗಳಲ್ಲಿ ನೀರಾವರೀ ಪಂಪ್‌ಸೆಟ್ಟುಗಳಿಗೆ ಸಾಲವನ್ನು ಪಡೆದಿರತಕ್ಕಂಥ ಬ್ಯಾಂಕುಗಳಲ್ಲಿ ಹಾಗೂ ಇತರೆ ಭೂ ಅಭಿವೃದ್ಧಿ ಬ್ಯಾಂಕು ಹಾಗೂ ಷೆಡ್ಯೂಲ್ಡ್ ಬ್ಯಾಂಕ್‌ನಿಂದ ಸಾಲವನ್ನು ಪಡೆದಂಥ ರೈತನಿಗೆ ಅದಷ್ಟು ಜಾಗ್ರತೆಯಾಗಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ ತಮಗೆ ಗೊತ್ತಿರುವ ಹಾಗೆ ದಕ್ಷಿಣದ ರಾಜ್ಯಗಳಲ್ಲಿ ನಮ್ಮ ಕರ್ನಾಟಕ ರಾಜ್ಯವೊಂದೇ ಈ ವಿದ್ಯುಚ್ಛಕ್ತಿಯ ಅಭಾವವನ್ನು ಹೊಂದಿರತಕ್ಕ ರಾಜ್ಯ. ಸುಮಾರು 10 ಪರ್ಸೆಂಟಿನಿಂದ 331/3 ಪರ್ಸೆಂಟ್‌ವರೆಗೂ ಈ ವಿದ್ಯುಚ್ಛಕ್ತಿ ಕಟ್‌ನ್ನು ಇಂಪೋಸ್ ಮಾಡಿದ್ದೇವೆ. ಮೊನ್ನೆ ತಾನೇ ಕೇರಳ ಸರ್ಕಾರದವರೊಡನೆ ವ್ಯವಹರಿಸಿ, ಕೇಂದ್ರ ಸರ್ಕಾರದವರು 100 ಮಿಲಿಯನ್ ಯೂನಿಟ್ಸ್‌ಗಳನ್ನು ನಮಗೆ ಕೊಡುತ್ತಾರೆಂದು ಹೇಳಿದಾರೆ. ಕೇರಳದ ವಿದ್ಯುಚ್ಛಕ್ತಿ ಮಂತ್ರಿಯವರೂ ಸಹ

ವಿಶ್ವಾಸದಿಂದ ವಾಗ್ದಾನ ಮಾಡಿದ್ದಾರೆ ಇಡಿಕಿ ಪ್ರಾಜೆಕ್ಟಿನ ಕೆಲಸವನ್ನು ಪ್ರಾರಂಭವಾಡಿ ಈ ಮಧ್ಯ ಅದು ತೊಂದರೆಗೆ ಈಡಾಗಿ ವಿದ್ಯುಚ್ಛಕ್ತಿಯು ಉತ್ಪಾದನೆ ನಿಂತುಹೋಗಿದೆ. ಆದರೂ ಸಹ ಜೂನ್ ಅಕ್ಟೋಬರೊಳಗೆ 100 ಮಿಲಿಯನ್ ಯೂನಿಟ್‌ಗಳನ್ನು ಕೊಡುತ್ತಾರೆಂದು ವಾಗ್ದಾನ ಮಾಡಿದ್ದಾರೆ. ಆ ವಿದ್ಯುಚ್ಛಕ್ತಿ ಬಂದರೆ ಮಹಾರಾಷ್ಟ್ರ ಹಾಗೂ ಇತರೆ ಗುಜರಾತ್ ಎಲೆಕ್ಟ್ರಿಸಿಟಿ ಬೋರ್ಡ್‌ನವರು...

ಶ್ರೀ ಎಂ. ಎಸ್. ಕೃಷ್ಣನ್.—ತಮಿಳನಾಡುನವರು ಆ ರೀತಿ ಕೊಡುವುದು ಸರಿಯಾದದಲ್ಲ. ಸರ್‌ಪ್ಲಸನ್ನು ನಮಗೆ ಕೊಡಬೇಕೆಂದು ನಾವು ಒಪ್ಪಿಕೊಂಡಿದ್ದೇವೆ, ಕೇರಳದವರೂ ಸಹ ಹೇಳಿಕೆ ಕೊಟ್ಟಿದ್ದಾರೆ. ಅದರ ಬಗ್ಗೆ ನಿಮ್ಮ ರಿಯಾಕ್ಷನ್ ಏನು ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ತಮಿಳನಾಡು ಮತ್ತು ಕೇರಳದಲ್ಲಿ ಏನು ಸರ್‌ಪ್ಲಸ್ ಪವರ್ ಇದೆ ಆ ಎಲ್ಲಾ ಸರ್‌ಪ್ಲಸ್ ಪವರನ್ನು ನಮಗೆ ಕಮಿಟ್ ಆಗಿದೆ ಎಂದು ಹೇಳಿದ್ದು ನಿಜ. ಆದರೆ ವಿದ್ಯುಚ್ಛಕ್ತಿ ಮಂತ್ರಿಯವರು ಕೇರಳದಿಂದ ಬಂದಮೇಲೆ ಅವರು 400 ಮಿಲಿಯನ್ ಯೂನಿಟ್ ಕೊಟ್ಟು ಅವರಿಗೆ ರಿಸರ್ವ್ ಇರತಕ್ಕಂಥಾದ್ದು, ಕೇರಳ ಸರ್ಕಾರದ ಇಡಿಕಿ ಪವರ್ ಅಲ್ಲದೇ ತಾನು 50 ಮಿಲಿಯನ್ ಯೂನಿಟ್ ರಿಸರ್ವ್ ಇಟ್ಟು ಕೊಂಡಿರುವುದು. ತಮ್ಮ ವಿದ್ಯುಚ್ಛಕ್ತಿ ಖರ್ಚಿನಲ್ಲಿ ಉಳಿತಾಯ ಮಾಡಿ ಅದರಲ್ಲಿ 50 ಮಿಲಿಯನ್ ಯೂನಿಟ್ಟುಗಳನ್ನು, ಒಟ್ಟು ಸುಮಾರು 100 ಮಿಲಿಯನ್ ಯೂನಿಟ್‌ಗಳನ್ನು ಕೊಡುವುದಕ್ಕೆ ವಾಗ್ದಾನ ಮಾಡಿದ್ದಾರೆ. ತಮಿಳುನಾಡಿನವರು 400 ಯೂನಿಟ್ಟುಗಳನ್ನು ಕೊಡುವುದಕ್ಕೆ ಅನುಮಾನ ಮಾಡುವುದಿಲ್ಲ. ಅದಕ್ಕೆ ನಮ್ಮ ಆತಂಕವೂ ಇಲ್ಲ. 400 ಮಿಲಯನ್ ಯೂನಿಟ್ಟುಗಳನ್ನು ಕೊಟ್ಟು ಇಡಿಕಿ ಪವರ್ ಅಲ್ಲದೇ ಸ್ವಂತ ಪವರ್‌ನಲ್ಲಿ 100 ಮಿಲಿಯನ್ ಯೂನಿಟ್‌ಗಳನ್ನು ಕೊಡುವುದಕ್ಕೆ ವಾಗ್ದಾನ ಮಾಡಿದ್ದಾರೆ. ದುರಾದೃಷ್ಟವಶಾತ್ ಈ ಹಿಡಿಕಿ ಪ್ರಾಜೆಕ್ಟ್ ಕೆಲಸ ನಿಂತು ಹೋಗಿದೆ. ಅದು ಪ್ರಾರಂಭವಾದಮೇಲೆ ನಮಗೆ 100 ಮಿಲಿಯನ್ ಯೂನಿಟ್ಟುಗಳನ್ನು ಕೊಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ತಮಿಳುನಾಡು ಅವರಿಗಿಂತ ಮುಂಚೆ ನಾವೇ ಹೋಗಿದ್ದರೆ ನಮಗೆ 400 ಮಿಲಿಯನ್ ಯೂನಿಟ್ಸ್ ಸಿಕ್ಕುತ್ತಿತ್ತೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದು ಸಿಕ್ಕುತ್ತಿತ್ತೋ ಇಲ್ಲವೋ ಆ ಪ್ರಶ್ನೆ ಉದ್ಭವವಾಗುವುದಿಲ್ಲ. ಅವರು ನಮಗೆ 400 ಮಿಲಿಯನ್ ಯೂನಿಟ್ಟುಗಳನ್ನು ಕೊಟ್ಟರೂ ತಮಿಳುನಾಡು ಮುಖಾಂತರ ವಿದ್ಯುಚ್ಛಕ್ತಿಯನ್ನು ತರಿಸಬೇಕು. ಕೇರಳ ಮತ್ತು ಕರ್ನಾಟಕದ ಡೈರೆಕ್ಟ್ ಲೈನ್ ಕೆಲಸ ಕಂಪ್ಲೀಟ್ ಆಗಲಿಲ್ಲ. ಇದು ಕಂಪ್ಲೀಟ್ ಆಗುವವರೆಗೆ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಮತ್ತು ತಮಿಳುನಾಡಿನವರ ಕೃಪಾಕಟಾಕ್ಷದಲ್ಲಿ ಇರಬೇಕಾಗುತ್ತದೆ. ಈ ಮಧ್ಯ ನಾನು ಮೊದಲೇ ಉತ್ತರವನ್ನು ಕೊಟ್ಟಿದ್ದೇನೆ, ಕೇರಳದವರು ಕೊಟ್ಟರೆ ನಾವು ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಅಡ್ಡಿಯೇನೂ ಇಲ್ಲ. ಅವರು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಪ್ರಾಸಂಗಿಕವಾಗಿ ಹೇಳಿದ ಸಂದರ್ಭಗಳು ಇವೆ. ಕೇರಳ ಸರ್ಕಾರದವರು ಪತ್ರವ್ಯವಹಾರ ಮಾಡಿದ್ದಾರೆ. ನಾವು ಏನು ಕರ್ನಾಟಕಕ್ಕೆ 100 ಮಿಲಿಯನ್ ಯೂನಿಟ್ಟುಗಳನ್ನು ಕೊಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದೇವೆ ಅದನ್ನು ನೀವು ಟ್ರಾನ್ಸ್‌ಮಿಟ್ ಮಾಡುವುದಕ್ಕೆ ಸಹಕರಿಸಬೇಕು ಎಂದು ಅವರೂ ಸಹ ತಮಿಳನಾಡು ಸರ್ಕಾರಕ್ಕೆ ತಿಳಿಸಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ತಮಗೆ ಗೊತ್ತಿದೆ 400 ಮಿಲಿಯನ್ ಯೂನಿಟ್‌ಗಳನ್ನು ತಮಿಳನಾಡಿನವರಿಗೆ ಕೊಟ್ಟರೂ ಕರ್ನಾಟಕದವರು ಮೊದಲೇ ಬಂದಿದ್ದರೆ ನೂರು ಮಿಲಿಯನ್ ಯೂನಿಟ್ಟುಗಳು ಮೊದಲಿಗಿಂತ ಜಾಸ್ತಿ ಸಿಕ್ಕುತ್ತಿತ್ತು ಎಂಬ ಅಭಿಪ್ರಾಯವನ್ನು ಅಲ್ಲಿರುವ ಅಧಿಕಾರಿಗಳು ಮತ್ತಿತರರು ವ್ಯಕ್ತಪಡಿಸಿದ್ದಾರೆ. ನಮ್ಮ ಅಪ್ರೋಚ್ ಇದ್ದೂ ಅವರು ಕೊಡಲಿಲ್ಲವೆ? ಅಥವಾ ನಮ್ಮ ಅಪ್ರೋಚ್ ಇರಲಿಲ್ಲವೇ ?

ಶ್ರೀ ಎಚ್. ಸಿ ಶ್ರೀಕಂಠಯ್ಯ.— ತಮಿಳುನಾಡಿನವರು ಕೇರಳದವರೂ ಬುದ್ಧಿವಂತರಿದ್ದಾರೆ. ಅವರಿಗೆ ಗೊತ್ತಿದೆ ಈ ಕರ್ನಾಟಕದವರು ಖಾಯಂ ಗಿರಾಕಿಗಳಲ್ಲ ಎಂದು ಕೇರಳದಲ್ಲಿ ಆಗತಕ್ಕಂಥ ಪವರ್ ಉತ್ಪಾದನೆಯೆಲ್ಲವನ್ನೂ ತೆಗೆದುಕೊಳ್ಳುತ್ತಾರೆ ಎಂದು ಯಾವ ಗ್ಯಾರಂಟಿ ಇದೆ ಅವರಿಗೆ? ಅಲ್ಲಿ ಳ-ಓ ಪ್ರಾಜೆಕ್ಟ್‌ಗಳು ಬಂದರೆ ಪರ್ಮನೆಂಟ್ ಕಸ್ಟಮರ್ಸ್ ಆದ ತಮಿಳುನಾಡಿನವರೊಡನೆ ಬುದ್ಧಿವಂತಿಕೆಯಿಂದ ವ್ಯವಹಾರ ಮಾಡಿಕೊಂಡರೇ ಹೊರತು, ಕರ್ನಾಟಕದವರು ಮೊದಲೇ ಬಂದಿದ್ದರೆ ಹೆಚ್ಚು ಕೊಡುತ್ತಿದ್ದೆವು

ಎಂದು ಹೇಳಿರುವುದು ಅದು ಸರಿಯಾದುದಲ್ಲ. ಅವರು ಕೊಡುವವರಾಗಿದ್ದರೆ ೧೦೦ ಮಿಲಿಯನ್ ಯೂನಿಟ್ಸ್‌ಗೆ ೨೦೦ ಮಿಲಿಯನ್ ಯುನಿಟ್ಸ್ ಕೊಡಬಹುದಾಗಿತ್ತು. ತಮಿಳುನಾಡು ಅವರನ್ನು ಬಿಟ್ಟು ನಮ್ಮ ಹತ್ತಿರ ವ್ಯವಹಾರವನ್ನು ಮಾಡುವುದಕ್ಕೆ ೧೨.೫ ಪೈಸೆ ನಿಗದಿ ಆದಾಗ ಹಣ ನಮ್ಮಲ್ಲಿರಲಿಲ್ಲ ನಮ್ಮ ವಿದ್ಯುಚ್ಛಕ್ತಿ ಮಂತ್ರಿ ಯವರು ಅಲ್ಲಿಯ ಮಂತ್ರಿಯವರನ್ನು ಡೆಲ್ಲಿಯಲ್ಲಿ ಬೇಟಿ ಮಾಡಿ ಚರ್ಚೆ ಮಾಡಿದಾಗ ೮-೯ ನಯೇ ಪೈಸೆ ಕೊಟ್ಟರೆ ಒಪ್ಪತಕ್ಕಂಥ ಸ್ಥಿತಿಯಲ್ಲಿ ಇದ್ದರು. ತಮಿಳುನಾಡಿನವರಿಗೆ ಯಾವ ಬೆಲೆಗೆ ಅಂದರೆ ೧೨.೫ ಪೈಸೆ ವ್ಯಾಪಾರ ಮಾಡಿದ್ದಾರೆಯೋ ಅದೇ ಬೆಲೆಗೆ ಅದು ಹೆಚ್ಚಾದರೂ ನಾವು ಕೊಡಬೇಕಾಗಿದೆ. ಅದನ್ನು ನಾವು ಸಹ ಒಪ್ಪಿಕೊಂಡಿದ್ದೇವೆ ಅದನ್ನು ನೀಗಿಸುವುದಕ್ಕೆ ಅದಷ್ಟು ಜಾಗ್ರತೆ ಎಲ್ಲಾ ಪವರ್ ಪ್ರಾಜೆಕ್ಟುಗಳನ್ನೂ ಸಹ ಪೂರ್ಣಮಾಡಿ ಮೈಸೂರು ಪವರ್ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಏನು ಈ ಪ್ರಾಜೆಕ್ಟ್ ಕೆಲಸ ಆಗುತ್ತಿದೆಯೋ ಹಾಗು ವಿದ್ಯುಚ್ಛಕ್ತಿ ಬೋರ್ಡ್ ವ್ಯಾಪ್ತಿಯಲ್ಲಿ ಏನು ವಿದ್ಯುಚ್ಛಕ್ತಿ ಬಳಕೆ ಆಗುತ್ತದೆಯೋ ಇವೆರಡೂ ಸಹ ಬಹಳ ಚೆನ್ನಾಗಿ ಕೆಲಸಮಾಡುತ್ತಿವೆ. ಆದಷ್ಟು ಜಾಗ್ರತೆ ಈ ಪ್ರಾಜೆಕ್ಟ್ ಕೆಲಸಗಳನ್ನು ಮುಗಿಸಿ ವಿದ್ಯುಚ್ಛಕ್ತಿ ಕೊರತೆಯನ್ನು ನೀಗಿಸುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ತಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಈ ಸಭೆಯ ಮುಂದೆ ಇರತಕ್ಕ ಬೇಡಿಕೆಗಳಿಗೆ ತಾವೆಲ್ಲ ಯುನಾನಿಮಸ್ ಆಗಿ ಒಪ್ಪಿಗೆ ಸೂಚಿಸಬೇಕೆಂದು ಹೇಳಿ ಅಧ್ಯಕರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI SUBHAS ASTHURE (Minister of State for Major and Medium Irrigation).— ಮಾನ್ಯ ಅಧ್ಯಕ್ಷರೆ, ದೊಡ್ಡ ನೀರಾವರಿ ಇಲಾಖೆ ಬಗ್ಗೆ ಮಂಡಿಸಿದಂತಹ ಬೇಡಿಕೆಯ ಬಗ್ಗೆ ಅನೇಕ ಮಹನೀಯರು ಮಾತನಾಡಿ ಸೂಕ್ತ ಸಲಹೆಗಳನ್ನು ನೀಡಿದ ಸಲುವಾಗಿ ಅವರಿಗೆ ವಂದಿಸಿ ಈ ವಿಷಯದ ಬಗ್ಗೆ ಕೆಲವು ಮಾತುಗಳನ್ನಾಡುವುದಕ್ಕೆ ಇಚ್ಛೆಪಡುತ್ತೇನೆ.

MADAM SPEKER.– ever since we have achieved independence we are proceeding towrds the development of our country on certain basis we are proceeding by planning and planned economy and this is the object of our planning to secure rapid economic growth and expansion of employment, reduction the disparity of income and wealth, prevention of concentration of economic powers with few persons of our society. this is the main purpose of the planned economy. Irrigation is the only source with which we can achieve all these objectives. this House is also very well aware that in the State of Karnataka there are various areas which still require irrigation facilities, as far as irrigation matters are concerned. there are about 50 taluks whice are below 5 per cent of irrgation facilities There are 30 taluks which are having 5.10 per cent of irrigation facilities; there are 66 taluks which have only 10.30 per cent irrigation facilities and in 25 taluks there is 30 60 per cent of irrigation facilities. There are only 4 taluks where 60 per cent and above irrigation facilities are there. It is the emphasis of the Government to make all these areas drought proof-but not drought prone areas. This is the main object of the Government in completing so many major and medium irrigation projects with the completion of these projects and with the emphasis of the Government over irrigation. we can provide various type of employment in the rural parts Now we see that there is a great migration from rural parts to urban parts and apart from these things in the rural areas there is a lot of unemployment and under-employment. The irrigation is the only sector through which we can provide large amount of employment chances to the migrating people and as well we can have the

distribution of wealth in a planed manner. we have seen two and a half decade after independence. And though lot of amount has been spent the benefit of this has not been perculated to the people who deserve it. But with more and more irrigation facilities we are sure that these benefits will go to the rural parts and that too people who are deserving this Under this background, the Government of Karna taka has taken a great lead specially by this Government to augment the irrigation facilities in the State of Karnataka. If I quote the figu res it can be very well understood. In the lost 4 years, we have spent for the purpose of irrigation-*i.e.* only for major and medium irrigation projects sums to the tune of 130 crores. If I say that this amount is more than 50 per cent of what was spent from 56- to 1972, it may not be out of place. By this expenditure over major and medium irrigation, we have brought up to the end of 1972-75 4.8 laks hectars of fresh area under irrigation specially under the major projects in the North Zone and South Zone. And in the remaining three years of 5th Five year plan the Government is expected to spend even more than 200 crores for these projects. Madam Speaker, the administration of our major and medium irrigation is done under three Zones. we have formed three Zones *Viz*- W.R.D.O. department to manage the irrigation construc tion work as well as the farming development and to have the surveys of new projects wherever they can be. The South Zone which covers the entire area which comes under the Cauvery basin and the Central Zone which mostly covers Tungabhadra project and other medium and major projects in four districts of Bidar, Gulbarga, Raichur and Bellary and the North Zone which is concerned with the northern part of the State under which the major projects like Ghataprabha, Malaprabha and and Upper-Krishna and one or two medium projects will come. During the last 3-4 years the work which has been completed in these projects is really praiseworthy. In the South, under Cauvery basin the Kabini Reservoir is completed. This project is expected to irrigate about 4 lakh 50 thousand acres of land. Dam work is completed and only the canal work is in progress. The same is in the care of Harangi and Hemavathi. By June 1977 we may partially store water as well as irrigate some of the areas. in all these major projects there are some old anicuts to which we are giving water for second crop.

SRI M. S. KRISHNAN.— How much you provide for the canal work in these areas?

SRI SUBHAS ASTHUKE.— The head-work is almost completed. Whatever the amount provided, the Kabini project is going to be completed. Only the canal works and some beautification works are yet to be completed. The amout for 1976-77 provided is 3 crores 25 lakhs. For Hemavathy, Harangi, Kabini aud Karanja projects we have

provided about 16 crores. Apart from these there are some medium projects which have come to the stage of completion. One of them is Gundal project which is going to be completed soon. There are somany other projects where we have taken up preliminary works. With regard to Manchanabele preject also we have taken up preliminary works. we have provided about 10-15 laks for this project.

Coming to the Central Zone, the major project is Tungabhadra project. The project is long back completed. the left bank canal which is not in opposition to carry the expected discharg of water. The Government is strengthening the left bank canal and the right bank high level canal works are also in progress to see that the anticipated area of the project is irrigated.

Then coming to the North Zone, the major projects are Ghataprabha Malaprabha and Upper-Krishna. So far as Malaprabha is concerned the head-work of the dam is almost completed and tne major work is of canals. we have taken up number of acquaducts and tunnels. In most of the major projects the gretest hurdles are the number of mountains and big rivers. We have to take tunnels either through the hillocks or across the rivers.

In all these projects many tunnels have been taken up. This year we had taken 3-4 tunnels and acquaducts. Acquaducts across the river Cauvery are in progress. In Ghataprabha dam work is completed and the dam is partially stored with water. By June 77 we will store the water and bring more areas under irrigation. In the Left Bank Canal already lakhs of acres are brougat under irrigation. This year we propose to bring fresh area under irrigation under the Left Bank Canal. Under the Right Bank Canal of Ghattaprabha we have taken up a tunnel costing about Rs. 6 crores The water stored in the Ghattaprabha will be supplied to Bijapur District and other drought prone areas of Belgaum District.

Coming to the Upper Krishna Project, it is a giant project in this State and if I say that it is one of the biggest projects of the country. Many hon'ble members while speaking on this demand have expressed their fear whether the Government will construct this project at all. I may inform them that the Government is making all out efforts to see that this project is completed by taking the World Bank assistance With this end in view the Government has provided a sum of Rs. 4 crores during the next year's budget for augmenting the work in this project.

Hon'ble members Sri Kadadi while speaking yesterday said that the foundation-work of Almatti dam is going to be submerged after the completion of the Narayanpur Dam. I would like to inform him that it would not be so. Both the flank works have been brought to a safe

stage ; only gorge portion has not been taken up for obvious reasons The agency has been fixed up for the completion of the work. Even though the work is divided into three phases but it forms part of the same work. There is still a lot of time to complete the work. The question of submersion arises only after completing the Narayanpur Dam and creating storage capacity. When the water is stored, the question of submersion of foundation–arises. We are aware of all these facts and foundation work will be completed before we create complete storage.

SRI J. L. KABADE.—You have completely taken away the staff of the Almatti Dam.

SRI SUBHAS ASTURE—The recent trend to the Central Government as well as the Karnataka Government is wherever it is possible money should be spent to get immediate results. The hon. member may not mistake me if I tell him that even if we spend Rs. 30 or 40 crores on the Upper Krishna Project, there is very little chance of getting immediate results. If we spend this much of amount elsewhere, for instance, Malaprabha and Ghataprabha, we hope to get immediate results. From 1972-75, 4.8 lakh hectres of fresh area has been brought under cultivation under major irrigation. That is thy immediate attention has to be given to the Ghattaprabha and Malaprabha projects as these projects have come to completion stage. After that great attention will be given to Upper Krishna Project. Some hon'ble member stated that I would like to take credit for the Karanja project. I may inform him that my pet project is Upper Krishna. Karanja is a small buchha (child) before Krishna project. I want to take credit by completing the Upper Krishna project early but not Karanja project.

There are so many other projects wherein we are spending for lift irrigations. Lift irrigations are more in Mallaprabha Project. There are only two lift irrigation schemes in Krishna Project.

As far as Hippergi Barrage is concerned, the work is in progress and whe have provided a sizeable amount to complete this project.

SRI H. T. KRISHNAPPA.—Is it the intention of the hon. Minister to neglect the buchhas (children) to feed the giants ?

SRI SUBHAS ASTURE.—So far as Hippergi Barrage is concerned, the Government has provided about Rs. 50 lakhs. This work will be pursed with great speed.

ಶ್ರೀ ಎಂ. ಎಸ್. ಕೃಷ್ಣನ್. — ತಾವು ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಬಗ್ಗೆ ೩೦–೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಪ್ರಯೋಜನವಿಲ್ಲ ಎಂದು ಹೇಳುತ್ತಿದ್ದೀರಿ. ಅದೇ ಹಣವನ್ನು ಬೇರೆ ಕಡೆ ಖರ್ಚು ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆಂದು ಹೇಳುತ್ತೇನೆ. ಈಗ ನನ್ನ ಪ್ರಶ್ನೆ ಏನೆಂದರೆ You must look at it from a separate view point.

ಶ್ರೀ ಸುಭಾಷ್ ಅಸ್ನೂರೆ.—ನಾನು ಹೇಳಿದ್ದು ಹಾಗಲ್ಲ. ತಾತ್ಕಾಲಿಕವಾಗಿ ಮಿನಿಮಮ್ ರಿಸಲ್ಟ ಬರುತ್ತದೆಂದು ಮಾಡಿದ್ದೇನೆ. It is not that we have completely given up or neglected some projects in order to complete some other projects.

ಶ್ರೀ ಜೆ. ಎಲ್. ಕಬಾಡೆ.—ಈ ಪ್ರಮಾಣದಲ್ಲಿ ಖರ್ಚು ಮಾಡಿದರೆ ಆ ಪ್ರಾಜೆಕ್ಟ್ ಮುಗಿಯುವುದಕ್ಕೆ ಎಷ್ಟು ವರ್ಷಗಳು ಬೇಕಾಗುತ್ತದೆ. ?

ಶ್ರೀ ಸುಭಾಷ್ ಅಸ್ನೂರೆ.—೧೯೫೬ ರಿಂದ ೧೯೭೨ರ ವರೆಗೆ ಎಷ್ಟು ರೊಕ್ಕ ಖರ್ಚು ಮಾಡಿದರೂ ೫೦ ಪರ್ಸೆಂಟಿಗಿಂತ ಹೆಚ್ಚಾಗಿಲ್ಲ. ಈಗ್ಗೆ ೪ ವರ್ಷಗಳಿಂದ ಮತ್ತು ಮುಂದೆ ಬರತಕ್ಕ ೩ ವರ್ಷಗಳಲ್ಲಿ ೨೦೦ ಕೋಟಿಗಿಂತ ಹೆಚ್ಚು ಖರ್ಚು ಮಾಡುತ್ತೇವೆ. ತಮಗೆ ಹೇಳಬೇಕೆಂದರೆ ೧೬ ವರ್ಷಗಳಲ್ಲಿ ಎಷ್ಟು ಖರ್ಚು ಮಾಡಿದ್ದೇವೆಯೋ ಅದಕ್ಕಿಂತ ಹೆಚ್ಚಾಗಿ ಈಗಿನ ೩-೪ ವರ್ಷಗಳಲ್ಲಿ ಖರ್ಚು ಮಾಡಿದ್ದೇವೆ. ಇನ್ನು ೪ ವರ್ಷಗಳಲ್ಲಿ ನಮ್ಮ ಸ್ಟ್ಯಾಟಿಸ್ಟಿಕ್ಸ್ ಪ್ರಕಾರ ರಾಜ್ಯದಲ್ಲಿರತಕ್ಕ ೪೬ ಲಕ್ಷ ಹೆಕ್ಟೇರ್ ಭೂಮಿಯನ್ನು ನೀರಾವರಿ ಮಾಡಬಹುದು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಕಾರಂಜಿ ಪ್ರಾಜೆಕ್ಟಿಗೆ ತಮ್ಮ ಎಸ್ಟಿಮೇಟ್ ಪ್ರಕಾರ ೨೮ ಕೋಟಿ ರೂಪಾಯಿ ಆಗಬೇಕು, ಅದಕ್ಕೆ ಪ್ರತಿ ವರ್ಷ ಒಂದೊಂದು ಕೋಟಿ ಪ್ರೊವೈಡ್ ಮಾಡಿದರೆ ಅದು ಮುಗಿಯುವುದಕ್ಕೆ ೨೮ ವರ್ಷವೇ ಆಗುತ್ತದೆ. ನೀವು ಅದನ್ನು ಮುಗಿಸುವುದರೊಳಗೆ ರೇಟ್ ರಿವೈಸ್ ಆದರೆ ಏನು ಮಾಡುತ್ತೀರಿ ?

ಶ್ರೀ ಸುಭಾಷ್ ಅಸ್ನೂರೆ.—ಇದರ ವಿಚಾರವಾಗಿ ಹೇಳಬೇಕೆಂದರೆ, ಎಲ್ಲಾ ಕಡೆ ಅನೇಕ ಪ್ರಾಜೆಕ್ಟುಗಳನ್ನು ತೆಗೆದುಕೊಂಡಿದ್ದೇವೆ. ಪ್ರತಿಯೊಂದು ಜಿಲ್ಲೆಯವರು ನಮ್ಮ ಜಿಲ್ಲೆಯಲ್ಲಿ ತೆಗೆದುಕೊಳ್ಳಿ ಎಂದು ಆಗ್ರಹ ಮಾಡುತ್ತಾರೆ. ಕೆಲವು ಮಾನ್ಯ ಸದಸ್ಯರು ನಮ್ಮಲ್ಲಿ ಮೀಡಿಯಂ ಮತ್ತು ಮೇಜರ್ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಲಿಲ್ಲ, ಒಂದನ್ನಾದರೂ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತಾರೆ. ನಮ್ಮ ರಾಜ್ಯದ ಬಹುಭಾಗದಲ್ಲಿ ಡ್ರಾಟ್ ಪ್ರೋನ ಏರಿಯಾ ಎಲ್ಲಿ ಇದೆ. ಅದನ್ನು ಪ್ರೂವ್ ಮಾಡಬೇಕು. ಪ್ರಾಜೆಕ್ಟುಗಳನ್ನು ಒಂದೇ ಕಡೆ ತೆಗೆದುಕೊಳ್ಳದೆ ಪ್ರತಿಯೊಂದು ಜಿಲ್ಲೆಯಲ್ಲೂ ತೆಗೆದುಕೊಂಡರೆ ಎಲ್ಲದಕ್ಕೂ ಸರಿಯಾಗಿ ಹಣವನ್ನು ಹಂಚಬೇಕಾಗುತ್ತದೆ. ಕೆಲವು ಪ್ರಾಜೆಕ್ಟುಗಳನ್ನು ಪ್ರೈಯಾರಿಟಿ ಕೊಟ್ಟು ಮುಗಿಸಬೇಕಾಗುತ್ತದೆ. ಒಂದು ಪ್ರಾಜೆಕ್ಟ್ ಮುಗಿದ ಮೇಲೆ ಇನ್ನೊಂದಕ್ಕೆ ಹೆಚ್ಚಿಗೆ ಹಣವನ್ನು ಒದಗಿಸಬಹುದು ಮತ್ತು ಹಂತ ಹಂತವಾಗಿ ಎಲ್ಲಾ ಪ್ರಾಜೆಕ್ಟುಗಳನ್ನು ಆದಷ್ಟು ಜಾಗ್ರತೆ ಮುಗಿಸಬಹುದೆಂದು ಹೇಳುತ್ತೇನೆ. ಈಗ ರಾಜ್ಯದಲ್ಲಿ ಕಳೆದ ೩-೪ ವರ್ಷಗಳಿಂದ ನೀರಾವರಿ ಕೆಲಸಕ್ಕಾಗಿ ಖರ್ಚು ಮಾಡಿರುವ ಹಣವನ್ನು ನೋಡಿದರೆ ಸರ್ಕಾರದವರು ಯಾವ ದಿಸೆಯಲ್ಲಿ ನೀರಾವರಿ ಕೆಲಸಗಳನ್ನು ಮಾಡಲು ಪ್ರಯತ್ನ ಮಾಡುತ್ತಿದ್ದಾರೆಂಬುದು ಗೊತ್ತಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಕೃಷ್ಣರಾಜ ಸಾಗರದಿಂದ ವರುಣಾ ನಾಲೆಯನ್ನು ತೆಗೆಯಬೇಕು ಎಂದು ಒಂದು ಅಂದಾಜಾಗಿ, ಅದು ಮಂಜೂರಾಗಿ ೭-೮ ವರ್ಷ ಆಯಿತು ಆ ಮೇಲೆ ಅದನ್ನು ಬದಲಾವಣೆ ಮಾಡಿ ಇದೇ ಕೃಷ್ಣರಾಜಸಾಗರದಿಂದ ಹೈಲೆವೆಲ್ ಕೆನಾಲ್ ಮಾಡಬೇಕು ಎಂದು ಎಲ್ಲಾ ಅಳತೆಯಾಗಿ ಬಹಳ ವರ್ಷಗಳಾಯಿತು. ಇದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಸುಭಾಷ್ ಅಸ್ನೂರೆ.—ಈ ವರ್ಷ ಅದನ್ನು ತೆಗೆದುಕೊಳ್ಳಲು ತೀರ್ಮಾನಿಸಲಾಗಿದೆ.

ಶ್ರೀ ಡಿ. ಹಲಗೇಗೌಡ.—ಇದಕ್ಕೆ ತಾಂತ್ರಿಕ ಒಪ್ಪಿಗೆ ದೊರೆತಿದೆಯೋ ? ಈ ವರುಣಾ ನಾಲೆಯನ್ನು ತೋಡುವ ಬಗ್ಗೆ ತೀರ್ಮಾನವನ್ನು ಕೈಗೊಳ್ಳುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಿದ್ದರು. ಈ ನಾಲೆಯನ್ನು ತೋಡಿದರೆ ಕೆ.ಆರ್.ಎಸ್. ಯೋಜನೆಯಿಂದ ನೀರು ಪಡೆಯುತ್ತಿರುವ ನಾಲೆಯ ಕೊನೆಯಲ್ಲಿರುವ ಅಚ್ಚುಕಟ್ಟುದಾರರಿಗೆ ತೊಂದರೆಯಾಗುತ್ತದೆ, ಅದಕ್ಕೋಸ್ಕರ ಆ ಬಗ್ಗೆ ನೇಮಿಸಿದ ಸಮಿತಿಯವರ ವರದಿ ಬಂದಿದೆಯೋ ? ಅವರು ಏನು ಅಭಿಪ್ರಾಯ ಕೊಟ್ಟಿದ್ದಾರೆ ?

5.00 PM.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ ಈ ವರುಣಾ ನಾಲೆಯ ದುರಂತ ಕಥೆ ಎಲ್ಲರಿಗೂ ಗೊತ್ತಿದೆ. ಅದರ ಹಿನ್ನಲೆ ಅವರಿಗೆ ಸರಿಯಾಗಿ ಗೊತ್ತಿಲ್ಲ. ಇದು ಒಂದು ದುರಂತದ ಕಥೆಯಾಗಿದೆ. ಕೃಷ್ಣರಾಜಸಾಗರವನ್ನು ಕಟ್ಟುವ ಕಾಲದಲ್ಲಿಯೇ ವರುಣಾನಾಲೆಯನ್ನು ತೆಗೆಯುವ ಬಗ್ಗೆ ಮೊಲ್ದಂಡೆಯ

ಕಾಲುವೆಯನ್ನು ನಿರ್ಮಿಸುವ ಬಗ್ಗೆ ಸರ್ ಎಂ. ವಿಶ್ವೇಶ್ವರಯ್ಯನವರು ಯೋಜನೆಯನ್ನು ಹಾಕಿದ್ದರು. ದುರದೃಷ್ಟವಶಾತ್ ಅದನ್ನು ತೆಗೆಯಲು ಯೋಜನೆಯನ್ನು ಮಾಡಿದಾಗಲೆಲ್ಲ ರಾಜಕೀಯ ಅಡ್ಡಿ ಬಂದು ಆ ಕಡೆಯ ಭಾಗದ ಜನರ ಒತ್ತಾಯ ಜಾಸ್ತಿಯಾಗಿತ್ತೋ ಏನೋ ಆ ಕಾಲುವೆಯನ್ನು ತೆಗೆಯಲಿಲ್ಲ. ಹಾಗೆ ಬಿಟ್ಟು ಹೋಗಿತ್ತು ಮತ್ತೆ ಒಂದು ಸಂದರ್ಭದಲ್ಲಿ ಈ ನಾಲೆಯನ್ನು ತೆಗೆಯಬೇಕೆಂದು ಚರ್ಚೆ ಮಾಡುವುದಕ್ಕೆ ಹೋದಾಗ ರಾಜಕೀಯ ಒತ್ತಡ ಜಾಸ್ತಿಯಾಯಿತು. ಇದು ಶ್ರೀಮಾನ್ ಪುಟ ಸ್ವಾಮಿಯವರಿಗೆ ಗೊತ್ತಿದೆ. ಈ ಒತ್ತಡದಿಂದ ಆ ನಾಲೆಯ ಕೆಲಸವನ್ನು ಮುಂದುವರಿಸಲಿಲ್ಲ. ಹಾಗೆಯೇ ಪುನಃ ನಿಂತುಹೋಯಿತು. ಅದು ಆಗಬಾರದು ಎಂದು ಒತ್ತಡ ಜಾಸ್ತಿಯಾಗಿತ್ತು. ಶ್ರೀ ಮಾನ್ ಪುಟ್ಟಸ್ವಾಮಿಯವರಿಗೆ ಬೆಂಬಲ ಕಡಿಮೆ ಇತ್ತು.

That is the political reality. Now we have decided to take up the Varuna Canal. There is no question of going back on it. It was contemplated at the very inception of the project in order to give water to those dry regions. Whatever the area, it is all Karnataka. There is no point in saying that the Varuna Canal should not be taken up because it will affect the tail-end. The hon. Members know the politics in Mandya. Even the tail-enders as it is are suffering without the Varuna Canal.

SRI H. T. KRISHNAPPA.—With due respect to the Hon. Chief Minister. ಇದರ ಬಗ್ಗೆ ಟೆಕ್ನಿಕಲ್ ಒಪೀನಿಯನ್ ಯಾವ ರೀತಿ ಕೊಟ್ಟಿದ್ದಾರೆ ಎನ್ನುವ ಅಂಕಿ ಅಂಶಗಳನ್ನು ಕೊಟ್ಟರೆ ಒಳ್ಳೆಯದು,

SRI D. DEVARAJ URS.—We are taking up the Varuna Canal.

SRI H. T. KRISHNAPPA.—Is it on technical advice that it is being taken up ?

SRI D. DEVARAJ URS.—These technicalities have gone on for 35 years without being solved. Now, Government is going to solve them and we are going to take up that canal. Provision has been made in this year's budget and the hon. Member can kindly look into the budget.

ಶ್ರೀ ಎಚ್. ಎನ್. ನಂಜೇಗೌಡ.—ಈ ವರುಣಾ ನಾಲೆಯ ಬಗ್ಗೆ 1972ನೇ ಇಸವಿಗಿಂತ ಮುಂಚೆ 27 ಸಾವಿರ ಎಕರೆ ನೀರಾವರಿ ಆಗುವಂತಹ ಒಂದು ಅಂದಾಜು ಇತ್ತು. ಆ ಮೇಲೆ ಅದು ರಿವೈಜ್ ಆಗಿ ಒಂದು ಲಕ್ಷ ಚಿಲ್ಲರೆ ಎಕರೆ ನೀರಾವರಿ ಮಾಡಬೇಕೆಂದು ಮಾಡಿದರು. ಆದ್ದರಿಂದ ಈಗ ತಾವು ಹೇಳತಕ್ಕದ್ದು ಯಾವುದು ?

SRI D. DEVARAJ URS.—I will tell him about this in due course.

SRI K. PUTTASWAMY.—I thank the Hon. Chief Minister. I was not in a minority when we were not being listened to. I am glad, however, that there is a Chief Minister who is now listening to us and has realised that it is a long overdue work. My complaint has been that Varuna Canal as it was conceived has been given up. I have absolutely no objection to that having been given up. Instead of that a high-level canal survey has been conducted, an estimate has been prepared and I was anxious to know when exactly they are going to start the work.

SRI D. DEVARAJ URS.—As I said, we are starting this year.

SRI SUBHAS ASTURE.—In the economics of Irrigation Karnataka has pioneered in a number of ways. Karnataka is the first State which has started the Command Area Development Authority. Similarly, in the construction of canals alongside the dam work also. Karnataka is the first State which has started this work. In almost all our major and medium works we have planned our projects in such a way that when they come up to a particular level, partial storage of water is made and it is immediately made use through the channels we have constructed.

Even today the irrigation wing of the P. W. D. is not a separate organisation and it is part and parcel of the P.W.D. In this advanced stage of technology, science and engineering, irrigation is a highly technical subject and these are days of expertise. In view of all these factors and in view of the magnitude of the work and with a view to hasten the speed of the projects, Government has decided to bifurcate the Irrigation wing from the P.W.D. and create a new Department of Irrigation and this will help in the completion of the projects. Even though we have completed various projects and potential has been created, the utilisation of water is not economical. In order to use the water economically and in order to ensure better management of water, the Command Area Development Authority has been created and Government is thinking how best it can be made more and more effective.

In the course of the debate the hon. Member Sri Hukkeri suggested the diversion of Mahadai River. It is a good suggestion, and Government will certainly consider it.

As far as river disputes are concerned, we have got the Godavari dispute, Krishna dispute and Cauvery dispute. In the case of Krishna dispute, the hearing is over. We have made a reference under Section 5 of the Inter-State Water Dispute Act and we have appointed one of the eminent lawyers of India, Sri Sachin Choudhary, to appear on behalf of the Government of Karnataka. We have made all efforts to see that we get more and more water from this dispute.

As for as the Godavari dispute is concerned, hon. Members are well aware that recently a temporary agreement has been reached under which we can go ahead with our existing projects in the Godavari basin to the extent of 14.27 T.M.C. ft. The Karanja Project can utilise 13.17 T.M.C. ft. and Surkinala 1.17 T.M.C. ft of water. I may inform the House that at Douleswaram where there is a reservoir even after the utilisation of that water for all the projects under

construction, there will still be 7.82 T.M.C. ft. of water available for allocation in the basin and we can contend for further share out of it. This is so far as river disputes are concerned.

SRI M. S KRISHNAN.—Till the disputes are settled, have you got plans prepared for the utilisation of Krishna waters that has been allotted to this State ?

SRI SUBHAS ASTURE.—We have been allotted 695 T. M. Cft. of Krishna waters. Out of that there is commitment for 524 T. M. Cft. The Balance of 171 T. M. Cft. have to be utilised.

SRI M. S. KRISHNAN.—Are we to take that till the dispute is finally settled, Government is not having any plans in regard to utilisation of the balance of 171 T. M. Cft. of water ?

SRI D DEVARAJ URS.—Before the dispute went before the Tribunal we had proposal for the use of 1400 T. M. Cft. water. Plans are there but water is not there. Even if we get another 150 or 200 T.M. Cft. of water one need not have any apprehension that we have no plans. We have enough plans to absorb what all comes to our share. Even if more water comes to us, we have plans.

SRI SUBHAS ASTURE.—In the course of discussion Sri K. H. Hanume Gowda cited the example of Haryana in respect of well sinking. In our State the Director for Ground Water Resources is making efforts to find the sources of ground water. Geographic conditions of Haryana and Karnataka are different. In Haryana under-grounded water sources is very high. In the State of Karnataka because of geographic conditions even within a radius of one mile, in one place we may get any quantity of water but in other places no water at all.

ಶ್ರೀ ಕೆ. ಎಚ್. ಹನುಮೇಗೌಡ —ಪಂಜಾಬ್, ಹರಿಯಾಣಗಳಲ್ಲಿ ಅಂಡರ್‌ಗ್ರೌಂಡ್ ವಾಟರ್‌ಗೆ ಬೋರ್‌ಗಳನ್ನು ಹಾಕಿ ಉಪಯೋಗ ಮಾಡಿಕೊಂಡಿರುವ ಹಾಗೆ ನಮ್ಮಲ್ಲೂ ಮಾಡಬೇಕು ಎಂದು ನಾನು ಸಲಹೆ ಮಾಡಿದ್ದು. 30-40 ಕಾರ್ಪೋರೇಷನ್ಸ್ ಮಾಡಿದ್ದೀರಿ. ರೈತರಿಗೆ ಅನುಕೂಲವಾಗುವ ಹಾಗೆ ಅವರಿಗೆ ಜವಾಬ್ದಾರಿ ಕೊಟ್ಟು, ಹಣ ಕೊಡಬೇಕು ಎಂದು ನಾನು ಸಲಹೆ ಮಾಡಿದ್ದೆ.

ಶ್ರೀ ಸುಭಾಷ್ ಅಸ್ಟೂರ್.—ಎಲ್ಲೆಲ್ಲಿ ಎಷ್ಟೆಷ್ಟು ನೀರು ಸಿಗುತ್ತದೆ ಎಂದು ಕಂಡುಹಿಡಿದ ನಂತರ ಆ ಪ್ರಶ್ನೆ ನಮಗೆ ಬರುತ್ತದೆ. ಘಟಪ್ರಭ ಗ್ರೌಂಡ್ ವಾಟರ್ ಸೆಲ್‌ನ್ನು ಇತ್ತೀಚೆಗೆ ಮಾಡಿದ್ದೇವೆ. ಯೂಸ್ ಆಫ್ ಕಂಜೆಕ್ಟೀವ್ ವಾಟರ್ ವಿತ್ ಕೆನಾಲ್ ವಾಟರ್ ಎಂದು. ಎಷ್ಟರ ಮಟ್ಟಿಗೆ ಭಾವಿ ನೀರು ಕೆನಾಲ್ ನೀರು ಇದೆ ಎನ್ನುವುದನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ. ಪಂಜಾಬ್, ಹರಿಯಾಣ ಸ್ಟೇಟಿನಲ್ಲಿ ಮಾಡಿದಂಥ ಕ್ರಮವನ್ನು ನಾವು ಕೂಡ ಕೈಗೊಳ್ಳಬಹುದು. ಆದರೆ ಅಲ್ಲಿನ ವಾಟರ್ ಪೋಸಿಷನ್‌ಗೂ ಇಲ್ಲಿನ ವಾಟರ್ ಪೋಸಿಷನ್‌ಗೂ ವ್ಯತ್ಯಾಸ ಇದೆ.

ಶ್ರೀ ಎ. ಶರಣಪ್ಪ —ಅಪ್ಪರ್ ಕೃಷ್ಣ ಬಗ್ಗೆ ಮತ್ತು ಲಿಫ್ಟ್ ಇರಿಗೇಷನ್ ಸ್ಕೀಮುಗಳು ಬಹಳ ಇವೆ—ಇವುಗಳ ಬಗ್ಗೆ ನೀವು ಏನೂ ಹೇಳಲಿಲ್ಲ.

ಶ್ರೀ ಸುಭಾಷ್ ಅಸ್ನೂರ್.—ಅಪ್ಪರ್ ಕೃಷ್ಣ, ಹಿಪ್ಪರಗಿ ಬ್ಯಾರೇಜ್ ಎಷ್ಟು ಇದೆ, ಯಾವುದು ನಮಗೆ ಸಿಕ್ಕುತ್ತದೆ ಎನ್ನುವುದನ್ನು ನೋಡಿಕೊಂಡು ಆಮೇಲೆ ನಾವು ಮಾಡಬೇಕು. ಇಷ್ಟನ್ನು ಹೇಳಿ, ಈ ಇಲಾಖೆಗೆ ಕೇಳಿದಂಥ ಹಣಕ್ಕೆ ಮನ್ನಣೆ ಕೊಡಬೇಕು ಎಂದು ನಾನು ಕೇಳುತ್ತೇನೆ.

† ಶ್ರೀ ಡಿ. ದೇವರಾಜ್ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ನನ್ನ ಸಹೋದ್ಯೋಗಿಗಳು ಇಬ್ಬರು ಪವರ್ ಪ್ರಾಜೆಕ್ಟ್ಸ್ ಮತ್ತು ಇರಿಗೇಷನ್ ಪ್ರಾಜೆಕ್ಟ್ಸ್‌ಗೆ ಸಂಬಂಧಪಟ್ಟ ಡಿಮ್ಯಾಂಡ್‌ಗಳ ಬಗ್ಗೆ ಮಾತನಾಡಿದ್ದಾರೆ. ನಾನು ಅವರು ಮಾತನಾಡಿರತಕ್ಕ ವಿಷಯಗಳನ್ನು ಮತ್ತೆ ಹೇಳುವುದು ಸರಿಯಾದುದಲ್ಲ. ಇನ್ನು ಉಳಿದಿರತಕ್ಕ ಡಿಮ್ಯಾಂಡ್‌ಗಳ ಬಗ್ಗೆ ಮಾತನಾಡಬೇಕಾಗಿದೆ. ಮೊದಲನೆಯದಾಗಿ, ಪ್ಲಾನಿಂಗ್ ವಿಚಾರವಾಗಿ ಈ ಸಭೆಗೆ ಕೆಲವು ವಿಷಯಗಳನ್ನು ತಿಳಿಸಬೇಕು ಎಂದು ನನ ಇಚ್ಛೆ ಇದೆ. ಈಗಾಗಲೇ ಮಾನ್ಯ ಸದಸ್ಯರಿಗೆಲ್ಲರಿಗೂ ಪ್ರತಿಯೊಂದು ಡಿಪಾರ್ಟ್‌ಮೆಂಟುಗಳ ಬಗ್ಗೆ ಬೇರೆ ಬೇರೆ ಹೊತ್ತಿಗೆಗಳನ್ನು ಒದಗಿಸಿಕೊಟ್ಟಿದ್ದಾರೆ. ಮಾನ್ಯ ಸದಸ್ಯರೆಲ್ಲರೂ ಈ ಹೊತ್ತಿಗೆಗಳನ್ನು ನೋಡಿರುತ್ತಾರೆಂದು ನನ್ನ ಭಾವನೆ. ಒಂದು ವೇಳೆ ಮಾನ್ಯ ಸದಸ್ಯರಿಗೆ ವಿರಾಮವಿಲ್ಲದೆ ಓದುವುದಕ್ಕೆ ಆಗದೇ ಇದ್ದರೆ, ವಿರಾಮ ಇದ್ದಾಗಲಾದರೂ ದಯಮಾಡಿ ಇದನ್ನು ಓದಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ. ಎಸ್, ಕೃಷ್ಣನ್.—ಇಲ್ಲಿಗೆ ಬಂದ ಮೇಲೆ ವರದಿಗಳನ್ನು ಕೊಟ್ಟರೆ ಇಲ್ಲಿ ಕುಳಿತುಕೊಂಡು ಓದುವುದಕ್ಕಾಗುತ್ತದೆಯೋ ? ಎರಡು ದಿವಸ ಮುಂಚಿತವಾಗಿ ಒದಗಿಸಿದರೆ, ಚೆನ್ನಾಗಿ ಓದಿಕೊಂಡು ಬಂದು ಚೆನ್ನಾಗಿ ಮಾತನಾಡಬಹುದು.

ಶ್ರೀ ಡಿ. ದೇವರಾಜ ಅರಸ್.—ಲೆಜಿಸ್ಲೇಚರ್ ಸೆಕ್ರೇಟರಿಯೇಟ್‌ನಿಂದ ಈ ಪುಸ್ತಕಗಳನ್ನು ತಮಗೆ ಒದಗಿಸಿರುವುದು, ಡಿಮ್ಯಾಂಡ್‌ಗಳು ಬರುವುದಕ್ಕೆ 3 ದಿವಸ ಮುಂಚಿತವಾಗಿ ; ಅಂದರೆ ಶನಿವಾರದ ದಿವಸ. ಪ್ಲಾನಿಂಗ್ ಹೊತ್ತಿಗೆ ಏನಿದೆ ಅದನ್ನಾದರೂ ತಾವು ಓದಿದರೆ ಅದರಲ್ಲಿ ಅನೇಕ ಮಾಹಿತಿಗಳು ತಮಗೆ ಒದಗುತ್ತವೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಕೆಲವಾರು ವರ್ಷ ನಮ್ಮಲ್ಲಿದ್ದರೂ ಸಹ 4 ವರ್ಷಗಳಿಂದೀಚೆಗೆ ಅದಕ್ಕೆ ರೂಪುರೇಷೆಗಳು, ಅದಕ್ಕೆ ಪುಷ್ಟಿ ಎಲ್ಲವನ್ನೂ ನಾವು ಕೊಟ್ಟುಕೊಂಡು ಬಂದಿದ್ದೇವೆ. ಇದು ಒಂದು ರೆಗ್ಯುಲರ್ ಡಿಪಾರ್ಟ್‌ಮೆಂಟ್ ಆಗಿ, ಫುಲ್‌ಫ್ಲೆಡ್ಜ್‌ಡ್ ಡಿಪಾರ್ಟ್‌ಮೆಂಟ್ ಆಗಿ ನಮ್ಮ ರಾಜ್ಯದಲ್ಲಿ ಕೆಲಸ ಮಾಡುತ್ತಾ ಇದೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಿಂದ ಏನೇನು ಕೆಲಸಗಳು ಆಗಿದೆ, ಆಗುತ್ತಾ ಇದೆ ರೆವಲ್ಯೂಷನ್ ವರ್ಕ್ ಏನಾಗುತ್ತದೆ, ಪ್ರಾಸ್ಪೆಕ್ಟೀವ್ ಪ್ಲಾನಿಂಗ್ ಎಂದರೆ ಯಾವುದು ಇದೆ, ನೋಡೋಣ ಮತ್ತೆ ಕೆಲವು ಪ್ಲಾನುಗಳನ್ನು ವರ್ಲ್ಡ್ ಬ್ಯಾಂಕ್‌ಗೆ ಕೊಡಬೇಕಾದರೆ—ಅದು ಡೈರಿ ಡೆವಲಪ್‌ಮೆಂಟ್ ಆಗಲೀ, ಮಾರ್ಕೆಟಿಂಗ್ ಡೆವಲಪ್‌ಮೆಂಟ್ ಆಗಲಿ, ಕೃಷ್ಣ ಪ್ರಾಜೆಕ್ಟ್ ವಿಚಾರದಲ್ಲಾಗಲೀ—ಹೀಗೆ ಅನೇಕ ಬೇರೆ ಬೇರೆ ಬಾಬುಗಳಿಗೆ ನಾವು ಹಣವನ್ನು ಒದಗಿಸಿಕೊಳ್ಳುವುದಕ್ಕೆ ಹೊರಗಡೆಯಿಂದಾಗಲೀ, ಬ್ಯಾಂಕುಗಳಿಂದಾಗಲೀ ಪ್ರಾಜೆಕ್ಟ್ ರಿಪೋರ್ಟ್ ಬೇಕು ಎಂದು ಕೇಳುತ್ತಾರೆ. ಇಂಥದ್ದಕ್ಕೆಲ್ಲಾ ನಮ್ಮ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಪ್ರಾಜೆಕ್ಟ್ ರಿಪೋರ್ಟ್‌ಗಳನ್ನು ತಯಾರು ಮಾಡುತ್ತಾರೆ. ಆಮೇಲೆ ನಮ್ಮಲ್ಲಿ ಎವಲ್ಯೂಷನ್ ಎಂದರೆ, ಎಲ್ಲಾ ಡಿಪಾರ್ಟ್‌ಮೆಂಟ್‌ಗಳು ಏನು ಕೆಲಸ ಮಾಡುತ್ತಾ ಇವೆ, ಕೆಲಸಕಾರ್ಯಗಳು ನಾವು ನಿರೀಕ್ಷಣೆ ಮಾಡಿದ ರೀತಿ ನಡೆಯುತ್ತಾ ಇವೆಯೇ, ಲೋಪದೋಷಗಳು ನಡೆಯುತ್ತಿವೆಯೋ ಎಂಬ ಈ ಎಲ್ಲಾ ಕಾರ್ಯಗಳನ್ನು ನೋಡಿಕೊಳ್ಳತಕ್ಕದ್ದು ಪ್ಲಾನಿಂಗ್ ಡಿಪಾರ್ಟ್‌ಮೆಂಟಿಗೆ ಸೇರಿದೆ. ವರ್ಷೇ ವರ್ಷೇ ನಾವು ಎಷ್ಟು ಪ್ರಮಾಣದಲ್ಲಿ ಪ್ರಗತಿಯನ್ನು ಹೊಂದುತ್ತಾ ಇದ್ದೇವೆ, ಪಂಚವಾರ್ಷಿಕ ಯೋಜನೆಗಳು ಏನಿವೆ ಆ ಯೋಜನೆಗಳ ಪ್ರಕಾರ, ಪ್ರತಿಯೊಂದು ಬಾಬಿನಲ್ಲೂ ಟಾರ್ಗೆಟ್ ಮುಟ್ಟುತ್ತಾ ಇದ್ದೇವೆಯೇ, ಇಂಡಸ್ಟ್ರಿಯಲ್, ಅಗ್ರಿಕಲ್ಚರ್, ಸೋಷಿಯಲ್ ಮೆಷರ್ಸ್‌ಗೆ ಹಣ ಖರ್ಚು ಮಾಡತಕ್ಕಂಥಾದ್ದು, ರೂರಲ್ ಡೆವಲಪ್‌ಮೆಂಟ್ ಇದರಲ್ಲೆಲ್ಲಾ ಆಗಿಂದಾಗ್ಯೆ ನಾವು ಮುಖಕ್ಕೆ ಕನ್ನಡಿ ಹಿಡಿದುಕೊಂಡ ಹಾಗೆ ನೋಡಬೇಕಾಗುತ್ತದೆ.

ನಾವು ಎಲ್ಲಿ ಎಡವುತ್ತಿದ್ದೇವೆ, ಎಲ್ಲಿ ಪ್ರಗತಿಯನ್ನು ಹೆಚ್ಚು ಹೊಂದುತ್ತಿದ್ದೇವೆ ಎನ್ನುವ ಎಲ್ಲಾ ವಿಷಯಗಳನ್ನು ನಮ್ಮ ಪ್ಲಾನಿಂಗ್ ಡಿಪಾರ್ಟ್‌ಮೆಂಟಿನ ಮುಖಾಂತರ ನೋಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಇದರಲ್ಲಿಯೂ ಸಹ ಅಂಕಿ ಅಂಶಗಳನ್ನು ಸಂಗ್ರಹ ಮಾಡುವುದಕೋಸ್ಕರ ಬ್ಯೂರೋ ಆಫ್ ಎಕನಾಮಿಕ್ಸ್ ಮತ್ತು ಸ್ಟಾಟಿಸ್ಟಿಕ್ಸ್ ಅನ್ನೂ ಕೂಡ ಪ್ಲಾನಿಂಗ್ ಡಿಪಾರ್ಟ್‌ಮೆಂಟಿಗೆ ಸೇರಿಸಿ ಒಂದು ರೀತಿಯಲ್ಲಿ ನಮ್ಮ ಎಲ್ಲಾ ಕೆಲಸಕಾರ್ಯಗಳ ಬಗ್ಗೆಯೂ ಆಗಿಂದಾಗೆ

ಮಾಹಿತಿಯನ್ನು ದೊರಕಿಸತಕ್ಕಂಥ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ಈ ಒಂದು ಆಧಾರದ ಮೇಲೆ ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ನಮ್ಮ ಮುಂದಿನ ಹೆಜ್ಜೆ ಯಾವ ರೀತಿ ಯಾಗಿರಬೇಕು, ನಮ್ಮ ಪ್ಲಾನಿಂಗ್ ಯಾವ ರೀತಿಯಾಗಿರಬೇಕು ಎನ್ನುವುದಕ್ಕೆ ಒಂದು ಡಿಪಾರ್ಟ್‌ಮೆಂಟ್ ಅಗತ್ಯ ಎಂದು ತಿಳಿದು ಈ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಇರಲೇಬೇಕು ಎನ್ನುವ ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಈ ಒಂದು ದೃಷ್ಟಿಯಿಂದ ನಾವು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಪ್ಲಾನಿಂಗ್ ಸೆಲ್‌ಗಳನ್ನು ಕೂಡ ಮಾಡಿದ್ದೇವೆ. ಡಿಸ್ಟ್ರಿಕ್ಟ್‌ನಲ್ಲಿ ಡಿಸ್ಟ್ರಿಕ್ಟ್ ಪ್ಲಾನಿಂಗ್ ಆಫೀಸರ್ ಎಂದು ಮಾಡಿ ಅವರಿಗೆ ಸಹಾಯಕ ಅಧಿಕಾರಿಗಳನ್ನು ಕೊಟ್ಟು ಅದನ್ನೂ ಕೂಡ ಬಲಪಡಿಸುವುದಕ್ಕೆ ಪ್ರಾರಂಭಮಾಡಿದ್ದೇವೆ. ಇದನ್ನು ಟೆಕ್ನಿಕಲ್ ಗ್ರಾಸ್ ರೂಟ್‌ಪ್ಲಾನಿಂಗ್ ಎಂದು ಹೇಳುತ್ತಾರೆ. ಇದರಲ್ಲಿ ನಾವು ಗಮನಿಸಬೇಕಾದ್ದನ್ನು ತಾವೆಲ್ಲರೂ ಮೆಚ್ಚುತ್ತೀರಿ ಎಂದು ನನ್ನ ಭಾವನೆ. ಪ್ರಥಮವಾಗಿ, ಗ್ರಾಸ್ ರೂಟ್ ಪ್ಲಾನಿಂಗ್ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಕೆಲಸ ಮಾಡುವುದಕ್ಕೆ ಸೆಟ್ ಅಪ್ ಮಾಡಿದ್ದು ನಮ್ಮ ರಾಜ್ಯದಲ್ಲಿಯೆ ಇದನ್ನೇ ನಮ್ಮ ಪಾರ್ಲಿಮೆಂಟ್ ಎಸ್ಟಿಮೇಟ್ ಕಮಿಟಿ ಯವರು ಅವಲೋಕನ ಮಾಡಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, "It is only in Karnataka State that integrated district plans for all the districts have been prepared". ಎಂದು. ಇದನ್ನು ಅವರ ರಿಪೋರ್ಟಿನಲ್ಲಿ ಹೇಳಿ ಇದರ ಬಗ್ಗೆ ತಮ್ಮ ಮೆಚ್ಚುಗೆಯನ್ನು ಕೂಡ ವ್ಯಕ್ತಮಾಡಿದ್ದಾರೆ ಮುಂದೆ ನಮ್ಮ ಪಂಚವಾರ್ಷಿಕ ಯೋಜನೆಗಳು ಏನು ಇವೆ, ಅದರಲ್ಲಿ ಮುಖ್ಯವಾದದ್ದು ಎಂದರೆ, ನಾವು ಇಂಥ ಒಂದು ಯೋಜನೆಯನ್ನು ನಾವು ಜಾರಿಗೆ ತರುತ್ತಿದ್ದೇವೆ ಎನ್ನುವುದು. ಇದರ ಬಗ್ಗೆ ಕೆಲವು ಮಾಹಿತಿಗಳನ್ನು ತಮಗೆ ದೊರಕಿಸಿರತಕ್ಕ ಪುಸ್ತಕಗಳಲ್ಲಿ ಒದಗಿಸಿ ಕೊಟ್ಟಿದ್ದೇವೆ. ಅದರ ಪ್ರಕಾರ ನಮ್ಮ ಫಿಸಿಕಲ್ ಅಚೀವ್‌ಮೆಂಟ್ಸ್‌ಅನ್ನು ಟಾರ್ಗೆಟ್ಸ್‌ನ ಜೊತೆಗೆ ಕಂಪೇರ್ ಮಾಡಲಾಗಿದೆ. You know, in the first plan, and in every plan period, certain targets are fixed and we expect to achieve those targets ; even in resources also we allocate the resources and the total amount to be utilised etc., ಇದನ್ನೆಲ್ಲಾ ನಾವು ಮಾಡಿಕೊಂಡಿರುತ್ತೇವೆ. ಈಗ ಐದನೆಯ ಪಂಚವಾರ್ಷಿಕ ಯೋಜನೆಯ ಮೂರನೆಯ ವರ್ಷದಲ್ಲಿ ನಾವು ಇದ್ದೇವೆ. ಇದರಲ್ಲಿ ಅಗ್ರಿಕಲ್ಚರ್ ಪ್ರೊಡಕ್ಷನ್‌ಗೆ ನಾವು ಏನು ಟಾರ್ಗೆಟ್ ಕೊಟ್ಟಿದ್ದೇವೆಂದರೆ, ನಾವು ಈ ಯೋಜನಾವಧಿಯಲ್ಲಿ ಸುಮಾರು 75 ಲಕ್ಷ ಟನ್ ಆಹಾರ ಧಾನ್ಯವನ್ನು ಪ್ರಡ್ಯೂಸ್ ಮಾಡಬೇಕೆಂದು. ಇವತ್ತು ನಾವು 70 ಲಕ್ಷ ಟನ್ ಆಹಾರ ಧಾನ್ಯವನ್ನು ಪ್ರೊಡ್ಯೂಸ್ ಮಾಡತಕ್ಕ ಒಂದು ಕೆಪ್ಯಾಸಿಟಿಯನ್ನು ರೀಚ್ ಆಗಿದ್ದೇವೆ. ಇನ್ನೂ ಮೂರು ವರ್ಷ ನಮ್ಮ ಮುಂದೆ ಇದೆ. 1976-77, 1977-78 ಮತ್ತು 1975-76 ಈ ವರ್ಷವನ್ನು ಸೇರಿಸಿಕೊಂಡು ನಾವು ಸುಮಾರು 75-80 ಲಕ್ಷ ಟನ್‌ಆಹಾರ ಧಾನ್ಯವನ್ನು ಪ್ರಡ್ಯೂಸ್ ಮಾಡಿದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ತಮಗೆ ಯಾವ ರೀತಿ ವರ್ಷದಿಂದ ವರ್ಷಕ್ಕೆ ಪ್ರೊಗ್ರೆಸ್ ಇದೆ ಎನ್ನುವುದಕ್ಕೆ ಅಂಕಿಅಂಶಗಳನ್ನು ತಮ್ಮ ಅವಗಾಹನೆಗೆ ತಂದರೆ ಇದನ್ನು ಒಪ್ಪುತ್ತೀರಿ ಎಂದು ನನ್ನ ಭಾವನೆ.

1969-70ರಲ್ಲಿ ನಮ್ಮ ಪ್ರೊಡಕ್ಷನ್ 56.38 ಟನ್.
1970-71 ನಮ್ಮ ಪ್ರೊಡಕ್ಷನ್ 57.66 ಟನ್.
1971-72ರಲ್ಲಿ ಪ್ರೊಡಕ್ಷನ್ 60.16 ಟನ್
1972-73ರಲ್ಲಿ ಇದು ಡ್ರೌಟ್ ಪಿರಿಯಡ್ 49.17 ಲಕ್ಷ ಟನ್
1973-74ರಲ್ಲಿ 61.51 ಲಕ್ಷ ಟನ್‌ಗೆ ಏರಿತ್ತು, ಮತ್ತು
1974-75ರಲ್ಲಿ 62.54 ಲಕ್ಷ ಟನ್ ಮತ್ತೆ
1975-76ರಲ್ಲಿ ಇದು 70 ಲಕ್ಷ ಟನ್‌ಗೆ ಏರಿದೆ.

In a way, If I say, it is a record achivement I will not be commi-tting any mistake of exaggerating things ಈಗ ಷುಗರ್‌ಕೇನ್ ತೆಗೆದುಕೊಂಡರೆ, ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಾವು 112 ಲಕ್ಷ ಟನ್ ಪ್ರೊಡ್ಯೂಸ್ ಮಾಡಬೇಕೆಂದು ಟಾರ್ಗೆಟ್ ಅನ್ನು ಫಿಕ್ಸ್ ಮಾಡಿದ್ದೆವು, ನಾವು ಈಗಾಗಲೇ 101 ಲಕ್ಷ ಟನ್ ಅನ್ನು ರೀಚ್ ಆಗಿದ್ದೇವೆ. ಅದೇ ರೀತಿಯಲ್ಲಿ ಆಯಿಲ್‌ಸೀಡ್ಸ್,-ಇದಕ್ಕೆ ನಾವು ಟಾರ್ಗೆಟ್ ಫಿಕ್ಸ್ ಮಾಡಿದ್ದು

11 ಲಕ್ಷ ಟನ್, ನಾವು ಈಗ ಪ್ರಡ್ಯೂಸ್ ಮಾಡಿರುವುದು 10 ಲಕ್ಷ ಟನ್. ಆದರೆ ಹತ್ತಿಯನ್ನು ಬೆಳೆದಂಥ ಜನರಿಗೆ ಈ ದಿಕ್ಕಿನಲ್ಲಿ ತೊಂದರೆಯಾಗಿದೆ. ಇದರಲ್ಲಿ ನಾವು ಟಾರ್ಗೆಟ್ ರೀಚ್ ಆಗಿರುವುದೇ ತಪ್ಪಾಗಿದೆ. ನಾವು 9 ಲಕ್ಷ ಬೇಲ್ಸ್ ಪ್ರೊಡ್ಯೂಸ್ ಮಾಡಿದ್ದೇವೆ. ಇದರ ಬೆಲೆಯು ಇಳಿಯದೇ ಹೋಗಿದ್ದರೆ 12 ಲಕ್ಷ ಬೇಲ್ಸ್ ಮೇಲೆ ಹೋಗುತ್ತಿದ್ದೆವು. ಎಲ್ಲಾ ಕಾಲದಲ್ಲಿಯೂ ಬೆಲೆಯು ಏರಿಳಿತ ಇದ್ದೇ ಇರುತ್ತದೆ.

ಕೋಣಂದೂರು ಲಿಂಗಪ್ಪ.—ಬಟ್ಟೆಯ ಬೆಲೆಯು ಮಾತ್ರ ಇಳಿದಿಲ್ಲ, ಕಾರಣ ಏನು.

ಶ್ರೀ ಡಿ. ದೇವರಾಜ ಅರಸ್.—ನಿಮಗೆ ಬದುಕುವ ಆಸೆ ಇಲ್ಲವೇ ?

ಶ್ರೀ ಕೋಣಂದೂರು ಲಿಂಗಪ್ಪ.—ರೈತರಿಗೆ ಬದುಕುವ ಸ್ಥಿತಿಯನ್ನು ದಯವಿಟ್ಟು ನಿರ್ಮಾಣ ಮಾಡಿಕೊಡಿ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮನ್ನು ನೋಡಿದವರು ಯಾರೂ ಬೇಗ ಸಾಯುತ್ತೀರೆಂದು ಹೇಳುವುದಕ್ಕಾಗುವುದಿಲ್ಲ. ರೈತರು ಒಬ್ಬರು ಅಲ್ಲ; ನೀವೂ ಬದುಕುತ್ತೇವೆಂದು ಒಪ್ಪಿಕೊಳ್ಳಿ. ಮತ್ತೆ ನಾವು ಯಾವ ಕ್ಷೇತ್ರದಲ್ಲಿ ತೆಗೆದುಕೊಂಡರೂ ಪ್ರಗತಿ ಪಥದಲ್ಲಿದ್ದೇವೆ. ಎಲ್ಲಾ ಬಾಬುಗಳಲ್ಲಿಯೂ ಪ್ರಗತಿ ಸಾಧನೆ ಮಾಡುತ್ತಿದ್ದೇವೆ. ಅಗ್ರಿಕಲ್ಚರ್ ಆಗಲೀ, ಇರಿಗೇಷನ್ ಆಗಲೀ, ಮತ್ತೆ ಇಂಡಸ್ಟ್ರೀಸ್ ಆಗಲೀ ಎಲ್ಲಾ ಪ್ರೊಡಕ್ಷನ್ ವಿಷಯದಲ್ಲಿಯೂ ಪ್ರಗತಿಯನ್ನು ಸಾಧಿಸುತ್ತಿದ್ದೇವೆ. ನಮ್ಮ ಟೋಟಲ್ ಇನ್‌ಕಂ ಪರ್ ಕ್ಯಾಪಿಟ ಇನ್‌ಕಂ ಏನು, ಎಕ್ಸ್‌ಪೆಂಡೀಚರ್ ಏನು ಎನ್ನುವುದು ಇದೆಲ್ಲವನ್ನು ಕಂಪೇರ್ ಮಾಡಿಕೊಂಡಾಗ ನಮ್ಮ ಪ್ರಗತಿ ಸಾಧನೆ ಎದ್ದು ಕಾಣುತ್ತದೆ. ಇದಕ್ಕೂ ಮೊದಲನೆಯದಾಗಿ ನಾನು ಒಂದು ಪೀಠಿಕೆಯ ಮಾತನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇಷ್ಟೆಲ್ಲಾ ಹೇಳುವಾಗ ನಮ್ಮಲ್ಲಿರುವ ಲೋಪದೋಷಗಳನ್ನು ಮುಚ್ಚಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ ಎಂದು ಯಾರೂ ತಿಳಿಯಬಾರದು. ತಾವು ನಮ್ಮ ಅಚೀವ್‌ಮೆಂಟ್ಸ್ ಬಗ್ಗೆಯೂ ಸ್ವಲ್ಪ ಆಲೋಚನೆ ಮಾಡಬೇಕು. ಯಾವ ವ್ಯಕ್ತಿಯೇ ಆಗಲೀ ದೇಶದ ದೃಷ್ಟಿಯಿಂದಾಗಲೀ, ಸಂಸಾರದಲ್ಲಿ ಆಗಲೀ ತಾನು ಏನು ಸಾಧನೆ ಮಾಡಿದ್ದೇನೆ ಎನ್ನುವುದರ ಬಗ್ಗೆ ಅರಿವು ಇಲ್ಲದೆ ಹೋದರೆ ಮುಂದಿನ ಪ್ರಗತಿಯನ್ನು ಸಾಧನೆ ಮಾಡುವುದಕ್ಕೆ ಸಾಧನೆ ಬರುವುದಿಲ್ಲ. ಏನು ಮಾಡಿದರೂ ಏನೂ ಆಗಿಲ್ಲ ಎನ್ನುವ ಡಿಫೀಟಿಸ್ಟ್ ಮೆಂಟ್ಯಾಲಿಟಿ, ಡಿಫೀಟಿಸ್ಟ್ ಮನೋಭಾವ ಬರಬಾರದು. ಇವತ್ತು ನಾನು ಕರ್ನಾಟಕ ರಾಜ್ಯದ ಮೂರು ಕೋಟಿಯ ಜನಕ್ಕೆ ಸಂಬಂಧಪಟ್ಟ ವಿಚಾರವನ್ನು ಮಾತನಾಡುತ್ತಿದ್ದೇನೆ ಎನ್ನುವುದನ್ನು ಮಾನ್ಯಸಭೆಯವರು ಮನಗಾಣಬೇಕು. ಈ ಜನತೆಗೆ ಇಲ್ಲಿ ಏನು ಆಗಿದೆ ಎಂಬುದು ನಾವು ಈ ಸಭೆಯಲ್ಲಿ ಮಾತನಾಡುವುದರಿಂದ ತಿಳಿಯುತ್ತದೆ.

5-30 P. M.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಪೇಪರ್ ಸೆನ್ಸಾರ್ ಇದೆ.

ಶ್ರೀ ಡಿ. ದೇವರಾಜ ಅರಸ್.—ಇಲ್ಲಿ ಕೂಗಾಡುವುದನ್ನು ಪೇಪರ್‌ನವರು ಸೆನ್ಸಾರ್ ಮಾಡುತ್ತಾರೆ. ನೀವು ಕವನ ಬರೆಯುವವರು, ನಿಮಗೇನು ಗೊತ್ತು? ನಿಮಗೆ ಅಚೀವ್‌ಮೆಂಟ್ಸ್ ಅಂದರೆ ಗೊತ್ತಿಲ್ಲ, ಫಿಗರ್ಸ್ ಅಂದರೆ ಗೊತ್ತಿಲ್ಲ. ನಿಮಗೆ ಕವನ ಬರೆಯುವುದು ಮಾತ್ರ ಗೊತ್ತಿದೆ. ಅದೂ ಈಗ ಛಂದಬದ್ಧವಾಗಿ ಕವನ ಬರೆಯುವ ಕಾಲ ಹೋಯಿತು. ಕವನ ಬರೆಯುವಾಗ ಅದರ ಒರೆಕೋರೆಗಳನ್ನು ತಿದ್ದಿ ಬರೆಯುವುದು ಈಗಿನ ಕವಿಗಳಿಗೆ ಇಲ್ಲ. ನೀವು ಕವನ ಬರೆಯುವವರಾದ್ದರಿಂದ ನಿಮಗೆ ಇದೆಲ್ಲಾ ಬೇಕಾಗಿಲ್ಲ. ಭಾಷಣದಲ್ಲಿ ಫಿಗರ್ಸ್ ವಗೈರೆ ಬಂದರೆ ಮಾತನಾಡುವುದಕ್ಕೆ ನಿಮಗೆ ಅಭ್ಯಾಸವಿಲ್ಲ. ಆದುದರಿಂದ ಇದನ್ನು ಓದಿ ಎಂದು ಹೇಳುತ್ತೇನೆ. ರಾಜಕೀಯದಲ್ಲಿರುವ ಜನರು ಎಕನಾಮಿಕ್ ಇಷ್ಯೂಸ್ ಏನು ಎಂಬುವುದನ್ನು ತಿಳಿದುಕೊಳ್ಳಬೇಕು. ಬ್ರಿಟೀಷರ ಕಾಲದಲ್ಲಿ ಮಾತನಾಡುತ್ತಿದ್ದಂತೆ ಈಗ ಮಾತನಾಡುವ ಕಾಲ ಹೋಗಿದೆ. ಅವರ ಆಡಳಿತ ಇದ್ದಾಗ ನಾವು ರಾಜ್ಯವನ್ನು ತೆಗೆದುಕೊಳ್ಳಬೇಕೆಂದು ಏನೇನೋ ಮಾತನಾಡುತ್ತಿದ್ದೆವು. ಆಗ ನಾವು ಮಾತನಾಡುತ್ತಾ ಇದ್ದುದಕ್ಕೆ ಸಬ್ಜೆಕ್ಟ್ ಇರಲಿಲ್ಲ, ಪ್ರೆಡಿಕೇಟ್ ಮೊದಲೇ ಇರಲಿಲ್ಲ. ನಾವು ಏನೂ ಬೇಕಾದರೂ ಮಾತನಾಡಬಹುದಾಗಿತ್ತು. ಕಂದಾಯ ಕೊಡಬೇಡಿ, ರಸ್ತೆ ಕಿತ್ತು

ಹಾಕಿ, ದೀಪ ಒಡೆದು ಹಾಕಿ ಎಂದು ಏನು ಹೇಳಿದರೂ ಜನರು ಅದಕ್ಕೆಲ್ಲಾ ಚಪ್ಪಾಳೆ ತಟ್ಟುತ್ತಿದ್ದರು. ಆದರೆ ಈಗ ನಮ್ಮದೇ ರಾಜ್ಯವಾಗಿರುವುದರಿಂದ ಇದನ್ನು ನಾವು ಯಾವರೀತಿ ಅಭಿವೃದ್ಧಿ ಮಾಡಬೇಕೆಂದು ಯೋಚನೆ ಮಾಡಬೇಕಾಗಿದೆ. ಹಿಂದಿನ ರೀತಿಯಲ್ಲಿ ಈಗ ನಾವು ಮಾಡುವಂತಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ —ಸ್ವಾಮಿ, ನಿಮ್ಮ ಕಥೆ ಎಲ್ಲಿಗೆ ಬಂದಿದೆ. ಸಂಜಯಗಾಂಧಿ ಅಲ್ಲಿಂದ ಬಂದು ನಿಮಗೆ ಬುದ್ಧಿ ಹೇಳುವಂತಾಯಿತು. ಅಂದರೆ ಅಜ್ಜನಿಗೆ ಮೊಮ್ಮಗ ಬುದ್ಧಿಯನ್ನು ಹೇಳುವಂತಾಯಿತು.

ಶ್ರೀ ಡಿ. ದೇವರಾಜ ಅರಸ್.—ಒಂದೊಂದು ಸಂದರ್ಭದಲ್ಲಿ ಮೊಮ್ಮಕ್ಕಳಿಂದಲೂ ಕಲಿತುಕೊಳ್ಳಬೇಕಾಗುತ್ತದೆ. ನಿಮಗೂ ಮೊಮ್ಮಕ್ಕಳಿದ್ದರೆ ಗೊತ್ತಾಗುತ್ತದೆ. ಇವತ್ತು ದೇಶದ ಅಭಿವೃದ್ಧಿಗೆ ನಾವು ಸಾಧನೆ ಮಾಡಬೇಕಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸಾಧನೆ ಮಾಡತಕ್ಕ ನಿಮಗೆ ನಿಮ್ಮವರೇ ಒಂದು ಕಮ್ಮಿ ನೂರು ಅಪಾದನೆಗಳನ್ನು ಮಾಡಿದ್ದಾರೆ. ಅದಕ್ಕೆ ಏನು ಹೇಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ಯಾರು ಅಪಾದನೆಗಳನ್ನು ಮಾಡಿದ್ದಾರೆ ಅವರಿಗೆ ಈಗಾಗಲೇ ಬುದ್ಧಿ ಹೇಳಿದ್ದೂ ಆಗಿದೆ ; ಹೇಳಿಸಿದ್ದೂ ಆಗಿದೆ. ಈಗ 4 ವರ್ಷಗಳಲ್ಲಿ ನಾವು ಏನು ಸಾಧನೆ ಮಾಡಿದ್ದೇವೆ ಎಂಬುದನ್ನು ಸ್ಟ್ಯಾಟಿಸ್ಟಿಕಲ್ ಫಿಗರ್ಸ್ ತೆಗೆದುಕೊಂಡು ಕಂಪೇರ್ ಮಾಡಿ ನೋಡಿದರೆ, An average of 6% growth rate has been developed, both in agricultural and industrial field ಬೇರೆ ರಾಜ್ಯಗಳಿಗೆ ಕಂಪೇರ್ ಮಾಡಿ ನೋಡಿದ್ದೇವೆ. ಪಂಜಾಬ್, ಹರಿಯಾಣ, ಕರ್ನಾಟಕ ಈ ಮೂರು ರಾಜ್ಯಗಳನ್ನು ಬಿಟ್ಟರೆ ಬಾಕಿಯವು ಬಿಲೋ 5 ಪರ್ಸೆಂಟ್. ಈ ಸ್ಟ್ಯಾಟಿಸ್ಟಿಕ್ಸ್ ತೆಗೆದುಕೊಂಡು ನೋಡಿದರೆ ನಾವು ಯಾವರೀತಿ ಮುಂದುವರೆದಿದ್ದೇವೆ ಎಂಬುದು ಗೊತ್ತಾಗುತ್ತದೆ. Incidentally I would like to just refer to the main stream wherein one Sri K. N. Raj has given an article. I think you may be knowing, but many others may not know. That is an indication to show what is the growth rate and how much we have progressed in these 4 years ಮತ್ತೆ ರಿಸೋರ್ಸ್ ಮೊಬಿಲೈಸೇಷನ್, ನಾವು ಯಾವುದೇ ಕೆಲಸವನ್ನು ತೆಗೆದುಕೊಳ್ಳಲಿ ಅದು ಬೇಗ ಆಗಬೇಕು ಅದಕ್ಕಾಗಿ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಹೇಳುತ್ತೇನೆ. ಆದರ ಬಗ್ಗೆ ನನ್ನ ವಿರೋಧ ಇಲ್ಲ. ನಮಗೂ ಇದರ ಬಗ್ಗೆ ಆಸಕ್ತಿ ಇದೆ ಆದರೆ ಒಂದು ಮಾತು ಹೇಳುತ್ತೇನೆ. ಏನೆಂದರೆ ಎಣ್ಣೆ ಇಲ್ಲದಿದ್ದರೆ ದೀಪ ಯಾವ ರೀತಿ ಉರಿಯುವುದಿಲ್ಲವೋ ಅದೇ ರೀತಿ ಹಣ ಇಲ್ಲದೆ ನಾವು ಯಾವ ಕೆಲಸಗಳನ್ನೂ ಮಾಡುವುದಕ್ಕಾಗುವುದಿಲ್ಲ. ಈಗಿನ ನಮ್ಮ ಪ್ರಯತ್ನ ಬಹಳ ದೊಡ್ಡ ಪ್ರಮಾಣದ್ದು ಇದೆ ಇದರಲ್ಲಿ ನಾವು ಈಗ ವಿಫಲರಾಗುತ್ತೇವೆಯೇ ಅಥವಾ ಮುಂದೆ ಹೋಗುತ್ತೇವೆಯೇ ? ಎಂಬುದನ್ನು ನೋಡೋಣ. ಈಗ ನಮ್ಮ ಪರ್‌ಕ್ಯಾಪಿಟಾ ಇನ್‌ಕಂ ಎಷ್ಟಿದೆ ಎಂದು ನೋಡಿದರೆ ಸುಮಾರು 781 ರೂಪಾಯಿಗೆ ಬಂದಿದೆ. ನಮ್ಮ ಒಟ್ಟು ವರಮಾನವನ್ನು ತೆಗೆದುಕೊಂಡು ಪ್ರಜಾಸಂಖ್ಯೆಯ ತಳಹದಿಯ ಮೇಲೆ ಇದನ್ನು ಹಂಚಿಕೆ ಮಾಡಲಾಗಿದೆ ಅದೇ ರೀತಿಯಲ್ಲಿ ಟ್ಯಾಕ್ಸೇಷನ್ ಯಾವರೀತಿ ಮಾಡಿದ್ದೇವೆ ಎಂದರೆ ಕರ್ನಾಟಕದಲ್ಲಿ per capita tax is Rs. 65/-.percentage ratio of per capita revenue to per capita income. This is the known method of measuring the efforts made to mobilise resources through tax and other sources. ಇದರಲ್ಲಿ ಎಷ್ಟು ಬರುತ್ತದೆ ಎಂದರೆ ಕರ್ನಾಟಕದ್ದು ರೇಷಿಯೋ 12.11 If per capita income is 784/-the per capita tax will be Rs. 65/- i. e., 12.11. is the percentage ratio. ನಮ್ಮ ಇಡೀ ಇಂಡಿಯಾ ದೇಶದಲ್ಲ ಯಾವುದೇ ಒಂದು ರಾಜ್ಯವನ್ನು ಉದಾಹರಣೆಗೆ ತೆಗೆದುಕೊಂಡರೂ ಕೂಡ ನಮ್ಮಷ್ಟು ಯಾರೂ ಮಾಡಿಲ್ಲ. ಉದಾಹರಣೆಗೆ ಹೇಳುವುದಾದರೆ ಆಂಧ್ರ 9.31, ಹರಿಯಾಣ 11.17, ಮಹಾರಾಷ್ಟ್ರ 11.46 ಪಂಜಾಬು 11.37, ಇನ್ನು ಬಾಕಿಯವೆಲ್ಲಾ 7.8 ಈ ರೀತಿ ಇವೆ.

SRI S. BANGARAPPA.—That means they have taxed less.

SRI. D. DEVARAJ URS.—One or two per cent less than us. We have crossed that, ours is the highest in India.

SRI. M. S KRISHNAN.—Then, are we not coming to almost a saturation point in regard to taxation? Does it not cause concern or should it not cause concern when compared to other States?

ಶ್ರೀ ಡಿ. ದೇವರಾಜ ಅರಸ್.—ಈಗ ನಮ್ಮ ಇನ್‌ಕಂ ಪರ್ ಕ್ಯಾಪಿಟಾ ತೆಗೆದುಕೊಂಡಾಗ ಅದು ಯಾವ ಮಟ್ಟದಲ್ಲಿದೆ ಎಂಬುದನ್ನು ಹೇಳಬಹುದು. ನಮ್ಮ ಪರ್ ಕ್ಯಾಪಿಟಾ ಟ್ಯಾಕ್ಸ್ ರೇಷಿಯೋ ಬೇರೆಯವರಿಗಿಂತ ಜಾಸ್ತಿ ಭಾರ ಆಗಲಿಲ್ಲವೆ ಎಂದು ಕೇಳಬಹುದು. ಇದು ಬೇರೆಯವರಿಗಿಂತ ಜಾಸ್ತಿ ಭಾರವಾಗಿದೆ ಎಂದು ನನಗೆ ಭಾಸವಾಗುತ್ತದೆ, ನಿಜ. ಒಪ್ಪಿಕೊಳ್ಳುತ್ತೇನೆ. ಆದರೆ ನಮ್ಮ ಪ್ಲಾನ್ ಔಟ್‌ಲೇ ಇದೆ ಟ್ಯಾಕ್ಸ್ ತೆಗೆದುಕೊಳ್ಳುತ್ತೇವೆ. ಮತ್ತು ಅದೇ ರೀತಿ ಖರ್ಚು ಮಾಡಬೇಕಾಗಿದೆ. ಇದನ್ನೆಲ್ಲಾ ದೇಶದ ಅಭಿವೃದ್ಧಿ ಕಾರ್ಯಗಳಿಗೆ ಖರ್ಚುಮಾಡಬೇಕಾಗಿದೆ. ಇದನ್ನು ಖರ್ಚುಮಾಡುವ ವಿಷಯದಲ್ಲಿ ನಾವು ಯಾವ ಸ್ಟೇಜ್‌ನಲ್ಲಿದ್ದೇವೆ ಎಂದರೆ, ನಾವು 3ನೇ ಸ್ಥಾನದಲ್ಲಿದ್ದೇವೆ. ಅಂದರೆ ನಮಗಿಂತ ಸ್ವಲ್ಪ ಹೆಚ್ಚಿಗೆ ಪರ್‌ಕ್ಯಾಪಿಟಾ ಔಟ್‌ಲೇ ಪ್ಲಾನ್ ಪ್ರೋಗ್ರಾಮ್ಸ್‌ನಲ್ಲಿ ಯಾರು ಇದ್ದಾರೆಂದರೆ ಪಂಜಾಬ್, ಜಮ್ಮು ಮತ್ತು ಕಾಶ್ಮೀರ್ ಇವೆ. ಇವೆರಡನ್ನು ಬಿಟ್ಟರೆ ನಮ್ಮದು 70 ಇದೆ. 115 ಜಮ್ಮು ಮತ್ತು ಕಾಶ್ಮೀರದ್ದು ಇದೆ, ಪಂಜಾಬಿನಲ್ಲಿ 146 ಇದೆ, ಗುಜರಾತಿನಲ್ಲಿ 64 ಇದೆ I do not know anything about Hariyana. If Hariyana is more than our State, we will be 4th, otherwise we will be 3rd ನೀವು ಕೇಳಬಹುದು ಇಷ್ಟೊಂದು ಟ್ಯಾಕ್ಸ್ ಜಾಸ್ತಿ ಮಾಡಿದ್ದೀರಿ. ಪರ್ಸೆಂಟೇಜ್ ಲೆಕ್ಕ ಹಾಕಿಕೊಂಡರೂ ಪರ್‌ಕ್ಯಾಪಿಟಾ ಡೆವಲಪ್‌ಮೆಂಟ್ ಕಡಿಮೆ ಆಗುತ್ತಿದೆಯಲ್ಲವೆ ಎಂದು. ನಾವು ಕಂಪೇರ್ ಮಾಡಿದಾಗ ಅವರ ರಿಸೋರ್ಸಸ್ ಪಂಜಾಬ್ ಹರಿಯಾಣಾದು ಕಳೆದು ಇರಿಗೇಷನ್ 80 ಪರ್ಸೆಂಟ್ ಮೇಲೆ ಇದೆ. ಯಾವ ದೃಷ್ಟಿಯಿಂದಲೇ ತೆಗೆದುಕೊಳ್ಳಿ, ಇರಿಗೇಷನ್ ತೆಗೆದುಕೊಳ್ಳಿ, ಸ್ಮಾಲ್ ಇಂಡಸ್ಟ್ರೀಸ್ ತೆಗೆದುಕೊಳ್ಳಿ, ಮೀಡಿಯಂ ಇಂಡಸ್ಟ್ರೀಸ್ ಆಗಲಿ ಎಲ್ಲಿ ಬಹಳ ಡೆವಲಪ್ ಆಗುತ್ತದೆ ಅಲ್ಲಿ ಆದರಿಂದ ಹೆಚ್ಚಿನ ಹಣವೂ ಸಹ ಬರುತ್ತದೆ. ನಮಗೆ ಅವರ ರೀತಿಯಲ್ಲಿ ರಿಸೋರ್ಸ್‌ನ್ನು ಕಂಪೇರ್ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಮಾಡಿರತಕ್ಕ ಎಫರ್ಟ್ಸ್ ಶ್ಲಾಘನೀಯವಾದುದೆಂದು ತಮ್ಮ ಗಮನಕ್ಕೆ ತರುತ್ತೇನೆ. Plan to plan, year to year—what is the type of expenditure that is going to be? In 1974-75 ಫಸ್ಟ್ ಇಯರ್ ಆಫ್ ದಿ ಫಿಫ್ತ್ ಪ್ಲಾನ್ 131 ಕೋಟಿ 48 ಲಕ್ಷ ನಮ್ಮದು ಟೋಟಲ್ ಅನ್ಯುಯಲ್ ಪ್ಲಾನ್ ಎಕ್ಸ್‌ಪೆಂಡೀಚರ್ ಆಗಿರುತ್ತದೆ. 1975-76ರಲ್ಲಿ ಅನ್ಯುಯಲ್ ಪ್ಲಾನ್ ಔಟ್‌ಲೇ 152 ಕೋಟಿ 95 ಲಕ್ಷ ರೂಪಾಯಿಗಳು ಆದರೂ ಆಕ್ಚುಯಲ್ ಎಕ್ಸ್‌ಪೆಂಡೀಚರ್ 173.72 ಲಕ್ಷ ರೂಪಾಯಿ ಆಯಿತು. Though the outlay for the plan was agreed to for Rs. 152 crores, it went upto Rs. 173 crores 72 lakhs. Coming to the current year that is 1976-77 we have gone up to 226.25 crores. Even this is a big effort. 226 ಎಂದು ಹಾಕಿಕೊಂಡಿದ್ದೇವೆಂದು ಕಾಣಿಸುತ್ತದೆ. ಈ ವರ್ಷದ ಲೆಕ್ಕಕ್ಕೆ 226ಕ್ಕಿಂತ ಕಡಿಮೆ ಖರ್ಚಾಗುವುದಿಲ್ಲ, ಜಾಸ್ತಿಯೇ ಆಗುತ್ತದೆ, ಎಷ್ಟಾಗುತ್ತದೆ ಅದಕ್ಕಿಂತ ಹೆಚ್ಚಿಗೆ ಖರ್ಚಾದರೆ ಆಶ್ಚರ್ಯವಿಲ್ಲ. ನಾವು ಮಾಡುತ್ತಾ ಇರತಕ್ಕ ಎಫರ್ಟ್ಸ್‌ನಿಂದ ಅದರ ಪರಿಣಾಮವಾಗಿ ಈ ಒಂದು ಬಾಬಿನಲ್ಲಿಯಾದರೂ ಕೂಡ ನಮ್ಮ ಪ್ರಗತಿ ಸ್ವಲ್ಪ ಆಶಾದಾಯಕವಾಗಿ ಸಾಗುತ್ತಿದೆ ಎಂದು ಹೇಳಬಹುದು. ತಾವು ಆಲಮಟ್ಟಿ, ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗಳ ವಿಚಾರದಲ್ಲಿ ಹೇಳಿದಿರಿ. ಹಾಗೆಯೇ ನಮ್ಮ ಸ್ನೇಹಿತರು ಕೂಡ ಯಗಚಿ ಪ್ರಾಜೆಕ್ಟ್ ಬಗ್ಗೆಯೂ ಹೇಳಿದರು. ನಮಗೂ ಅದೇ ಆಶಯವಿರುತ್ತದೆ. ಇದನ್ನು ಬೇಗ ಬೇಗ ಮಾಡಬೇಕೆನ್ನುವುದು, ಇದನ್ನು ಯುಗ ಯುಗಗಳಿಗೆ ಮುಂದುವರಿಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಆ ವಿಷಯಗಳನ್ನು ಇದರಲ್ಲಿ ಗಮನಿಸಬೇಕು. ನಮಗೇನೂ ಆಶಯವಿದೆ ಬೇಗ ಬೇಗ ಮಾಡಬೇಕೆಂದು. ಆದರೆ ನಮಗೆ ಇರತಕ್ಕ ಖರ್ಚಿನಲ್ಲಿ ಅದಕ್ಕಾಗುವಷ್ಟು ದುಡ್ಡನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದೇರೀತಿಯಲ್ಲಿ ನಿಲ್ಲಿಸುವುದಕ್ಕೂ ಸಾಧ್ಯ

ವಾಗುತ್ತಿಲ್ಲ. ಮಾನ್ಯ ಸ್ನೇಹಿತರು ಮಾತನಾಡುತ್ತಾರೆ ಹೊರಟು ಹೋಗುತ್ತಾರೆ. ನಮಗೆ ಗೊತ್ತಿದೆ ಆಲಮಟ್ಟಿ ನಾರಾಯಣಪುರ ಪ್ರಾಜೆಕ್ಟ್‌ಗಳಿಗೆ 25 ಕೋಟಿ ರೂಪಾಯಿಗಳ ಖರ್ಚು ಮಾಡುವುದು ಇರುತ್ತದೆ. ಔಟ್ ಆಫ್ ದಿಸ್ 4 ಕೋಟಿ ರೂಪಾಯಿಗಳು ಆಲಮಟ್ಟಿಗೆ ಖರ್ಚು ಮಾಡುವುದು ಅನೇಕ ಮಾನ್ಯ ಸದಸ್ಯರಿಗೂ ಗೊತ್ತಿರುವ ವಿಷಯವಾಗಿದೆ ನಾರಾಯಣಪುರ ಕೆಳಗೆ ಇರುವಂಥಾದ್ದು, ಆಲಮಟ್ಟಿ ಕೃಷ್ಣಾ ನದಿಯ ಮೇಲ್ ಭಾಗದಲ್ಲಿರತಕ್ಕಂಥದ್ದು. Almatti is a more storage dam than for irrigation ಲಿಫ್ಟ್ ಇರಿಗೇಷನ್ ಏನು ಮಾಡುತ್ತೇವೆ, ಅದಕ್ಕೆ ಇನ್ನೂ ಸೌಲಭ್ಯ ಸಾಧ್ಯವಾಗಬಹುದು. ಇದರಿಂದ ಮುದ್ದೇಬಿಹಾಳ ಬಾಗೇವಾಡಿ ಕಡೆಗೆ ಹೋಗುತ್ತದೆ. ಇದರಿಂದ ಇಲ್ಲಿ ಸುಮಾರು 30 ಟಿ. ಎಂ. ಸಿ. ಎಫ್. ಟಿ ಲಿಫ್ಟ್ ಇರಿಗೇಷನ್ ಆಗುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ನಾನು ಹೇಳುವುದು ನಾರಾಯಣಪುರ ವರ್ಕ್ ತೆಗೆದುಕೊಂಡರೆ ನೀರನ್ನು ಸ್ಟೋರೇಜ್ ಮಾಡುವುದಕ್ಕೆ ತೊಂದರೆಯಾಗುತ್ತದೆಯೆಂದು ?

ಶ್ರೀ ಡಿ. ದೇವರಾಜ ಅರಸ್.—ಇಷ್ಟು ಖರ್ಚಾದರೂ ಇದನ್ನು ಪೂರೈಸಲು ಎಷ್ಟು ದಿವಸಗಳಾಗುತ್ತದೆ ಎಂದು ಹೇಳಿದರೆ, ನಮ್ಮಲ್ಲಿ ಇರತಕ್ಕದು ನಾರಾಯಣಪುರ ಅಣೆಕಟ್ಟನ್ನು ಮೊದಲು ಮುಗಿಸಬೇಕೆನ್ನುವುದು. ಮುಗಿದ ಕೂಡಲೆ ಇರಿಗೇಷನ್ ಶುರುಮಾಡಬೇಕೆನ್ನುವುದು ಇರುತ್ತದೆ. ಅದು ಮುಗಿದರೂ ಇರಿಗೇಷನ್ ಮಾಡುವುದಕ್ಕೆ ಸಾಧ್ಯವಿಲ್ಲ.

It appears they have made an estimate utilising nearly 90 T. M. Cft of water from this Almatti. ಅದಕ್ಕೆ ಎಷ್ಟು ದುಡ್ಡು ಖರ್ಚಾಗುತ್ತದೆ, ಅದಕ್ಕೆ ಚಾನಲ್ ಕಡಿಮೆ ಇದೆ ಎಂದು ಇಟ್ಟುಕೊಳ್ಳೋಣ' ನನಗೆ ಶುರು ಮಾಡುವುದು ಬೇಡ ಎಂದಲ್ಲ ಆಲಮಟ್ಟಿ ಲಿಫ್ಟ್ ಇರಿಗೇಷನ್, ನಾರಾಯಣಪುರ ಯಾವ ಆಧಾರದ ಮೇಲೆ ಮಾಡಿದ್ದೇವೆ ? Hoping that we are getting this much of water i.e., 300 T. M. Cft. or a little less. ಈವತ್ತು ಏನಾಗಿದೆ ಎಂದರೆ ಕೃಷ್ಣಾ ವಾಟರ್ ಡಿಸ್‌ಪ್ಯೂಟ್ ರಿಪೋರ್ಟ್ ಪ್ರಕಾರ ಸರ್ಟನ್ ಕ್ವಾಂಟಿಟಿ ಕೊಟ್ಟಿದ್ದೇವೆ, ಕೊಟ್ಟಿದ್ದರಿಂದ ಏನಾಗುತ್ತದೆ. ಅಪ್‌ಸೆಟ್ ಆಗುತ್ತದೆ. ಇದನ್ನೇ ನಾವು ಹೇಳುತ್ತಾ ಇರುವುದು. ಕೃಷ್ಣಾ ವಾಟರ್ ಡಿಸ್‌ಪ್ಯೂಟ್ 1975ರಿಂದ ಪರಿಶೀಲನೆ ಮಾಡಿ ಅಂತಿಮ ಜಡ್ಜ್‌ಮೆಂಟ್ ರಿಪೋರ್ಟ್ ಕೊಡುತ್ತಾರೆಂದು ಹೇಳುತ್ತಿದ್ದೇನೆ. ಅದು ಸ್ವಲ್ಪ ಆಶಾಭಾವನೆಯಿಂದ ಇದೆ. ಹಿಂದಿನದಕ್ಕಿಂತ ಸ್ವಲ್ಪ ಉತ್ತಮವಾಗಬಹುದೆಂದು. ಅದು ಅಂತಿಮವಾಗಿ ತೀರ್ಮಾನವಾದರೆ ಅದರ ಪ್ರಕಾರ ಅಡ್ಜಸ್ಟ್ ಮಾಡಬೇಕು. ಮತ್ತೆ ಒಂದು ವೇಳೆ ತರಾತುರಿಯಾಗಿ ಅದಕ್ಕೆ ದುಡ್ಡು ಕೊಡಿ ಇದಕ್ಕೂ ದುಡ್ಡು ಕೊಡಿ ಎಂದರೆ ದುಡ್ಡು ಎಲ್ಲಿದೆ ? ನೀವು ಹೇಳುತ್ತೀರಿ ಏನಾದರೂ ಪ್ರಯತ್ನ ಮಾಡಿ ಎಂದು. ನಾವು ಒಂದೆರಡು ರೀತಿಯಲ್ಲಿ ಪ್ರಯತ್ನ ಪಟ್ಟಿಲ್ಲ, ಬೇಜಾರು ಪಟ್ಟುಕೊಳ್ಳುವ ರೀತಿಯಲ್ಲಿ ಪ್ರಯತ್ನ ಮಾಡಿದ್ದೇವೆ. ಆಡದ ಮಾತನ್ನು ಆಡಿಸಿಕೊಂಡು ನಿಂದನೆಗೂ ಒಳಗಾಗಿದ್ದೇವೆ. ಆದರೂ ನಮ್ಮ ಪ್ರಯತ್ನವನ್ನು ಬಿಡಲಿಲ್ಲ. ನಮ್ಮ ಪ್ರಯತ್ನ ಈವತ್ತಿಗೂ ಸ್ವಲ್ಪ ನಿಧಾನವಾಗುತ್ತಾ ಇರಬಹುದು. ಹಣ ಸಿಗುತ್ತದೆ ಎನ್ನುವ ಭರವಸೆಯನ್ನು ಬಿಟ್ಟಿಲ್ಲ. ನಾನು ಹೇಳುವುದಾದರೆ ಕಾಳಿನದಿ ಯೋಜನೆಯನ್ನು ಶುರುಮಾಡಿದಾಗ ನಿಮಗೆ ಹೇಳುವುದಾದರೆ 1972ನೇ ಮಾರ್ಚ್‌ನಲ್ಲಿ ಅದನ್ನು ಕೈಗೆ ತೆಗೆದುಕೊಂಡೆವು. ಸಂಬಂಧಪಟ್ಟ ಫೈನಾನ್ಸ್ ಮಿನಿಸ್ಟರ್ ಜೊತೆಯಲ್ಲಿ ಮಾತನಾಡುವಾಗ, ನೀವೇನೋ ಕಾಳಿನದಿಯೋಜನೆಯನ್ನು ಶುರುಮಾಡುತ್ತೀರಿ, ದುಡ್ಡಿಲ್ಲದೆ, ನಮ್ಮಲ್ಲಿ ಭಿಕ್ಷೆ ಕೇಳುವುದಕ್ಕೆ ಬಂದಿದ್ದೀರಿ ನಾವು ಎಲ್ಲಿಂದ ಕೊಡುವುದು ಎಂದೆಲ್ಲ ಮಾತನಾಡಿದರು. ಮತ್ತೆ ಅವರು ಹೇಳಿದರು ನಮ್ಮನ್ನು ದುಡ್ಡು ಕೇಳುವುದಾದರೆ ಪ್ರಾಜೆಕ್ಟನ್ನು ನಮಗೆ ಬಿಟ್ಟುಕೊಡಿ, ಕೇಂದ್ರ ಸರ್ಕಾರಕ್ಕೆ ವಹಿಸಿ ಎಂದೆಲ್ಲ ಮಾತನಾಡಿದರು. ನಾನು ಫೈನಾನ್ಸ್ ಮಿನಿಸ್ಟರ್ ಇದರ ಬಗ್ಗೆ ಮಾತನಾಡಲು ಹೋಗಿದ್ದೆವು. ನಾವು ಯೋಚನೆ ಮಾಡಿದೆವು, ಎಷ್ಟೇ ಕಷ್ಟವಾದರೂ ಸರಿ ಎಷ್ಟೇ ದುಡ್ಡು ಖರ್ಚಾದರೂ ಸರಿ ಇದನ್ನು ಬಿಟ್ಟುಕೊಡುವುದು ಬೇಡ, ಕೊಡುವುದಿಲ್ಲವೆಂದು ಹಟಮಾಡಿದರೆ ದುಡ್ಡು ಸಿಗುತ್ತದೆ ಎನ್ನುವ ನಂಬಿಕೆಯೂ ಕೂಡ ಇರಲಿಲ್ಲ. ಮೊಂಡುತನ ಇಟ್ಟುಕೊಳ್ಳಬೇಕು ಎಂದು ಹಟಮಾಡಿಬಂದೆವು. ಅದರ ಪರಿಣಾಮ ಈವತ್ತು ನಮಗೆ ದುಡ್ಡು ಒದಗುತ್ತಿದೆ. ಹಾಗೆಯೇ ಕೃಷ್ಣಾಯೋಜನೆಗೂ ದುಡ್ಡು ಒದಗಬಹುದು. ವರ್ಲ್ಡ್ ಬ್ಯಾಂಕ್‌ನವರಿಗೆ ಪ್ರಾಜೆಕ್ಟ್ ರಿಪೋರ್ಟ್

ಕೊಟ್ಟಿದ್ದೇವೆ ಅವರು ನಮ್ಮನ್ನು ಕೇಳಿದ್ದಾರೆ. ಅವರು ಅದನ್ನು ಸ್ಟಡಿ ಮಾಡುತ್ತಿದ್ದಾರೆ. ಆದರಿಂದ ಸಹಾಯ ಅವರಿಂದ ಸಿಗಬಹುದೆಂದು ಆಶಾಬಾವನೆ ಇದೆ ಏತಕ್ಕೆ ಆಶಾಭಾವನೆ ಇದೆ ಎಂದರೆ ಅದನ್ನೂ ಕೂಡ ಹೇಳುತ್ತೇನೆ. ಹಿಂದೆ ಯಾವ ಯೋಜನೆಯಲ್ಲೂ ಸಹ ಫಸ್ಟ್, ಸೆಕೆಂಡ್, ಥರ್ಡ್, ಫೋರ್ತ್ ಪ್ಲಾನ್ ಈ 4 ಯೋಜನೆಗಳನ್ನು ತೆಗೆದುಕೊಂಡು ಕಾಂಪ್ಯಾರಿಟಿವ್ ಸ್ಟಡಿ ಮಾಡಿದ್ದರಲ್ಲಿ ಭಾರತದ ಮಟ್ಟದಲ್ಲಾಗಲೀ, ನಮ್ಮ ರಾಜ್ಯಮಟ್ಟದಲ್ಲೇ ಆಗಲೀ ಇನ್ನೂ ಯಾವ ಯೋಜನೆಯಲ್ಲೂ ಸಹ ಇರಿಗೇಷನ್, ಪವರ್‌ಗೆ ಇಷ್ಟು ಮೊದಲನೇ ಸ್ಥಾನವನ್ನು ಕೊಟ್ಟು ಅದಕ್ಕೆ ಹೆಚ್ಚು ಖರ್ಚು ಮಾಡಿದ್ದು ಇರಲಿಲ್ಲ. ಈಗ ಕೇಂದ್ರ ಸರ್ಕಾರಕ್ಕೂ, ಪ್ಲಾನಿಂಗ್ ಕಮಿಷನ್‌ಗೂ ಇದು ಅರಿವಾಗಿದೆ. ಭಾರತದ ಎಕಾನಮಿ, ಅರ್ಥನಿರ್ವಹಣೆ ಮಾಡಬೇಕಾದರೆ, ಅರ್ಥವ್ಯವಸ್ಥೆ, ಹಣಕಾಸಿನ ಪರಿಸ್ಥಿತಿ ಉತ್ತಮವಾಗಬೇಕಾದರೆ ಇದು ಫೌಂಡೇಷನ್ ಎಂದು ಎಲ್ಲರಿಗೂ ಮನವರಿಕೆಯಾಗಿದೆ. ಆ ಮನವರಿಕೆಯಾಗಿರುವುದರಿಂದಲೇ ಪ್ಲಾನ್ ಕೋರ್ ಪವರ್ ಅಂಡ್ ಇರಿಗೇಷನ್ ಎಂದು ಹೇಳುತ್ತಿದ್ದಾರೆ. ಪವರ್ ಅಂಡ್ ಇರಿಗೇಷನ್ ಎಂದು ಹೇಳಿ ಎಕಾನಮಿ ಗ್ರೋತ್‌ಗೆ ಫೌಂಡೇಷನ್ ಆದರೆ ದೇಶದ ಸ್ಥಿತಿಗತಿಯು ಉತ್ತಮವಾಗುವುದಕ್ಕೆ ಆಗಲೀ, ಬಡತನ ಹೋಗುವುದಕ್ಕೆ ಆಗಲೀ, ದೇಶದಲ್ಲಿರುವ ಪಾವರ್ಟಿಯನ್ನು ರಿಮೂವ್ ಮಾಡುವುದಕ್ಕೆ ಆಗಲೀ, ದೇಶದಲ್ಲಿ ಉತ್ಪಾದನೆಯನ್ನು ಮಾಡುವುದಕ್ಕೆ ಆಗಲೀ, ಹಳ್ಳಿಗಳಲ್ಲಿ ಇರತಕ್ಕ ಜನಗಳಿಗೆ ಎಂಪ್ಲಾಯ್‌ಮೆಂಟನ್ನು ಒದಗಿಸುವುದೇ ಆಗಲಿ ಇವೆಲ್ಲಾ ಆಗಬೇಕಾದರೆ ಎಕನಾಮಿಸ್ಟ್‌ಗೆ ಅರ್ಥವಾಗಿರುವುದು ಏನೆಂದರೆ ಒಂದು ಎಕರೆ ನೀರಾವರಿ ಮಾಡಿದರೆ 365 ದಿವಸ ಕೆಲಸ ಸಿಕ್ಕುತ್ತದೆ. ಯಾವ ಇಂಡಸ್ಟ್ರೀಸ್ ಆದರೂ ಕೂಡ ಅದು ಹೆವಿ ಇಂಡಸ್ಟ್ರೀಸ್ ಆಗಲಿ, ಬಿಗ್ ಇಂಡಸ್ಟ್ರೀಸ್ ಆಗಲಿ ಸ್ಮಾಲ್ ಇಂಡಸ್ಟ್ರೀಸ್ ಆಗಲೀ ನೀರಾವರೀ ಯೋಜನೆಗಳಿಂದ ದೊರಕುವಷ್ಟು ಎಂಪ್ಲಾಯಮೆಂಟ್ ಪೊಟೆನ್‌ಷಿಯಲ್ ಇನ್ನೂ ಯಾವುದರಿಂದಲೂ ದೊರಕುವುದಿಲ್ಲ. ಇವತ್ತು ಆಗಿರುವ ಕೆಲಸದಲ್ಲಿ ನಾನು ಹೆಮ್ಮೆ ಪಟ್ಟುಕೊಳ್ಳುತ್ತೇನೆ. ಇವತ್ತು 70 ಲಕ್ಷ ಟನ್ ಆಗಿದೆ. ಅವರು ಯಾವರೀತಿ ಆಯಿತು ಎಂದು ಕುತೂಹಲದಿಂದ ಕೇಳುತ್ತಿದ್ದರು. ದೇಶದ ಪರಿಸ್ಥಿತಿ ಇವತ್ತಿನ ದಿವಸ ಏನಾಗುತ್ತಿದೆ ಎಂಬುದು ತಮಗೆ ಗೊತ್ತಿದೆ. ಆದರೆ ನಮ್ಮ ದೇಶದಲ್ಲಿ ಇವತ್ತು ಚೆನ್ನಾಗಿ ಬೆಳೆ ಆಗಿರುವುದರಿಂದ ನಮ್ಮ ದೇಶದಲ್ಲಿ.........

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹೆಣ್ಣುಮಕ್ಕಳು ಪೋರ್ಟ್‌ಫೋಲಿಯೋ ವಹಿಸಿಕೊಂಡಿರುವುದರಿಂದ ಹೆಂಗಸರಲ್ಲಿ ನಿಯತ್ತು ಇದೆ ಎಂದು ಹೇಳುತ್ತೇನೆ.

ಶ್ರೀ ಡಿ ದೇವರಾಜ ಅರಸ್.—ಅದು ನಿಮ್ಮಲ್ಲಿ ಇಲ್ಲವೆಂದಾಯಿತು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಮ್ಮ ಪಕ್ಷದಲ್ಲಿ ಹೆಂಗಸರೇ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ನಿಮಗೆ ಹೆಂಗಸರ ಮೇಲೆ ಬಹಳ ಅಭಿಮಾನ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅದು ಸಹಜವಾಗಿ ಇರಬೇಕಾದ ಅಂಶ ಅಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಸಹಜವಾಗಿ ಇರಬೇಕಾದ ಅಂಶವನ್ನು ನಿಮಷ್ಟು ಬೇರೆ ಯಾರೂ ತಿಳಿದುಕೊಂಡಿಲ್ಲ ಎಂದು ಸಂತೋಷವಾಗಿ ನಾನು ಹೇಳುತ್ತಿದ್ದೇನೆ. ವೇಗರೀಸ್ ಆಫ್ ಮಾನ್‌ಸೂನ್‌ನಿಂದ ನಮ್ಮ ದೇಶದಲ್ಲಿ ಇದ್ದಕ್ಕಿದ್ದ ಹಾಗೆ ದೊಡ್ಡ ಬರಗಾಲ, ಇದ್ದಕ್ಕಿದ್ದ ಹಾಗೆ ಸುಭಿಕ್ಷೆ ಹೀಗೆ ಆಗುತ್ತಾ ಇದೆ. ಇನ್ನು ಹೆಚ್ಚಾದ ಭಾಗಗಳಲ್ಲಿ ಮಳೆಗಾಲವನ್ನೇ ನೆಚ್ಚಿಕೊಂಡು ಅದರಿಂದ ವ್ಯವಸಾಯವನ್ನು ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ ಬೀಳತಕ್ಕ ಮಳೆ ನೀರು, ನದಿಗಳ ನೀರು, ಭೂಮಿ ಒಳಗೆ ಇರತಕ್ಕಂಥ ನೀರು ಇವುಗಳಿಂದ 70 ಭಾಗದಷ್ಟು ಉಪಯೋಗ ಮಾಡತಕ್ಕದ್ದು ಇದೆ I do not know, I may be wrong in figures. It may be 70 or more or less. I am roughly saying So much of percentage of water is still allowed to go to the sea, ಇಷ್ಟೊಂದು ಇರಿಗೇಷನ್ ಡೆವಲಪ್‌ಮೆಂಟ್ ಆಗಬೇಕು. ನಮ್ಮ ದೇಶದಲ್ಲಿ ಇರಿಗೇಷನ್ ಪೊಟೆನ್‌ಶಿಯಲ್ ಇರುವುದನ್ನು ಡೆವಲಪ್ ಮಾಡಿದರೆ ಸಧ್ಯಕ್ಕೆ ಅನ್ನದ ಅಭಾವ ಇರುವುದಿಲ್ಲ. ಇದರಿಂದ ಬೇರೆ ಬೇರೆ ದೇಶಗಳಿಗೆ ಎಲ್ಲಾ ಪದಾರ್ಥಗಳನ್ನು ರಫ್ತು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಷುಗರ್, ಕಾಟನ್, ಗೋಧಿ, ಆಕ್ಕಿ ಇವೆಲ್ಲವನ್ನೂ ಸಹ ರಫ್ತು ಮಾಡಬಹುದು. ನಮ್ಮ ದೇಶದಲ್ಲಿ ಅಷ್ಟೊಂದು ಪೊಟೆನ್‌ಷಿಯಾಲಿಟಿ

ಇದೆ. ಅದಕ್ಕಾಗಿ ಇಷ್ಟೊಂದು ಗಮನವನ್ನು ಕೊಟ್ಟಿದ್ದೇವೆ. ಆದರೆ ನಮಗೆ ಆ ಒಂದು ಭಾವನೆ ಇರುವಂತೆ ಎಲ್ಲರಿಗೂ ಆ ಒಂದು ಭಾವನೆ ಮಾಡಿಸಿ ಎಂದು ನಾನು ಧೈರ್ಯವಾಗಿ ತಮ್ಮ ಮುಂದೆ ಹೇಳುತ್ತಿದ್ದೇನೆ ನಮ್ಮ ದೇಶದಲ್ಲಿ ನೀರಾವರಿ ಯೋಜನೆಗಳಿಗೆ ಹಣವನ್ನು ಒದಗಿಸತಕ್ಕಂಥ ಯಾವುದಾದರೂ ಒಂದು ವ್ಯವಸ್ಥೆಯನ್ನು ಕೇಂದ್ರ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ ಮತ್ತು ನಮಗೆ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಭರವಸೆ ಇರುವುದರಿಂದ ನಾನು ತಮ್ಮ ಮುಂದೆ ಈ ಮಾತನ್ನು ಹೇಳುತ್ತಿದ್ದೇನೆ. ಹಾಗಾದರೆ ಕೃಷ್ಣಾ ಯೋಜನೆಗೆ 15 ವರ್ಷ ಆಗುತ್ತದೆ. ಎಂದರೆ ನಮ್ಮ ದೇಶವನ್ನು ಡೆವಲಪ್ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಕಾವೇರಿ ಜಲಾಶಯದ ಭೂಮಿಯಲ್ಲಿ ಯೋಜನೆಗಳನ್ನು ಪ್ರಾರಂಭ ಮಾಡಿದ್ದೀರಿ. ಈ ಬೃಹತ್ ಯೋಜನೆಗಳನ್ನೂ ಈಗ ಯಾವ ಒಂದು ಪ್ರಮಾಣದಲ್ಲಿ ಮಾಡಿ ಮುಗಿಸಬೇಕೆಂದು ಸರ್ಕಾರ ಆಲೋಚನೆ ಮಾಡಿದೆಯೋ ಅಷ್ಟೇ ದೊಡ್ಡದಾಗಿ ಅವನ್ನೆಲ್ಲಾ ಮಾಡಿ ಮುಗಿಸತಕ್ಕ ಆಲೋಚನೆ ಸರ್ಕಾರಕ್ಕೆ ಇದೆಯೇ ? ಹಾಗಿದ್ದರೆ ಕಾವೇರಿ ನೀರನ್ನು ವ್ಯವಸಾಯವನ್ನೇ ನಷ್ಟ ಮಾಡಿಕೊಂಡು ಯೋಜನೆಗಳ ಕೆಲಸ ಸ್ಥಗಿತವಾದೀತು ಎಂಬ ಸಂಕಟದಿಂದ ಹೇಳುತ್ತಿದ್ದೇನೆ. ತಾವು ಸ್ಪಷ್ಟವಾಗಿ ಇದರ ವಿಚಾರ ಏನಿದೆ ಎಂಬುದನ್ನು ಹೇಳಬೇಕು.

ಶ್ರೀ ಡಿ. ದೇವರಾಜ ಅರಸ್.—ಎಲ್ಲಕ್ಕಿಂತ ಈಗ ಮಾಡಿರುವುದನ್ನು ಸ್ಟಡಿ ಮಾಡಿಕೊಳ್ಳಿ. 4 ವರ್ಷಗಳಿಂದ ನಾವು ಏನ ಮಾಡಿದ್ದೇವೆ. ಅದರಲ್ಲಿ ವ್ಯವಸಾಯದ ಅಡ್ಡಿ ಬಂದಿದೆಯೇ ? I want to know from you. I have not allowed that dispute to come in the way of our developing the project.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾನು ತಮಗೆ ಹೇಳುವುದಾದರೆ ಹೇಮಾವತಿಗೆ ಸಂಬಂಧಪಟ್ಟ ಹಾಗೆ ತುಮಕೂರು ಮತ್ತು ಮಂಡ್ಯ ಜಿಲ್ಲೆಯ ಕೆಲವು ಭಾಗಗಳಲ್ಲಿ ಕ್ಷಾಮದಿಂದ ಪೀಡಿತವಾಗಿ ಪ್ರದೇಶಗಳಿಗೆ ನೀರು ಒದಗಿಸಬೇಕೆಂದು ಡ್ಯಾಮನ್ನು ದೊಡ್ಡದು ಮಾಡುತ್ತಿದ್ದಾರೆ. ಅಲ್ಲಿ ಕಟ್ಟೆಯನ್ನು ಕಟ್ಟಿಬಿಟ್ಟು ನೀರನ್ನು ಸ್ಟೋರೇಜ್ ಮಾಡಿಕೊಂಡು ತಮಿಳುನಾಡಿನವರು ನೀರನ್ನು ಒದಗಿಸತಕ್ಕಂಥ ಪ್ರಸಂಗ ಬಂದೀತು ಎಂದು ನನಗೆ ಹೆದರಿಕೆ ಆಗಿದೆ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮನ್ನು ಯಾರೋ ಹೆದರಿಸುತ್ತಿದ್ದಾರೆ. ಇದು ಯಾರೋ ಕೈಲಾಗದೇ ಇರತಕ್ಕಂಥವರು ಇದನ್ನು ಹೇಳಿ ಹೆದರಿಸುತ್ತಿದ್ದಾರೆ. ನೀವು ಏತಕ್ಕೆ ಅವರ ಮಾತಿಗೆ ಮರುಳಾಗುತ್ತಿದ್ದೀರಿ. ತಾವು ಧೈರ್ಯವನ್ನು ಹೊಂದಿಕೊಳ್ಳಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ತಾವು ಧೈರ್ಯ ಕೊಟ್ಟರೆ ನೀರು ಕೊಟ್ಟ ಹಾಗೆ.

ಶ್ರೀ ಡಿ. ದೇವರಾಜ ಅರಸ್.—ನೀವು ಮಾತು ಮಾತಿಗೆ ಅದನ್ನೇ ಹೇಳುತ್ತಾ ಇದ್ದರೆ ನಾನು ಏನು ಮಾಡಲಿ ?

ಶ್ರೀ ಎಚ್. ಟಿ. ಕೃಷ್ಣಪ್ಪ —2 ಮುಖದಿಂದ ನಾವು ನೋಡಬೇಕಾಗುತ್ತದೆ.

ಶ್ರೀ ಡಿ ದೇವರಾಜ ಅರಸ್.—2 ಮುಖದಿಂದ ನೋಡಿ ಬಹಳ ವರ್ಷವಾಗುತ್ತಿದೆ. ಮಾನ್ಯ ಪುಟ್ಟಸ್ವಾಮಯ್ಯನವರನ್ನು ಕೇಳಿ ಅವರು ಏನು ಹೇಳುತ್ತಾರೆ ?

ಶ್ರೀ ಎಚ್, ಟಿ. ಕೃಷ್ಣಪ್ಪ.—ತಾವು ಹೇಮಾವತಿಗೆ ಸಂಬಂಧಪಟ್ಟ ವಿಚಾರವನ್ನು ಹೇಳಬೇಕು.

ಶ್ರೀ ದೇವರಾಜ ಅರಸ್.—ಹೇಮಾವತಿಗೆ ಸಂಬಂಧಪಟ್ಟ ವಿಷಯವನ್ನು ಅರ್ಥಮಾಡಿಕೊಳ್ಳದೇ ಏನೇನೋ ಮಾತನಾಡುತ್ತಾ ಇರುವುದು ಯಾವ ಮಾತು; ನಾನು ಈ ಸಭೆ ಹುಟ್ಟಿದಾಗಿನಿಂದ ಇದ್ದೇನೆ. ಆಗಿನಿಂದ ಯಾರು ಯಾರು ಮುಖ್ಯಮಂತ್ರಿಗಳು ಏನೇನು ಮಾತನಾಡುತ್ತಿದ್ದರು ಎಂಬುವುದೆಲ್ಲಾ ನನಗೆ ಗೊತ್ತಿದೆ. ಅದೆಲ್ಲಾ ಕಡತದಲ್ಲಿ ಇದೆ. ಲೈಬ್ರರಿಗೆ ಹೋಗಿ ಓದಿಕೊಳ್ಳಿ ಅವರು ವಿಷಯವನ್ನು ಪೂರ್ಣವಾಗಿ ತಿಳಿದಿದ್ದಾರೆಯೋ ತಿಳಿಯಲಿಲ್ಲವೋ ಗೊತ್ತಿಲ್ಲ ಅವರು ಬಹಳ ಹಿಂದೆ ಇದ್ದಾರೆಂದು ಹೇಳುವುದಿಲ್ಲ. ಮತ್ತು ದುರುದ್ದೇಶದಿಂದ ಆ ರೀತಿ ಹೇಳಿದ್ದಾರೆಂದು ನಾನು ಹೇಳುವುದಿಲ್ಲ. ಮನುಷ್ಯನಿಗೆ ಯಾವಾಗ ಒಂದು ಶಕ್ತಿ ಬರುತ್ತದೆ ಎಂದರೆ ಅವನು ದಪ್ಪವಾಗಿ ದೃಢವಾಗಿ ಇದ್ದಾನೆ ಎಂದರೆ ಶಕ್ತಿ ಬರುವುದಿಲ್ಲ. Knowledge is strength and power.

Knowledge of men and matters you must have; ಅವರು ಬರುತ್ತಾರೆ. ತಮಿಳು ನಾಡಿನವರಿಂದ ತೆಗೆದುಕೊಂಡು ಹೋಗುತ್ತಾರೆ. ಆದರೆ ಇವರು ತಮಿಳುನಾಡಿನವರು ಕೊಡುವುದು ಬೇಡವೆಂದು ಹೇಳುತ್ತಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಮ್ಮ ಕಳಕಳಿಯನ್ನು ತಾವು ಅರ್ಥಮಾಡಿಕೊಳ್ಳಬೇಕು. ನಾವು ನೆಲಜಲದ ಪ್ರಶ್ನೆಯ ಬಗ್ಗೆ ಹೇಳುತ್ತಿದ್ದೇವೆ. ಅದರ ಪ್ರಾಮುಖ್ಯತೆಯನ್ನು ನಾವು ಅರಿತುಕೊಂಡಿದ್ದೇವೆ

ಶ್ರೀ ಡಿ ದೇವರಾಜ ಅರಸ್.—ಅದಕ್ಕಾಗಿ ನಿಮ್ಮ ಕೈಗೆ ಕಡಗ ಹಾಕಿಸುತ್ತೇವೆ. ಈ ನೆಲ ಜಲದ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ನಿಮ್ಮ ಪಕ್ಷದಿಂದ ಸಾಧ್ಯ ಇಲ್ಲ. ಅದು ನಿಮ್ಮ ಹೊಣೆ ಅಲ್ಲ. ಅದನ್ನು ನೀವು ಬಿಟ್ಟುಬಿಡಿ. ಈಗಲಾದರೂ ಧೈರ್ಯವನ್ನು ತೆಗೆದುಕೊಳ್ಳಿ. ಇಷ್ಟೊಂದು ನಮ್ಮ ರಾಜ್ಯದಲ್ಲಿ ಡೆವಲಪ್‌ಮೆಂಟ್ ಆಗಿದೆ ಎಂದು ಹೇಳುವ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕೆಂದರೆ ನಮ್ಮ ದೇಶಕ್ಕೆ ಏನಾದರೂ ಕೀರ್ತಿ ಬಂದಿದ್ದರೆ ಅದನ್ನು ಹೊರಗಿನವರು ಮೆಚ್ಚಿದ್ದಾರೆ.

SRI NAZIR AHMED SIDDIQUE.—If the fundation of gorge section of Alamatti dam is not tackled immediately that portion will be submerged, by the water spread area of Narayanapur. That is yet to be answered.

ಶ್ರೀ ಡಿ. ದೇವರಾಜ ಅರಸ್.—ಈ ಒಂದು ವಿಚಾರದಲ್ಲಿ ನಮ್ಮ ಕರ್ನಾಟಕ ರಾಜ್ಯ 4 ವರ್ಷದಲ್ಲಿ ಇಷ್ಟೊಂದು ಪ್ರಗತಿಯನ್ನು ಸಾಧನೆ ಮಾಡಿದ್ದಾರೆಂದು ಮೆಚ್ಚಿಗೆ ಇದ್ದ ಪಕ್ಷದಲ್ಲಿ ಅದರ ಕೀರ್ತಿ ಈ ಸರ್ಕಾರಕ್ಕೆ ಅಷ್ಟೇ ಅಲ್ಲ, ಈ ಮನೆಗೂ, ತಮ್ಮನ್ನು ಸೇರಿಸಿಕೊಂಡು ಕೊಡುವುದಕ್ಕೆ ಸಿದ್ಧನಿದ್ದೇನೆ. ಆ ಕೀರ್ತಿ ನಿಮಗೂ ಸಲ್ಲುತ್ತದೆ. ನಾವು ಎಷ್ಟೋ ವಿಧವಾದ ಕಾನೂನುಗಳನ್ನು ತಂದಿದ್ದೇವೆ. ಅನೇಕ ಕಾನೂನುಗಳಿಗೆ ತುಂಬು ಮನಸ್ಸಿನಿಂದ ತಾವು ಒಪ್ಪಿಗೆ ಕೊಟ್ಟಿದ್ದೀರಿ. I am prepared to acknowledge it today. ನನಗೆ ಗೊತ್ತಿದೆ ನಿಮ್ಮ ಮನಸ್ಸಿನಲ್ಲಿ ಏನಿದೆ ಎಂದು. ವಿರೋಧ ಪಕ್ಷದಲ್ಲಿದ್ದೀರಿ, ಹೇಳಬೇಕು ಎಂದು ಹೇಳುತ್ತಿದ್ದೀರಿ. ಅಂತರಂಗದಲ್ಲಿ ಮೆಚ್ಚಿಗೆ ವ್ಯಕ್ತಪಡಿಸುತ್ತಿದ್ದೀರಿ.

6-00 P.M.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅದು ಬಹಳ ಮಾಯಾಜಾಲದ ಮಾತು.

ಶ್ರೀ ಎಚ್. ಟಿ ಕೃಷ್ಣಪ್ಪ —ಪ್ರಗತಿಪರವಾದ ಕಾರ್ಯಕ್ರಮಗಳನ್ನು ನಾವು ಸ್ವಾಗತಿಸುತ್ತೇವೆ. ಅಂದ ಮಾತ್ರಕ್ಕೆ ಸರ್ಕಾರ ಎಡವಿದಂಥ ಕಾಲದಲ್ಲಿ ಟೀಕೆ ಮಾಡತಕ್ಕದ್ದು ದೋಷಗಳನ್ನು ಎತ್ತಿತೋರಿಸ ತಕ್ಕದ್ದು ನಮ್ಮ ಕರ್ತವ್ಯ. ಕೆಲವು ಸಂದರ್ಭದಲ್ಲಿ ನಿಮ್ಮ ಪಾತ್ರ ಸರಿಯಾಗಿ ನಿರ್ವಹಿಸಿದ್ದೀರಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದೇವೆ. ಏಕಾಏಕಿ ನಿಮ್ಮ ಮಾತನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಪುಟ್ಟಸ್ವಾಮಿಯವರು ಹೇಳುತ್ತಾರೆ

ಶ್ರೀ ಡಿ. ದೇವರಾಜ ಅರಸ್ —ಅದು ನಿಜ. ಏಕದಂ ದೀಪ ಮುಖಕ್ಕೆ ಹಿಡಿದರೆ ಕಣ್ಣು ಮುಚ್ಚಿ ಕೊಳ್ಳುವ ಹಾಗಾಗುತ್ತದೆ. ನಮಗೂ ಆ ಕೀರ್ತಿ ಬಂತೇ ಎಂದು ಹಾಗೆ ಅನ್ನಿಸುತ್ತದೆ. ಇದು ನೆಲ ಜಲದ ಮಾತಲ್ಲ. ಅದು ಹಳೇ ಕಥೆ.

ಶ್ರೀ ಎಚ್ ಟಿ ಕೃಷ್ಣಪ್ಪ.—ಗರೀಬಿ ಹಠಾವೋ ಎಂದು ಹೇಳಿದ ಹಾಗೆ.

ಶ್ರೀ ಡಿ. ದೇವರಾಜ ಅರಸ್,—ನಿಮಗೆ ಉತ್ತರ ಕೊಡುವುದಕ್ಕಿಂತ ಮುಂಚೆ ಇದೊಂದು ಪುಸ್ತಕ ಓದಿ ಡೈಜೆಸ್ಟ್ ಮಾಡಿಕೊಳ್ಳಿ.

ಶ್ರೀ ಎಚ್. ಟಿ ಕೃಷ್ಣಪ್ಪ —ಅಚೀವ್‌ಮೆಂಟ್ಸ್ ಹೇಳಿ.

SRI D DEVARAJ URS —This is the achievement What do you mean? If you talk like that, I have to answer you like that. You have not read it at all, I should say. Please go through it and then

you talk, with facts and figures as to where we have failed, where we have achieved and I am prepared forany kind of dialogue with you ಒಂದೂ ಓದದೆ ಸುಮ್ಮನೆ ಹೇಳಿದರೆ ಏನು ಮಾಡಲಿ? ಆಲ್ಮಟ್ಟಿ ವಿಚಾರ ಹೇಳಿದಾಗ ಮಾನ್ಯ ಸದಸ್ಯರು ಇರಲಿಲ್ಲ ಎಂದು ಕಾಣುತ್ತದೆ. ಇದು ಸ್ಟೋರೇಜ್ ರಿಸರ್ವಾಯರ ಶ್ರೀಮಾನ್ ಕಬಾಡೆಯವರು ಇದನ್ನು ಅರ್ಥ ಮಾಡಿಕೊಂಡರೆ ಒಳ್ಳೆಯದು. ಮೊಟ್ಟ ಮೊದಲು ಫೌಂಡೇಷನ್ ಟ್ಯಾಕಲ್ ಮಾಡಿಲ್ಲ. You are aware of it I suppose. I want the Hon'ble members to kindly hear this point, as you know a dam is built in sections. What you call garge portion or the river bed portion and the two flanks, ಇದನ್ನು ಮಾಡಲು ಒಂದು ಸಾರಿ ಮೂರು ಜನ ಕಂಟ್ರಾಕ್ಟರಿಗೆ ೧೯೬೯-೭೦ರಲ್ಲಿ ಕೊಟ್ಟರು. ಡ್ಯಾಂ ಮೂರು ಭಾಗ ಮಾಡಿದರೆ ಎರಡು ಫ್ಲಾಂಕ್ಸ್ ಮತ್ತು ಮಧ್ಯೆ ಗಾರ್ಜ್ ಪೋರ್ಷನ್ ಇರುತ್ತದೆ. ಗಾರ್ಜ್ ಪೋರ್ಷನ್ ಆಗೆಯುವುದು, ಯಾವುದು ಆಯಿತು. ಎರಡು ಕಡೆ ಫ್ಲಾಂಕ್ಸ್ ಎದ್ದುಕೊಂಡು ಬಂದಿವೆ. ಅದಕ್ಕೆ ೮ ಕೋಟಿ ರೂಪಾಯಿ ಖರ್ಚಾಗಿದೆ. ಕಬಾಡೆಯವರು ಇದನ್ನು ನೋಡಿಕೊಂಡು ಬಂದೆ ಎಂದು ಹೇಳಿದರು ಅದಕ್ಕೆ ಹೇಳುತ್ತಿದ್ದೇನೆ. ಎರಡು ಫ್ಲಾಂಕ್ಸ್‌ಗೆ ಎಲ್ಲಾ ಖರ್ಚು ಮಾಡಿಬಿಟ್ಟಿದ್ದಾರೆ. ಈಗ ಗಾರ್ಜ್ ಪೋರ್ಷನ್ ಪೂರ್ಣವಾಗಿ ನಿಂತಿವೆ ನಿಜ. ನಾರಾಯಣಪುರ ಡ್ಯಾಂ ಕಟ್ಟಿದರೆ ಅದು ಮುಳುಗಡೆ ಯಾಗುತ್ತದೆ ಎಂದು ಹೇಳಿದರು. ಹಾಗೆ ಮುಳುಗಡೆಯಾಗಿ ಒದ್ದಾಡುವುದಕ್ಕೆ ಬಿಡುವುದಿಲ್ಲ ನಾರಾಯಣ ಪುರ ನೀರು ನಿಲ್ಲಿಸಿ ಯಾವಾಗ ಮುಳುಗಡೆಯಾಗುತ್ತದೆ ಎಂದು ಲೆಕ್ಕ ಇಟ್ಟುಕೊಂಡಿದ್ದಾರೆ. ಅದು ಮುಳುಗಡೆಯಾಗಿ ಒದ್ದಾಡುವುದಕ್ಕೆ ಬಿಡುವುದಿಲ್ಲ ಅಷ್ಟರೊಳಗೆ ಗಾರ್ಜ್ ಪೋರ್ಷನ್ ಫಿಲಪ್ ಮಾಡಿಯೋ ಮಾಡುತ್ತೇವೆ ಈಗ ತಮಗೆ ಭರವಸೆ ಬಂತೆ? ನೀವು ಹೇಳಿದಿರಿ ಎಂದಲ್ಲ ಕೆಲಸವೇ ಹಾಗೆ ನಡೆಯಬೇಕು ಇಲ್ಲದಿದ್ದರೆ ಇಂಜಿನಿಯರುಗಳು ಏನು ಕೆಲಸ ಮಾಡಿದ ಹಾಗಾಯಿತು? ದಡ್ಡರು ಮಾಡಿದ ಹಾಗಾಗುತ್ತದೆ Hon'ble members need not have that apprehension, that we will somehow include this work and we are going to allow to submerge this lower dam and then we starts filling out the water Nothing of the kind. Dont sorry. Afterall, that does not equire much money. It may require 5 or 8 crores of rupees. It appears that the garge portions was given for the contract at 4 crores of rupees in that year.

ಶ್ರೀ ಜೆ. ಎಲ್. ಕಬಾಡೆ.—ಎಂಟುಸ್ಟು ದಿವಸದಿಂದ ನಾರಾಯಣಪುರದಲ್ಲಿ ಏನೂ ಕೆಲಸ ನಡೆದಿಲ್ಲ.

ಶ್ರೀ ಡಿ. ದೇವರಾಜ ಅರಸ್,—ಇಂಜಿನಿಯರ್ ಹೇಳಿದರು ಎಂದು ಕೇಳಬೇಡಿ. My talk is authoritative. Dont listen to overseer or Junior Engineer, for heaven's sake don't come and talk on that basis. Why did you listen to those things.? ಯಾರಿಗೋ ಒಬ್ಬನಿಗೆ ಟ್ರಾನ್ಸ್‌ಫರ್ ವಗೈರೆ ಆಗಿದ್ದಕ್ಕೆ ಆರೀತಿ ಹೇಳುತ್ತಾರೆ ನನಗೆ ಎಲ್ಲಾ ಕಥೆಯೂ ಅರ್ಥವಾಗುತ್ತದೆ. ಸುಮ್ಮನೆ ಕೇಳಿ. ಹಿಂದ ಕೆಲಸ ಆಗಲಿಲ್ಲ ನಿಜ. ಹೋದ ವರ್ಷ ಖರ್ಚು ಮಾಡುವುದಕ್ಕೆ ದುಡ್ಡು ಇರಲಿಲ್ಲ. ಅದರಿಂದ ಏನೂ ನಷ್ಟವಾಗಿಲ್ಲ. ನಿಮ್ಮ ಅಪ್ರಹೆನಷನ್ ಏನಿದೆ ಅದನ್ನು ನೋಡಿಕೊಳ್ಳುವ ಜವಾಬ್ದಾರಿ ನಮ್ಮದಿದೆ. ೩-೪ ತಿಂಗಳು ಕೆಲಸ ಮಾಡುವುದಕ್ಕೆ ಆಗದೇ ಇರಬಹುದು. I am awaie of it, but in this year we are going to gear our Department to see that this work is taken up. ಹಳೆಯ ಕಂಟ್ರಾಕ್ಟರ್ ಮಾಡುವುದಿಲ್ಲ. ಅವನ ಹತ್ತಿರ ಚರ್ಚೆ ಮಾಡಬೇಕು. ೧೯೬೯ನೇ ಇಸವಿಯಲ್ಲಿ ಕೊಟ್ಟ ರೇಟಿನಲ್ಲಿ ಯಾರಾದರೂ ಕೆಲಸ ಮಾಡುತ್ತಾರೆಯೋ ತಾವೇ ಹೇಳಿ. Ether I must cancel that contract, finalise it or I must bring a new conttractor or I must negotiate with this man and continue I have asked the Chief Egineer to lock into the matter I can assure one thing. I would not allow merely on this score work to be delayed. We are going to take it up and see that the gorge portion is completed and it comes to safe level before Narayanapura dam is completed.

ನಮ್ಮ ನಂಜೇಗೌಡರು ವರುಣಾ ನಾಲೆ ಬಗ್ಗೆ ಕೇಳಿದರು. ಇದು ೭ ಟಿ.ಎಂ.ಸಿ.ಎಫ್. ನೀರು ಉಪಯೋಗ ಮಾಡುವುದಕ್ಕೆ ಯೋಜನೆ ಹಾಕಿಕೊಂಡಿರುವುದು, ಈ ಯೋಜನೆಯಿಂದ ೩೦-೩೫ ಸಾವಿರ ಎಕರೆ ಆಗಬಹುದು. ನಮ್ಮ ಹನುಮೇಗೌಡರು ಯಗಚಿ ಬಗ್ಗೆ ಕೇಳಿದರು. ಆ ಯೋಜನೆ ಇನ್ನೂ ತಯಾರು ಮಾಡುವುದರಲ್ಲಿಯೇ ಇದೆ

ಶ್ರೀ ಕೆ. ಎಚ್. ಹನುಮೇಗೌಡ.—ಅಂದಾಜಾಗಿ ಮಂಜೂರಾತಿಗೆ ಡಿಲ್ಲಿಗೆ ಹೋಗಿ ಕೂತುಬಿಟ್ಟಿದೆ.

ಶ್ರೀ ಡಿ. ದೇವರಾಜ ಅರಸ್.—ಅದು ನಿದ್ದೆ ಮಾಡುವ ವ್ಯವಸ್ಥೆಯಲ್ಲಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ, ತಾವು ಏನೇನೋ ಸರಿ ಮಾಡಿದ್ದೀರಿ. ಇದೊಂದನ್ನು ಸರಿ ಮಾಡಿ ಸ್ವಾಮಿ.

ಶ್ರೀ ಡಿ. ದೇವರಾಜ ಅರಸ್.—ಒಂದು ಸಾರಿ ಏನಾಯಿತು ಎಂದರೆ ಅದನ್ನು ಕೈಬಿಟ್ಟಿದ್ದರು, ಸಾಧ್ಯವಿಲ್ಲ ಎಂದು ಹೇಳಿದರು. ನಮಗೆ ನೀರು ಬರುವುದಿಲ್ಲ ಎಂದು ಹೇಳಿದರು. ಯಗಚಿ ಪ್ರಾಜೆಕ್ಟ್ ಮಾಡುವುದು ವಾಣಿ ವಿಲಾಸ ಸಾಗರಕ್ಕೆ ನೀರು ಕೊಡುವುದಕ್ಕೆ ಎಂದು ಮೊದಲು ಹೇಳಿದರು. ಆಮೇಲೆ ವಾಣಿ ವಿಲಾಸ್‌ಗೆ ನೀರು ಕೊಡುವುದಿಲ್ಲ, ನಮಗೇ ಬೇಕು ಎಂದು ನಿಮ್ಮ ಜಿಲ್ಲೆಯವರೇ ಕೂಗಾಟ ಮಾಡಿದರು. ಅದು ಹಾಗೆಯೇ ನಿಂತುಹೋಯಿತು. ನಿಮ್ಮ ಯಗಚಿ ಕೂಡ ಸಾಧ್ಯವಾದರೆ ಮಾಡೋಣ. ನೀರಾವರಿ ಬಗ್ಗೆ ವೈಯಕ್ತಿಕವಾಗಿ ನನ್ನದೊಂದು ತಿಳುವಳಿಕೆ ಮೊದಲಿನಿಂದಲೂ ಇರುವುದು, ನಾನು ಮುಖ್ಯ ಮಂತ್ರಿಯಾಗಿರಲಿ ಬಿಟ್ಟಿರಲಿ, ನಮ್ಮ ದೇಶದಲ್ಲಿ ಪ್ರಕೃತಿ ಮಾತೆಯ ನೀರು ಎಷ್ಟೆಷ್ಟು ಇದೆ, ಅದನ್ನೆಲ್ಲಾ ಸಂಪೂರ್ಣವಾಗಿ ಉಪಯೋಗ ಮಾಡಬೇಕು ಎಂದು. ಎಲ್ಲಿಯವರೆಗೆ ಉಪಯೋಗ ಮಾಡಬೇಕೆಂದರೆ ನಮಗೆ ನೀರು ಬೇಕು, ನಮಗೆ ನೀರು ಬೇಕು ಎಂದು ಹೊಡೆದಾಡಬೇಕು, ಘರ್ಷಣೆ, ಪೈಪೋಟಿ ನಮ್ಮ ಜನಾಲ್ಲಿ ಬಂದರೂ ಪರ್ವಾಗಿಲ್ಲ. We must draw maximum from these canal and see that people used this water. ಒಬ್ಬರು ಎರಡು ನೀರು ತೆಗೆದುಕೊಳ್ಳುವವರು ಒಂದೇ ತೆಗೆದುಕೊಳ್ಳಲಿ. ಇನ್ನೊಬ್ಬರಿಗೆ ಒಂದು ಭಾಗ ಸಿಕ್ಕಲಿ. ಘರ್ಷಣೆ ಎಂದರೆ ತೊಂದರೆ ಏನೂ ಇಲ್ಲ. ಟೆಕ್ನಾಲಜಿ ಪ್ರಪಂಚದಲ್ಲಿ ಎಷ್ಟೋ ವೇಗವಾಗಿ ಬೆಳೆಯುತ್ತಿದೆ, ಇವತ್ತು ಉಪಯೋಗಿಸುವಷ್ಟು ನೀರನ್ನೇ ಮುಂದೆಯೂ ಉಪಯೋಗಿಸುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಸೈನ್ಸ್ ಹೆಚ್ಚು ಹೆಚ್ಚಾಗಿ ಡೆವಲಪ್ ಆಗುತ್ತಿದೆ. ಒಬೀರಾಯನ ಕಾಲದ ಪ್ಲಾನ್ ಹಾಕಿಕೊಂಡು ಕುಳಿತರೆ ಪ್ರಯೋಜನವಿಲ್ಲ. ಒಂದು ಟಿ.ಎಂ.ಸಿ.ಎಫ್.ಟಿ. ಎಂದರೆ ೫ ಸಾವಿರ ಎಕರೆ ಜಮೀನಿಗಿಂತ ಜಾಸ್ತಿ ನೀರಾವರಿ ಇಲ್ಲವೇ ಇಲ್ಲ. ಡ್ಯೂಟಿ ಎಂದರೆ ೭೫ ಎಂದು ಹೇಳಿಕೊಂಡು ಕುಳಿತಿದ್ದರು. ಆಗಿನ ಕಾಲದಲ್ಲಿ ಇಂಜಿನಿಯರಿಂಗ್ ಟೆಕ್ನಾಲಜಿ ಪ್ರೋಗ್ರೆಸ್ ಆಗಿರಲಿಲ್ಲ. ಸ್ಪ್ರಿಂಕ್ಲಿಂಗ್ ಇರಿಗೇಷನ್‌ನಲ್ಲಿ ಒಂದು ಎಕರೆಗೆ ಆಗುವ ನೀರು ಮೂರು ಎಕರೆಗೆ ಆಗುತ್ತದೆ.

ಆದುದರಿಂದ ಇಂಜಿನಿಯರಿಂಗ್ ಥಿಂಕಿಂಗ್ ಸದ್ಯದಲ್ಲಿ ಇರುವ ಪರಿಸ್ಥಿತಿ, ಅದು ಆಗುತ್ತದೆ, ಆಗುವುದಿಲ್ಲವೆಂದು ಮಾತನಾಡುತ್ತೀರಿ. ಆದರೆ ನನ್ನ ದೃಷ್ಟಿಯಲ್ಲಿ ಆಗುವುದಿಲ್ಲವೆಂದು ಹೇಳುವುದಿಲ್ಲ. ಆಗದಿರುವುದಕ್ಕೆ ದುಡ್ಡಿಲ್ಲದಿರುವುದೇ ಕಾರಣ. ತಾವು ಏನು ಅಭಿಲಾಷೆ ಪಡುತ್ತೀರಿ ಅವೆಲ್ಲವನ್ನು ಸ್ಟಾರ್ಟ್ ಮಾಡಬೇಕೆಂದು ಆಸೆ. ಆ ರೀತಿ ಎಲ್ಲವನ್ನು ಸ್ಟಾರ್ಟ್ ಮಾಡಿದರೆ ತಿರುಪತಿ ಕ್ಷೌರ ಮಾಡಿದಂತಾಗುತ್ತದೆ, ಮತ್ತು ಒಂದೂ ಕಂಪ್ಲೀಟ್ ಆಗಲಿಲ್ಲವೆಂಬ ನಿಂದನೆ ಸಹ ಬರುತ್ತದೆಂದು ಸ್ವಲ್ಪ ನಿಧಾನಿಸುತ್ತೇನೆ. ಒಂದು ವೇಳೆ ನಾನಿದ್ದಾಗ ಮಾಡುವುದಕ್ಕಾಗಲಿಲ್ಲವೆಂದರೆ ನಿಮ್ಮ ಕಾಲಕ್ಕೆ ಮಾಡಿ

ಶ್ರೀ ಕೆ. ಎಚ್. ಹನುಮೇಗೌಡ.—ಹತ್ತಾರು ವರ್ಷಗಳಿಂದ ಹಾಗೆ ಬಿದ್ದಿರುವ ಕೆಲಸವನ್ನು ತಮ್ಮ ಕಾಲದಲ್ಲಿ 4 ವರ್ಷ ನಿಧಾನವಾದರೂ ಚಿಂತೆಯಿಲ್ಲ, ಮಾಡುತ್ತೇನೆಂದು ಹೇಳಿದರೆ ಸಾಕು.

ಶ್ರೀ ಡಿ. ದೇವರಾಜ ಅರಸ್.—ಬರೀ ಇಂಜಿನಿಯರ್‌ಗಳಿಗೆ ಸಂಬಳ ಕೊಟ್ಟುಕೊಂಡು ಕುಳಿತರೆ ಸಾಲದು.

ಶ್ರೀ ಎಂ. ಎಸ್. ಕೃಷ್ಣನ್.—ಅವರಿಗೆ ಮೊದಲು ಅಪ್ಪರ್ ಕೃಷ್ಣ ಪ್ರಾಜೆಕ್ಟಿನ ಫೌಂಡೇಶನ್ ಹಾಕಬೇಕು, ಆ ಮೇಲೆ ಎಲೆಕ್ಷನ್ ಬರುತ್ತದೆ.

ಶ್ರೀ ಡಿ. ದೇವರಾಜ ಅರಸ್.—1964ರಲ್ಲಿ ಫೌಂಡೇಶನ್ ಹಾಕಿ 1970ರಲ್ಲಿ ತೆಗೆದುಕೊಳ್ಳುವಂತೆ ಮಾಡಬಾರದು, ಫೌಂಡೇಶನ್ ಹಾಕಿದ ಮೇಲೆ ಕೆಲಸ ಶುರು ಮಾಡಬೇಕೆಂದು ನನ್ನ ಅಭಿಪ್ರಾಯ.

ಶ್ರೀ ಕೆ. ಎಚ್. ಹನುಮೇಗೌಡ.—ಎಲೆಕ್ಷನ್ ಆದಮೇಲೆ ನಿಮ್ಮ ಪಾರ್ಟಿಯವರೇ ಬರಲಿ ನಮ್ಮ ಪಾರ್ಟಿಯವರು ಬಾರದೇ ಇದ್ದರೂ ಚಿಂತೆಯಿಲ್ಲ ಒಟ್ಟಿನಲ್ಲಿ ಕೆಲಸವನ್ನು ಶುರು ಮಾಡಿ. ಜನಗಳಿಗೆ ಓಟು ಕೊಡುವುದಕ್ಕಾದರೂ ಪ್ರೋತ್ಸಾಹ ಬೇಡವೆ ?

ಶ್ರೀ ಡಿ. ದೇವರಾಜ ಅರಸ್.—ಅವರು ಮಾತನಾಡುತ್ತಾರೆ ನೀವು ಮಾತನಾಡುತ್ತೀರಿ ನಿಮ್ಮ ಪ್ರಾಜೆಕ್ಟನ್ನು ಶುರು ಮಾಡದಿದ್ದರೂ ನಿಮ್ಮ ಕ್ಷೇತ್ರದಲ್ಲಿ ಓಟ್ ತೆಗೆದುಕೊಳ್ಳುವುದು ಹೇಗೆ ಎಂದು ನನಗೆ ಗೊತ್ತಿದೆ.

ಶ್ರೀ ಸಿ. ಬೈರೇಗೌಡ.—ಹಾಗಾದರೆ ಓಟ್ ಮಾಡಿಸಿಕೊಳ್ಳಿ.

ಶ್ರೀ ಡಿ. ದೇವರಾಜ ಅರಸ್. ನೋಡೋಣ. ಶ್ರೀಮಾನ್ ಕೃಷ್ಣನ್‌ರವರು ರಿಸೋರ್ಸಸ್ ಮಾಬಿಲೈಸೇಶನ್ನಿಗೆ ನೀವು ಏನಾದರೂ ಮಾಡಿ ದುಡ್ಡು ಹೊಂದಿಸಿಕೊಡಬೇಕೆಂದು ಹೇಳಿದರು ; ನಾವು ಅದಕ್ಕೆ ಮಾಡಿರುವ ಸಾಹಸವನ್ನು ಅವರು ಮೆಚ್ಚಬೇಕಾಗುತ್ತದೆ. ಜನರಲ್ ಅಡ್ಮಿನಿಸ್ಟ್ರೇಶನ್ ಬಗ್ಗೆ ಆಮೇಲೆ ಹೇಳುತ್ತೇನೆ. ಈಗ ನಾವು ನಾಲ್ಕು ವರ್ಷಗಳಿಂದ ಹಣ ವಸೂಲಮಾಡುವ ಬಗ್ಗೆ ಬಹಳ ಸ್ಟ್ರಗಲ್ ಪಡುತ್ತಿದ್ದೇವೆ. ಸಾಲ ಕೊಟ್ಟಿರುವುದಾಗಲೀ, ವಾಟರ್ ರೇಟಾಗಲಿ ಮತ್ತೊಂದಾಗಲಿ ಯಾವುದನ್ನು ವಸೂಲ್ಮಾಡುವುದೂ ಬಹಳ ಕಷ್ಟವಾಗಿದೆ. ಒಂದು ಕಡೆ ಈ ಕಷ್ಟವಾದರೆ ಮತ್ತೊಂದು ಕಡೆ ಯೋಜನೆಗಳಿಗೆ ಹಣವನ್ನು ಒದಗಿಸಬೇಕು. ನಾವು ಯೋಜನೆಗಳಿಗೆ ಹೆಚ್ಚು ಹಣವನ್ನು ಒದಗಿಸಿದರೆ ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮೀಶನ್‌ನವರು ಸ್ವಲ್ಪ ಹುಟ್ಟಿಗೆ ಯಾರು ಪ್ರಯತ್ನ ಮಾಡುತ್ತಾರೋ ಅವರಿಗೆ ಸಹಾಯ ಮಾಡೋಣವೆಂದು ಮುಂದೆ ಬರುವುದರಿಂದ, ನಮಗೆ ಅನುಕೂಲವಾಗುತ್ತದೆ. ನಮ್ಮ ಪ್ರಯತ್ನ ಇಲ್ಲದೆ ಹೋದರೆ ಯಾರೂ ಸಹಾಯಕ್ಕೆ ಬರುವುದಿಲ್ಲ. ಆ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡರೆ, ನೀವು ಟ್ಯಾಕ್ಸಿನ ಹೊರೆ ಹೆಚ್ಚಾಯಿತೆಂದು ಹೇಳಿದರೂ ಪರವಾಗಿಲ್ಲ, ಅದರಿಂದ ಮುಂದಿನ ಪೀಳಿಗೆಗೆ ಒಳ್ಳೆಯದಾಗಲಿ ಎಂಬ ದೃಷ್ಟಿಯಿಂದ ನಾವು ಆ ಭಾರವನ್ನು ನಿಮ್ಮ ಮೇಲೆ ಹೇರಲೇಬೇಕು ಮತ್ತು ನಮ್ಮ ಪ್ರಯತ್ನ ಮಾಡಲೇಬೇಕು. ಕೇಂದ್ರ ಸರ್ಕಾರದವರು ಇದನ್ನು ನೋಡಿ ಸಹಾಯ ಮಾಡುವುದಕ್ಕೆ ಬಂದರೂ ಅದಕ್ಕಿಂತ ಹೆಚ್ಚಿಗೆ ರಿಸೋರ್ಸಸ್ಸನ್ನು ನಾವು ಹೊಂದಿರುವುದು ಒಳ್ಳೆಯದು. ಈಗ ನಾವು ಎಲ್ಲಾ ಅಬ್ಜೆಕ್ಟ್‌ಗಳನ್ನು ತೆಗೆದುಕೊಂಡಿದ್ದೇವೆ ಅದರ ಯಾವುದನ್ನಾದರು ಬಿಟ್ಟಿದ್ದರೆ ಹೇಳಿ. ಸುಂಕ ಟ್ಯಾಕ್ಸ್‌ಗಳನ್ನು ಹಾಕಬೇಡಿ ಅದರಿಂದ ತೊಂದರೆಯಾಗುತ್ತದೆ, ಚುನಾವಣೆಯಲ್ಲಿ ಹಾಗೆ ಮಾಡುತ್ತಾರೆ ಹೀಗೆ ಮಾಡುತ್ತಾರೆಂದರೆ ನಾನು ಹೆದರುವವನಲ್ಲ. ಕಂದಾಯ ಮಾಫಿ ಮಾಡಿದರೆ ಓಟು ಕೊಡುತ್ತಾರೆಂದು, ಹಿಂದೆ ಆ ರೀತಿ ಮಾಡಿದವರ ಕಥೆ ಏನಾಗಿದೆ ಎಂಬುದು ನನಗೆ ಚನ್ನಾಗಿ ಗೊತ್ತು. ಆದರೆ ನನ್ನ ಗುರಿಯೇ ಬೇರೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಬೃಹತ್ ನೀರಾವರಿ ಯೋಜನೆಗೆ 255 ಕೋಟಿ ರೂಪಾಯಿ ಡೆಡ್ ಕ್ಯಾಪಿಟಲ್ ಹಾಕಿ ಅದಕ್ಕೆ ಪ್ರತಿ ವರ್ಷ 30 ಕೋಟಿ ರೂಪಾಯಿ ಬಡ್ಡಿ ತೆರಬೇಕಾಗಿದೆ ಮತ್ತು ಆ ಯೋಜನೆಗಳು ಮುಗಿಯಬೇಕಾದರೆ 600 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಹೇಳಿದಿರಿ 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಕಡೆ ಒದಗಿಸಿರುವ ಹಣ ಎಷ್ಟೆಂದು ಹೋಲಿಕೆ ಮಾಡಿ ನೋಡಿದರೆ ಬಹಳ ವಿಷಾದವಾಗುತ್ತದೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ನಾನು ಒಂದು ಸ್ಪಷ್ಟವಾದ ಕಾರ್ಯಕ್ರಮವನ್ನು ಸಭೆಯ ಮುಂದೆ ಇಡುತ್ತೇನೆ ತಾವು, ಯಾವ ಯಾವ ಮೂಲಗಳು ಆದಾಯ ತರುತ್ತವೆ ಎನ್ನುವುದನ್ನು ತೋರಿಸುತ್ತೇನೆ ಮತ್ತು ನಿರ್ದಿಷ್ಟವಾದ ಕಾಲದಲ್ಲಿ ಯೋಜನೆಗಳನ್ನು ಪೂರೈಸುತ್ತೇನೆಂಬ ಮಾತುಗಳನ್ನು ಹೇಳಿದ್ದಿರಿ

ಶ್ರೀ ಡಿ. ದೇವರಾಜ ಅರಸ್.—ಈಗಲೂ ಹೇಳುತ್ತಿದ್ದೇನೆ ಕೇಳಿ. ಈಗ ಮಂತ್ರಿಗಳು ಹೇಳಿದಂತೆ 1962ರಿಂದ 1972ರವರೆಗೆ 480 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವ ಲೆಕ್ಕ ಇದೆ. ಆದರೆ ಇತ್ತೀಚಿನ 4 ವರ್ಷಗಳಲ್ಲಿ 227 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಮತ್ತು ನಮಗೆ ಇನ್ನೊಂದು ವರ್ಷ ಕಾಲಾವಕಾಶ ಇದೆ. ಮತ್ತೆ ಚುನಾವಣೆಯಾದ ಮೇಲೂ

ನಮ್ಮ ಪಕ್ಷವೇ ಅಧಿಕಾರಕ್ಕೆ ಬರುತ್ತದೆ; ಅಂದರೆ ಇನ್ನೂ 5 ವರ್ಷ ನಾವು ಇರುತ್ತೇವೆ, ಆದರೆ ನಾನು ಇರುತ್ತೇನೆಂದು ಹೇಳುವುದಿಲ್ಲ. ನಾನು ಹಿಂದೆಯೇ ಹೇಳಿರುವಂತೆ ಈ ಯೋಜನೆಗಳು ಪೂರ್ಣಗೊಳ್ಳಬೇಕಾದರೆ ಕೊನೆಪಕ್ಷ 10 ವರ್ಷಗಳಾದರೂ ಬೇಕು. ಆದಕಾರಣ: ಒಟ್ಟು 10 ವರ್ಷ ಕಾಲ ನಾವು ಇರುವುದರಿಂದ ಅಷ್ಟರೊಳಗೆ ನಾವು ಆ ಯೋಜನೆಗಳನ್ನೆಲ್ಲ ಪೂರ್ಣಗೊಳಿಸುತ್ತೇವೆಂಬ ನಂಬಿಕೆ ನನಗೆ ಇದೆ ಇದನ್ನು ಹಿಂದೆಯೂ ಹೇಳಿದ್ದೆ ಮತ್ತು ಈಗಲೂ ಹೇಳುತ್ತಿದ್ದೇನೆ. ಈಗ ಒಂದೊಂದು ಮೇಜರ್ ಮತ್ತು ಮೀಡಿಯಂ ಇರಿಗೇಶನ್ ವರ್ಕ್‌ಗೂ ಕನಿಷ್ಠಪಕ್ಷ 45 ಕೋಟಿ ರೂಪಾಯಿಗಳನ್ನು ಒದಗಿಸುತ್ತಿದ್ದೇವೆ, ಮುಂದಿನ ವರ್ಷ 55 ರಿಂದ 60 ಕೋಟಿ ರೂಪಾಯಿಗಳವರೆಗೆ ಒದಗಿಸುತ್ತೇವೆ. ಮತ್ತೆ ಇನ್ನೆರಡು ವರ್ಷ ಕಳೆದರೆ 100 ಕೋಟಿ ರೂಪಾಯಿಗಳವರೆಗೆ ಒದಗಿಸಬಲ್ಲೆವು I may be able to provide only for major and medium irrigation in that way. In another 5–6 years we are bound to complete if not in entirety, 75 percent of the work of these projects. ಅದಕ್ಕೆ ಒಂದು ಹಿನ್ನೆಲೆ ಇದೆ. ಯಾವ ಒಂದು ದಾಟಿಯಲ್ಲಿ ಸ್ಟೇಟ್ ಎಕಾನಮಿ ಆಗಲಿ, ನಮ್ಮ ಟ್ಯಾಕ್ಸ್ ಟೆಂಪೋ ಆಗಲಿ, ಕಲೆಕ್ಷನ್ ಡ್ರೈವ್ ಆಗಲಿ, ಇರಿಗೇಶನ್‌ಗೆ ಸಂಬಂಧಪಟ್ಟಂತೆ ಹಾಕಿರುವ ವಾಟರ್ ರೇಟಾಗಲಿ, ಬೆಟರ್‌ಮೆಂಟ್ ಟ್ಯಾಕ್ಸ್ ಆಗಲಿ, ಕೊಟ್ಟ ಸಾಲವಾಗಲಿ, ಯಾವುದನ್ನು ಕೇಳಬೇಕಾಗಿಲ್ಲ, ಯಾವ ಟ್ಯಾಕ್ಸನ್ನು ಹಾಕಬೇಕಾಗಿಲ್ಲ ಎಂದುಕೊಂಡು ಟ್ಯಾಕ್ಸ್ ಹಾಕುವುದಿಲ್ಲ ಕೊಟ್ಟ ಸಾಲವನ್ನು ವಾಪಸ್ಸು ಕೊಡಬೇಡಿ ಎಂದರೆ ಓಟು ಸಿಗುತ್ತದೋ ಬಿಡುತ್ತದೋ ಎಂಬ ಪ್ರಶ್ನೆ ನನಗೆ ಗೊತ್ತಿದೆ. ಕೆಲವರು ಓಟು ಕೊಡುತ್ತಾರೆ ನಿಜ. ಆದರೆ ಕಂದಾಯ ಕೊಡದೆ ಸುಮ್ಮನಿರುವವರು ನಿಮಗೆ ಕೊಡಬಹುದು. ಒಂದೊಂದು ಸಾರಿ ಯಾರು ಯಾರಿಗೆ ಕೊಡುತ್ತಾರೆಂಬ ನಂಬಿಕೆ ಇರುವುದಿಲ್ಲ. ಕೆಲವರಂತು ಯಾರಿಗೂ ಓಟು ಕೊಡುವುದಿಲ್ಲ. ಇದೆಲ್ಲ ಭ್ರಾಂತಿ ಹಚ್ಚಿಕೊಂಡು ಏನೂ ಮಾಡುವುದು ಬೇಡ ಎಂದು ಸುಮ್ಮನೆ ಇದ್ದು ಬಿಟ್ಟರೆ ಸರ್ಕಾರ ಚೆನ್ನಾಗಿ ಕೆಲಸ ಮಾಡುವುದಿಲ್ಲವೆಂದು ಜನ ತಿಳಿದುಕೊಂಡಾರು. ಇನ್ನು ಹಣವು ಇಲ್ಲ, ಖರ್ಚು ಇಲ್ಲ, ಕಂದಾಯವು ಇಲ್ಲ, ಡೆವಲಪ್‌ಮೆಂಟು ಇಲ್ಲ—ಈ ತರಹ ಸರ್ಕಾರವನ್ನು ನಡೆಸುವುದಕ್ಕೆ ನಾನು ತಯಾರಿಲ್ಲ. I want to draw the maximum resources from the people who are capable of giving. ಒಂದು ಕಡೆ 20–30 ಕೋಟಿ ರೂಪಾಯಿ ಖರ್ಚು ಮಾಡಿ ಇರಿಗೇಶನ್ ಮಾಡಿದರೆ ಅದಕ್ಕೆ ಜನತೆ ಶೇಕಡ ಅರ್ಧದಷ್ಟನ್ನು ಕೊಡಬಾರದೆಂದರೆ ಡೆವಲಪ್‌ಮೆಂಟ್ ಹೇಗಾಗುತ್ತದೆ? ಕಂದಾಯ ಹೆಚ್ಚಿಸಿದರು, ವಾಟರ್ ರೇಟ್ ಹೆಚ್ಚಿಸಿದರು ಎಂದು ಹೇಳುತ್ತೀರಿ, ಆದರೆ ಮಾನ್ಯ ಕೃಷ್ಣಪ್ಪನವರು 1958ರಲ್ಲಿ ಇರಲಿಲ್ಲ, ಆಗಲೇ ವಾಟರ್ ರೇಟ್ ಆಕ್ಟ್ ಆಗಿದೆ. I will ask the Secretary to pass on that information to you. You can go through that Betterment Levy Act. It took its birth in 1958. Mr. Channabasappa was then the Minister or Mr. Veeranna Gowda. ಅದು 1958ರಿಂದ ಹಾಗೆ ಇದ್ದು ಈಗ ನಮ್ಮ ನಿಮ್ಮ ಕಾಲದಲ್ಲಿ ಅದರೆ 1974ರಲ್ಲಿ ಫೈನಲೈಸ್ ಮಾಡಿ ಈಗ ಹಣವನ್ನು ವಸೂಲುಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇಷ್ಟು ವೇಳೆಗೆ ಎಷ್ಟು ಕೋಟಿ ರೂಪಾಯಿ ಹೋಯಿತು ಯೋಚನೆ ಮಾಡಿ.

ಈಗ ಏನಾದರೂ ಆಗಲಿ ಅದನ್ನು ಸಡಿಲಮಾಡಿಕೊಂಡು ಬಿಟ್ಟುಕೊಂಡು ಬಂದು ಇಮ್ಮಿಡಿಯಟ್ ಆಗಿ ವೋಟು ಸಿಕ್ಕುತ್ತದೆ ಎನ್ನುವ ಭ್ರಾಂತಿಯಿಂದ ಟ್ಯಾಕ್ಸ್ ವಸೂಲು ಮಾಡಬೇಡಿ, ಟ್ಯಾಕ್ಸ್ ಹಾಕಬೇಡಿ ಎಂದರೆ ರಿಸೋರ್ಸಸ್ ಎಲ್ಲಿರುತ್ತದೆ? ಪುನಃ ಹಿಂದೆಕ್ಕೆ ಹೋದರೆ ಈ ಯೋಜನೆಗಳು 5 ವರ್ಷಗಳಾದರೂ ಆಗುವುದಿಲ್ಲ, 10 ವರ್ಷವಾದರೂ ಆಗುವುದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ರೈತರ ಕಷ್ಟಗಳ ಬಗ್ಗೆ ನಿಮಗೆ ಪ್ರಜ್ಞೆ ಇಲ್ಲವೇ ಎಂಬುದು ನನ್ನ ವಾದ.

ಶ್ರೀ ಡಿ. ದೇವರಾಜ ಅರಸ್.—ನನಗಿರುವ ಪ್ರಜ್ಞೆ ಈ ದೇಶದಲ್ಲಿ ಯಾರಿಗೂ ಇಲ್ಲ. ನಿಮ್ಮ ನೋಲ್ಪಟ್ಟವರಿಗೂ ಇಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—4 ವರ್ಷಗಳ ಹಿಂದ ನಿಮಗೆ ವೋಟು ಕೊಟ್ಟವರು ಈಗಲೂ ನಿಮ್ಮ ಬೆನ್ನು ಹಿಂದೆ ಇದ್ದಾರೆ ಎಂದು ತಿಳಿದುಕೊಳ್ಳಬೇಡಿ. ಹಿಂದೆ ನಿಮಗೆ ಓಟು ಕೊಟ್ಟು ಈಗ ಪಶ್ಚಾತ್ತಾಪ ಪಡುತ್ತಿದ್ದಾರೆ. ನಿಮಗೆ ವೋಟು ಕೊಟ್ಟು ಮಣ್ಣು ತಿಂದೆವು ಎಂದು ಹೇಳುತ್ತಿದ್ದಾರೆ. ಮತ್ತೆ ನೀವು ಗೆದ್ದು ಬರುತ್ತೀವೆ ಎಂದು ತಿಳಿದುಕೊಳ್ಳಬೇಡಿ.

ಶ್ರೀ ಡಿ. ದೇವರಾಜ ಅರಸ್.—ಆ ವರ್ಗ ಯಾರು ಎಂಬುದು ನನಗೆ ಗೊತ್ತು. ಅವರು ನಿಮ್ಮ ಸ್ನೇಹಿತರು. ನಿಮ್ಮ ಬಂಧುಗಳು. ಒಂದು ವೇಳೆ ಅವರು ಈಗ ಪಶ್ಚಾತ್ತಾಪ ಪಟ್ಟು ಅಕಸ್ಮಾತ್ ನಮಗೆ ಬೆಂಬಲ ಕೊಡದಿದ್ದರೆ ನೀವು ಬರುತ್ತೀರಾ ? ಸವಾಲು ಮಾಡುವುದಕ್ಕೆ ಹೋಗಬೇಡಿ.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಪೋಲೀಸ್ ಬಗ್ಗೆ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಮತ್ತೆ ಕೆಲವು ಸಲಹೆಗಳನ್ನೂ ಮಾಡಿದ್ದಾರೆ. ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾದ್ದು ಅಗತ್ಯ. ಶ್ರೀಮಾನ್ ಎಚ್. ಕೃಷ್ಣಪ್ಪನವರು ಮಾತನಾಡುತ್ತಾ ಟೀಕೆ ಮತ್ತು ಸಲಹೆ ಎಲ್ಲವೂ ಮಾಡಿದ್ದಾರೆ. ಹೆಚ್ಚಿಗೆ ಮಾತನಾಡಿರುವುದು ಪೋಲೀಸ್ ಇಲಾಖೆಯ ಮೇಲೆ. ಪೋಲೀಸಿನವರನ್ನು ಕಂಡರೆ ಎಲ್ಲರಿಗೂ ಆಶೆ. ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಸಾಧಾರಣವಾದ ಟೀಕೆ ಏನೆಂದರೆ ಕೆಲಸಕಾರ್ಯಗಳು ಜಿಲ್ಲಾ ಮಟ್ಟದಲ್ಲಿ ಸರಿಯಾಗಿ ನಡೆಯುತ್ತಿಲ್ಲ, ತುಂಬಾ ನಿಧಾನವಾಗುತ್ತಿದೆ; ಎನ್ನತಕ್ಕ ವಿಷಯಗಳನ್ನೂ ಟೀಕೆ ಮಾಡಿದ್ದಾರೆ. ಸರ್ವೀಸ್ ಬಗ್ಗೆ ಕೆಲವರು ಪ್ರಸ್ತಾಪ ಮಾಡಿದ್ದಾರೆ ಐ. ಎ. ಎಸ್. ಲಿಸ್ಟಿನಲ್ಲಿ ನಮ್ಮವರು ಯಾರೂ ಇಲ್ಲ, ಎಲ್ಲಾ ಹೊರಗಿನವರೇ ಬರುತ್ತಿದ್ದಾರೆ ಎನ್ನುವ ಒಂದು ವಾದ ಇದೆ. ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಬಗ್ಗೆ ಸಹ ಎಲ್ಲಾ ವಿಚಾರಗಳನ್ನೂ ಹೇಳಿದ್ದಾರೆ. ಆದರೆ ಅದನ್ನೂ ಕೂಡ ಅವರು ನಾವು ಅವರಿಗೆ ಕೊಟ್ಟಿರತಕ್ಕ ಪುಸ್ತಕಗಳನ್ನು ಓದಿದ್ದರೆ ಅನೇಕ ವಿಷಯಗಳನ್ನು ಟೀಕೆ ಮಾಡುತ್ತಾ ಇರಲಿಲ್ಲ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಪುಸ್ತಕದಲ್ಲಿರತಕ್ಕ ಶಿರೋನಾಮೆಗಳನ್ನು ಹೇಳುತ್ತೇನೆ.

ಚಾಪ್ಟರ್ 1. Measure to improve administrative efficiency. ಯಾವುದೇ ಒಂದು ಅಡ್ಮಿನಿಸ್ಟ್ರೇಷನ್ ಎಂದರೆ ಅದಕ್ಕೆ ಒಂದು ಲಕ್ಷಣ ಇರಬೇಕಾದರೆ ನಾನಾ ಕಾರ್ಯಕ್ರಮಗಳು ಸರಿಯಾಗಿ ನಡೆಯಬೇಕು. ಮೊದಲು ಆಫೀಸಿಗೆ ಹೋದರೆ ಅಲ್ಲಿ ಸ್ಥಳ ಚೆನ್ನಾಗಿರಬೇಕು. ಆಫೀಸಿನಲ್ಲಿ ಪಂಕ್ಚುಯಲಟಿ, ಡಿಸಿಪ್ಲಿನ್, ಮತ್ತು ಕ್ಲೀನ್ಲೀನೆಸ್ ಇರಬೇಕು. ಆಫೀಸಿನಲ್ಲಿ ಅಧಿಕಾರಿಗಳು ದೊಡ್ಡವರು ಆಗಲೀ ಚಿಕ್ಕವರಾಗಲೀ ಆಫೀಸಿಗೆ ಬರತಕ್ಕ ಜನಗಳನ್ನು ವಿನಯದಿಂದ ವಿಶ್ವಾಸದಿಂದ ಮಾತನಾಡಿಸಬೇಕು. ಅಲ್ಲಿ ಕೆಲಸ ಯಾವ ಪ್ರಮಾಣದಲ್ಲಿ ಆಗುತ್ತದೆ ಎನ್ನುವುದು ಎರಡನೇ ಮಾತು. ಆದರೆ ಜನತೆ ಸರ್ಕಾರದಲ್ಲಿ ಏನು ನಿರೀಕ್ಷಣೆ ಮಾಡುತ್ತಾರೆ ಅದಕ್ಕೆ ಲೋಪ ಬರುತ್ತದೆ ಎಂದರೆ ಅದನ್ನು ಟಾಲರೇಟ್ ಮಾಡುವುದಕ್ಕೆ ಆಗುವುದಿಲ್ಲ. ತುರ್ತು ಪರಿಸ್ಥಿತಿ ಬಂದಮೇಲೆ, ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡಿದ ಮೇಲೆ ಇದರ ಕಡೆ ನಾವು ಹೆಚ್ಚು ಗಮನ ಕೊಟ್ಟಿದ್ದೇವೆ. ಶ್ರೀಮಾನ್ ಬಂಗಾರಪ್ಪನವರು ಮಾತನಾಡುತ್ತಾ ಈ ತುರ್ತು ಪರಿಸ್ಥಿತಿ ಬಂದು ಒಂದು ವರ್ಷವಾಗಿರುವುದರಿಂದ ಇದು ಒಂದು ತರಹ ಜಡ್ಡು ಬದ್ಧವಾಗೆ ಆಗಿದೆಂದ ಹೇಳಿದರು. ಆದರೆ ನಾವು ಮಾತ್ರ ಅಧಿಕಾರಿಗಳಲ್ಲಿ ಎಲ್ಲೇ ತಪ್ಪು ಕಂಡರೂ ಕೂಡ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದನ್ನು ಕೈ ಬಿಟ್ಟಿಲ್ಲ. ಅದು ಅವ್ಯಾಹತವಾಗಿ ನಡೆದುಕೊಂಡು ಬರುತ್ತಿದೆ.

ಮಾನ್ಯ ಸದಸ್ಯರು ಇನ್ನೂ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪಂಕ್ಚುಯಾಲಟಿ ಡಿಸಿಪ್ಲಿನ್ ಕ್ಲೀನ್ಲಿನೆಸ್ ಕಡಿಮೆಯಾಗುತ್ತಿದೆ ಎಂದು ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಿಜ, ಇದು ಎಷ್ಟೇ ನಾವು ಎಚ್ಚರಿಕೆಯನ್ನು ನೀಡಿದರೂ ಕೂಡ ಎಲ್ಲಾ ಸರಿ ಹೋಗಬೇಕಾದರೆ ಕೆಲವು ಕಾಲ ಬೇಕಾಗುತ್ತದೆ. ಎಲ್ಲಾ ಒಂದೇ ಸಾರಿ ಸರಿ ಮಾಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಹ್ಯೂಮನ್ ನೇಚರ್ ವಾಟ್ ಇಟ್ ಈಜ್ ಕೆಲವು ವರ್ಷಗಳ ಕಾಲ ಇದೇ ರೀತಿ ನಡೆದರೆ ಎಲ್ಲವೂ ಸರಿ ಹೋಗುತ್ತದೆ. ಇದರಲ್ಲಿ ಸದಾ ಜಾಗೃತಿಯನ್ನು ಇಟ್ಟುಕೊಳ್ಳುವ ವ್ಯವಸ್ಥೆ ಮಾಡಿದ್ದೇವೆ. ಸ್ಪೀಡಿ ಡಿಸ್‌ಪೋಜಲ್ ಆಫ್ ಫೈಲ್ಸ್ ಇದಕ್ಕೂ ಕೂಡ ನಾವು ವ್ಯವಸ್ಥೆ ಮಾಡಿದ್ದೇವೆ.

"In order to ensure prompt disposal of Government business, instructions have been issued that receipts files should be attended to at all levels within five days and proceedings of the meetings should be drafted, approved and issued within 24 hours of the holding of the meetings."

These are some of the measures adopted to see that the efficiency and the speed of work are increased.

ಆ ಮೇಲೆ ಕೆಲವು ಡೀಸೆಂಟ್ರಲೈಜೇಷನ್ ಆಫ್ ಪವರ್ಸ್ ಕೊಟ್ಟು ಆಡಳಿತದಲ್ಲಿ ದಕ್ಷತೆ ಹೆಚ್ಚಿಸಿ ವಿಳಂಬ ತಪ್ಪಿಸಲು ಕೆಲವು ಇಲಾಖೆಗಳಲ್ಲಿ ಅಂಡರ್‌ಸೆಕ್ರೆಟರಿಗಳಿಗೆ ಅಧಿಕಾರವನ್ನು ಹೆಚ್ಚಿಸಿದೆ. ಅಂಡರ್‌ಸೆಕ್ರೆಟರಿ ಲೆವಲ್‌ನಲ್ಲಿಯೇ ನೋಟಿಂಗ್ ಹಾಕಬೇಕು ಎಂದು ಮಾಡಿದ್ದೇವೆ. ಇದನ್ನು ಡೆಸ್ಕ್ ಆಫೀಸ್ ಸಿಸ್ಟಂ ಎಂದು ಕರೆಯುತ್ತಾರೆ. ಕೆಲವು ಡಿಪಾರ್ಟ್‌ಮೆಂಟಿನಲ್ಲಿ ಇದರ ಅಂಡರ್‌ಸೆಕ್ರೆಟರಿ ಲೆವಲ್‌ನಲ್ಲಿ ಆಗುವುದಿಲ್ಲ. ಕೆಳಗಡೆಯಿಂದಲೇ ನೋಟ್ ಬರಬೇಕು ಎಂದು ಹೇಳುತ್ತಾರೆ. ಎಕ್ಸ್‌ಪರಿಮೆಂಟ್ ದೃಷ್ಟಿಯಿಂದ ಇದನ್ನು ಈಗ ಕೆಲವು ಡಿಪಾರ್ಟ್‌ಮೆಂಟಿನಲ್ಲಿ ಎನ್‌ಫೋರ್ಸ್ ಮಾಡುತ್ತಿದ್ದೇವೆ. ತಾಲ್ಲೂಕು ಮಟ್ಟದಿಂದ ಸೆಕ್ರೆಟೇರಿಯಟ್ ಹಂತದವರೆಗೆ ಎಲ್ಲಾ ಮಟ್ಟದಲ್ಲಿಯೂ ಸಾರ್ವಜನಿಕರ ಗ್ರಿವೆನ್ಸಸ್ ಕೇಳಲು ವಿಶೇಷ ವಿಭಾಗವನ್ನು ರಚಿಸಿದೆ. ಈ ಬಗ್ಗೆ ಡಿವಿಜನಲ್ ಲೆವೆಲ್, ಡಿಸ್ಟ್ರಿಕ್ಟ್ ಲೆವೆಲ್ ಹಾಗೂ ತಾಲ್ಲೂಕು ಲೆವೆಲ್‌ಗಳಲ್ಲಿ ಪಬ್ಲಿಕ್ ಗ್ರಿವೆನ್ಸಸ್ ಕೇಳಲು ವಿಶೇಷ ವಿಭಾಗ ಇದೆ. If they have not done at the taluk levels, I would very much like the hon'ble. members to bring it to the notice of the Government. When he order is there, they must obey. If there is any lapse we shall rectify it.

Between 3 and 4 P.M. all the Secretaries must be available to meet the public and at that particular hour, there should be no meeting in any Minister's chamber. The Ministers have been requested not to all the Secretaries at that particular hour because they must be available to the public at that particular hour.

ನಮ್ಮಲ್ಲಿ ಕೆಲವರು ಸೆಕ್ರೆಟರಿಗಳ ಹತ್ತಿರ ಹೋಗುವುದಿಲ್ಲ. ಎಲ್ಲಾ ಮಿನಿಸ್ಟರುಗಳ ಹತ್ತಿರ ಬಂದುಬಿಡುತ್ತಾರೆ. May be, it was so because the Secretaries could not make themselves available. For that we have been insisting that on every working day one hour must be given to the public by the Secretaries.

6-30 P.M.

ಶ್ರೀ ಎಸ್. ಬಂಗಾರಪ್ಪ.—ಮೆಂಬರ್ಸ್‌ಗೂ ಅದನ್ನು ಅನ್ವಯ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—3 ರಿಂದ 4 ಗಂಟೆವರೆಗೆ ಪಬ್ಲಿಕ್‌ಗೋಸ್ಕರ ಅಧಿಕಾರಿಗಳು ಇರಲೇಬೇಕು. Supposing a member wants to go at 12 O' clock, he may go by appointment. ಮೊದಲು ಪಬ್ಲಿಕ್‌ಗೆ ಇವರು ಸಿಕ್ಕುತ್ತಾ ಇರಲಿಲ್ಲ ಎನ್ನುವುದು ಇತ್ತು. ಆ ದೃಷ್ಟಿಯಿಂದ ಈ ರೀತಿ ಮಾಡಿದೆ. ನಿಮಗೆ ಅಲ್ಲ.

ಇನ್‌ಸ್ಪೆಕ್ಷನ್ ಇಂಪ್ರೂವ್ ಆಗುತ್ತಾ ಇದೆ. These are all steps which have been taking towards improving the efficiency in administration at the Secretariat, Divisional District and Taluk levels. ನಿಜವಾಗಿ ನಾನು ಇಷ್ಟೆಲ್ಲಾ ಹೇಳುತ್ತೇನೆ. ತಾಲ್ಲೂಕು ಮಟ್ಟದಲ್ಲಿ ನಿಮ್ಮ ನಿಮ್ಮ ಅನುಭವ ನಿಮಗೆ ಇದೆ, ಆ ಅನುಭವದಿಂದ ಅನೇಕ ಕಹಿ ವಿಷಯಗಳು ನಿಮ್ಮ ಗಮನಕ್ಕೆ ಬಂದಿರುತ್ತವೆ. ಅದನ್ನು ನೀವು

ಹೇಳುತ್ತೀರಿ. ನಾನು ನೀವು ಹೇಳುವುದೆಲ್ಲಾ ಸರಿಯಿಲ್ಲ, ನಾನು ಹೇಳುವುದೇ ಸರಿ ಎಂದು ಮಾತನಾಡುತ್ತೇನೆ ಎಂದು ತಾವು ತಿಳಿಯಬಾರದು. I have worked as an M L.A. and I know that at taluk level so many things do not happen in the way we would like them to happen. I am aware of it. ತಮ್ಮಲ್ಲಿ ಏನು ವಿಷಯ ಹೇಳುತ್ತೇನೆ ಎನ್ನುವುದನ್ನು ತಾವು ಗಮನಿಸಬೇಕು. ಯಾವುದೇ ಸರ್ಕಾರದಲ್ಲಿ ನಾವು ಮಾಡಿದಂಥ ಕಾನೂನಿನಂತೆ ಎಲ್ಲಾ ಅಧಿಕಾರಿಗಳು ಕೈಕಟ್ಟಿಕೊಂಡು ಅದೇರೀತಿ ಎಲ್ಲಾ ಮಟ್ಟದಲ್ಲೂ ನಡೆಯುತ್ತಾರೆ ಎಂದು ನಾನಂತೂ ತಿಳಿದಿಲ್ಲ. ಪ್ರಜಾಪ್ರಭುತ್ವವನ್ನು ನಾವು ತಂದಿರುವುದೇ ಇದಕ್ಕೋಸ್ಕರ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪ್ರತಿನಿಧಿಗಳು ಅಥವಾ ಮುಖಂಡರು ಸದಾಕಾಲದಲ್ಲು ಜಾಗರೂಕರಾಗಿರಲೇಬೇಕು. ಆ ಒಂದು ಜಾಗರೂಕತೆಯ ಸಂಕೇತವಾಗಿ ತಾವು ಲೋಪದೋಷಗಳನ್ನು ಇಲ್ಲಿ ಎತ್ತಿ ತೋರಿಸುತ್ತಿದ್ದೀರಿ. ನೀವು ಎತ್ತಿ ತೋರಿಸಿದಂಥ ಲೋಪದೋಷಗಳನ್ನು ನೋಡುವಂಥ ಜವಾಬ್ದಾರಿ ನಮ್ಮದು ಇದೆ. ಆಡಳಿತದಲ್ಲಿ ಪೂರಾ ಕೆಟ್ಟು ಹೋಗಿದೆ ಎಂದು ಹೇಳಬಹುದು. ಆದರೆ ಟೆಂಪೋ ಆಫ್ ಈ ವರ್ಕ್ ಇಷ್ಟೊಂದು ಜಾಸ್ತಿಯಾದರೆ ಲ್ಯಾಪ್ಸ್ ಆಗುವುದನ್ನು ಲೋಪದೋಷಗಳನ್ನು ಕಂಡೇ ಕಾಣುತ್ತೇವೆ. ಇದನ್ನು ತಡೆಯುವುದಕ್ಕೆ ಪ್ರಯತ್ನ ಮಾಡಬೇಕು. ನೀವು ಆಗಿಂದಾಗ್ಗೆ ತಿಳಿಸಬೇಕು. ತಾವು ಸಾಗುವಳಿ ಚೀಟಿ ನಿಧಾನವಾಗಿದೆಯೆಂದು ಹೇಳಿದಿರಿ. ಸಾಗುವಳಿ ಚೀಟಿ ಕೊಡಬೇಕಾದರೆ ಲ್ಯಾಂಡ್ ಗ್ರಾಂಟ್ ಕಮಿಟಿ ಎಂದು ಮಾಡಿದ್ದೇವೆ. ಅದು ಅದಮೇಲೆ ಕೊಡಬೇಕು. ಪ್ರತ್ಯೇಕವಾಗಿ ನಿಮ್ಮ ತಾಲ್ಲೂಕ್‌ನಲ್ಲಿ ಏನಾಗಿದೆಯೋ ನನಗೆ ಗೊತ್ತಿಲ್ಲ. I am willing to find out why there is delay. In some cases, the delay is not due to the Tahsildar or the office itself. It may be due to the committee. When the committee cannot grant.........

ಶ್ರೀ ಕೋಣದೂರು ಲಿಂಗಪ್ಪ.—ತೀರ್ಥಹಳ್ಳಿಯಲ್ಲಿ ಕೊಟ್ಟಿಲ್ಲ.

SRI D. DEVARAJ URS.—If you say that in Theerthahalli they have not been able to grant, I will find out why it is so and if there is any lapse on the part of the Tahsildar, I will try to rectify.

ಶ್ರೀ ಎಸ್. ಬಂಗಾರಪ್ಪ.—ಫಾರೆಸ್ಟ್ ಸ್ಟ್ಯಾಂಡಿಂಗ್ ಟೆಂಬರನ್ನು ಪತ್ತೆ ಹಚ್ಚಲಿಕ್ಕೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಕಳಿಸುತ್ತಾರೆ. ಅವರು ಒಪಿನಿಯನ್ ಕೊಡುವುದಿಲ್ಲ. ಬಹಳ ದಿವಸ ಪೆಂಡಿಂಗ್ ಇಟ್ಟುಕೊಂಡಿರುತ್ತಾರೆ.........

SRI D DEVARAJ URS.—We have to pay serious attention and see how this problem is to be solved. Survey work has increased so enormously That is another difficulty. ಇದೆಲ್ಲಾ ಡಿಫಿಕಲ್ಟೀಸ್, ಜೆನಿಯುನ್ ಡಿಫಿಕಲ್ಟೀಸ್ ಇವೆ. ರೆವಿನ್ಯೂ ಅಡ್ಮಿನಿಸ್ಟ್ರೇಷನ್‌ನಲ್ಲಿ ಆಳವಾಗಿ ಅಭ್ಯಾಸ ಮಾಡಿದರೆ ಈ ಡಿಫಿಕಲ್ಟೀಸ್ ಗೊತ್ತಾಗುತ್ತವೆ. ಟೆಂಪೋ ಆಫ್ ವರ್ಕ್ ವಿಪರೀತ ಜಾಸ್ತಿಯಾಗಿದೆ. Even a Shanbouge does not do survey work but here the Special Survey Officer was the only man who knew something about survey work ; the Revenve Inspector knew very little about it.

ಇನ್ನು ನಮ್ಮ ರೆಕ್ರೂಟ್‌ಮೆಂಟ್ ಪಾಲಿಸಿ ಬಹಳ ಮುಖ್ಯವಾದ ವಿಚಾರ. ರೆಕ್ರೂಟ್‌ಮೆಂಟ್ ಪಾಲಿಸಿಯಿಂದ ಆದಂಥ ತೊಂದರೆಗಳು ಏನು ಎನ್ನುವುದನ್ನು.......

ಶ್ರೀ ಎಂ. ಎಸ್. ಕೃಷ್ಣನ್.—ತೊಂದರೆಗಳೂ ಆಗಿವೆ, ಅನ್ಯಾಯಗಳೂ ಆಗಿವೆ.

ಶ್ರೀ ಡಿ. ದೇವರಾಜ್ ಅರಸ್.—ಒಂದು ರೀತಿ ಅನ್ಯಾಯ ಎಂದರೂ ತಪ್ಪಿಲ್ಲ. ಯಾವ ಒಂದು ಸೆಕ್ಷನ್ ಆಫ್ ಪೀಪಲ್‌ಗೆ ಕಾನ್‌ಸ್ಟಿಟ್ಯೂಷನ್ ಪ್ರಕಾರ ಹುದ್ದೆಗಳು ಸಲ್ಲಬೇಕೋ ಅದಕ್ಕೆ ಧಕ್ಕೆ ಬಂದಿದೆ. ಕ್ಲಾಸ್-1 ಅಂಡ 2 ಬಗ್ಗೆ ಹೇಳಿದಿರಿ. ಇದರಲ್ಲಿ ಎರಡು ಮೆಥೆಡ್ಸ್ ಆಫ್ ಸೆಲೆಕ್ಷನ್ ಇದೆ. ಪಿ.ಎಸ್.ಸಿ. ಎಕ್ಸಾಮಿನೇಷನ್ ಒಂದು. ಇಂಟರ್‌ವ್ಯೂ ಒಂದು. ಎಕ್ಸಾಮಿನೇಷನಿಂದ ಕ್ಲಾಸ್-1

ಅಂಡ್ 2 1972-75ನೇ ಇಸವಿವರೆಗೆ 320 ಜನ ಸೆಲೆಕ್ಟ್ ಆಗಿದ್ದಾರೆ. ಅದಕ್ಕಿಂತ ಹಿಂದೆ ಏನಿತ್ತು ಎನ್ನುವುದನ್ನು ನೋಡೋಣ. ರೆಕ್ರೂಟ್ಸ್ ಕೆ.ಎಫ್.ಎಸ್. ಜೂನಿಯರ್ 22 ಜನ, ನಂಬರ್ ಆಫ್ ಪ್ರಮೋಟೀಸ್ 249 ಜನ ಈ ಲೆಕ್ಕದಿಂದಲೇ ತಮಗೆ ಅರ್ಥವಾಗುತ್ತದೆ. ಇವರಲ್ಲಿ 27 ಜನ ಸೀನಿಯರ್ ಸ್ಕೇಲಿಗೆ ಹೋದರು. ರೆಕ್ರೂಟ್ಸ್ 18 ಇದ್ದವರು 29 ಜನ ಆದರು. ಒಟ್ಟಿನಲ್ಲಿ ಟೋಟಲ್ 278 ಜನ ಇದ್ದರೆ ಅದರಲ್ಲಿ 238 ಜನ ಬರೀ ಪ್ರಮೋಷನ್ ಆಗಿ ಬಂದವರು. ಇನ್ನು 40 ಜನ ಮಾತ್ರ ರೆಕ್ರೂಟ್‌ಮೆಂಟ್ ಆಗಿ ಮುಂದಕ್ಕೆ ಬಂದವರು. ಇದು ಪರಿಸ್ಥಿತಿ. ಉದಾಹರಣೆಗೆ ತಹಸೀಲ್ದಾರ್ ಲೆಕ್ಕ ತೆಗೆದುಕೊಂಡರೆ, 34? ಜನ ತಹಶೀಲ್ದಾರ್ ಇದ್ದರೆ ಪ್ರಮೋಟೀಸ್ ಅದರಲ್ಲಿ 318 ಜನ.

ಶ್ರೀ ಜೆ. ಎಲ್. ಕಟಾಡೆ.— ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಈ ಡಿಪಾರ್ಟ್‌ಮೆಂಟ್‌ನಲ್ಲಿ ಇಷ್ಟು ಪರ್ಸೆಂಟೇಜ್, ರೆಕ್ರೂಟ್‌ಮೆಂಟ್ ತೆಗೆದುಕೊಳ್ಳಬೇಕು ಎಂದು ಇದೆ. ಆದರೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ತೊಂದರೆಯಾಗಿದೆ.

SRI D. DEVARAJ URS.—Up to 1972 this is the position. With these promotees of 300 Tahsildars, how do you expect me to improve the tahsil administration is the question I am asking. Why direct recruitment is adopted? It is not merely to give percentage to X or Y; there is something else besides that. That is one important aspect because social justice has to be done. In the administration all sections must be involved.

MADAM SPEAKER.—in the Chair]

ನಾವು ದಕ್ಷತೆಯನ್ನೂ ಪರಿಗಣಿಸಬೇಕಾಗುತ್ತದೆ. ಅಂದು ದಕ್ಷತೆಯ ಬಗೆಗೆ ನಿಗಾ ಕೊಡದೆ ಸುಮಾರು ಹತ್ತು ವರ್ಷಗಳ ಕಾಲ ನೇಮಕಗಳನ್ನು ಮಾಡಿ, ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಹಾಕಿದ್ದರಿಂದ ಅದರ ಪ್ರತಿಫಲವನ್ನು ಈಗ ನಾವು ಅನುಭವಿಸುತ್ತಿದ್ದೇವೆ. ಅದರೊಂದರ ಮೇಲೆಯೇ ಜವಾಬ್ದಾರಿಯನ್ನು ಹಾಕುತ್ತಿದ್ದೇದೆ ಎಂದು ಮಾನ್ಯ ಸದಸ್ಯರು ತಿಳಿಯಬೇಡಿ, ಆದರೆ, ತಾಲ್ಲೂಕು ಮಟ್ಟದಲ್ಲಿ ಅದಕ್ಷತೆ ಅಥವಾ ದೋಷಗಳಿದ್ದರೆ, ಅದಕ್ಕೆ ಬಹುಮಟ್ಟಿಗೆ ಇದು ಮುಖ್ಯ ಕಾರಣವಾಗಿದೆ. ಆದುದರಿಂದ, direct recruitment is made to give additional efficiency to administration—either as Tahsildar or even as Sub-Division Officer, I think invariably it may be the experience of many members. You feel they are better people or if you point out any efficiency officers it is invariably these promotees who are mosty responsible. What has been done so far as Recruitment is concerned along with the Public Stervice Commission, we have what is called Recruitment Committee at the Departmental level. ಲೋಕಸೇವಾ ಆಯೋಗದವರು 1972 ರಿಂದ 1975ರ ವರೆಗೆ ಸುಮಾರು 2210 ಜನರನ್ನು ಸಂದರ್ಶನ ಮಾಡಿದ್ದಾರೆ. ಇವರಲ್ಲಿ 280 ಜನ ಪರಿಶಿಷ್ಟ ವರ್ಗ ಮತ್ತು ಜಾತಿಗೆ ಸೇರಿದವರು. ಇದರಲ್ಲಿ ಪರಿಶಿಷ್ಟ ವರ್ಗ ಮತ್ತು ಜಾತಿಯವರಿಗೆ 12.6 ಪರ್ಸೆಂಟ್ ಕೊಟ್ಟಂತಾಗುತ್ತದೆ. ಆದರೆ, ಪರಿಶಿಷ್ಟ ವರ್ಗ ಮತ್ತು ಜಾತಿಯವರಿಗೆ ನಿಗದಿ ಮಾಡಿರುವುದು 18 ಪರ್ಸೆಂಟ್. ಇದು ಆಗಿಲ್ಲ. ಬೇಕಾದ ಸಂಖ್ಯೆಯಲ್ಲಿ ಪರಿಶಿಷ್ಟ ವರ್ಗ ಮತ್ತು ಜಾತಿಯ ಅಭ್ಯರ್ಥಿಗಳು ದೊರಕದೇ ಇರುವುದು ಇದಕ್ಕೆ ಮುಖ್ಯ ಕಾರಣವಾಗಿದೆ.

ಇನ್ನು ಇಲಾಖಾ ನೇಮಕಾತಿಗಳ ಸಮಿತಿಯವರು 1-4-72 ರಿಂದ 1-4-75ರ ವರೆಗೆ ಸುಮಾರು 6345 ಜನರನ್ನು ನೇಮಕ ಮಾಡಿಕೊಂಡಿದ್ದಾರೆ. ಮತ್ತು 1-4-75ರಿಂದ ಇಲ್ಲಿಯವರೆಗೆ ಸುಮಾರು 1684 ಜನರನ್ನು ನೇಮಕ ಮಾಡಿಕೊಂಡಿದ್ದಾರೆ. ಅಂದರೆ, ಒಟ್ಟು 8029 ಜನರನ್ನು ನೇಮಕ ಮಾಡಿಕೊಂಡಂತಾಯಿತು. ಇವರಲ್ಲಿ, ಪರಿಶಿಷ್ಟ ವರ್ಗಕ್ಕೆ ಸೇರಿದ 1093 ಅಭ್ಯರ್ಥಿಗಳನ್ನು

ನೇಮಕ ಮಾಡಿಕೊಳ್ಳಲಾಗಿದೆ, ಮತ್ತು ಪರಿಶಿಷ್ಟ ಜಾತಿಗೆ ಸೇರಿದ 66 ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಅಂದರೆ, ಒಟ್ಟು 1159 ಜನ ಪರಿಶಿಷ್ಟ ವರ್ಗ ಮತ್ತು ಜಾತಿಗೆ ಸೇರಿದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡಂತಾಯಿತು. ಅಷ್ಟೇ ಅಲ್ಲದೆ, ಹಿಂದೆ 10-20-30 ಸಾವಿರ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ಇದೇ ಸದನದಲ್ಲಿ ರೆಗ್ಯುಲರೈಜ್ ಮಾಡಿದ್ದು ನನಗೆ ಜ್ಞಾಪಕವಿದೆ. ಅದರಲ್ಲಿ ಹರಿಜನ-ಗಿರಿಜನೇತರ ಅಭ್ಯರ್ಥಿಗಳೂ ಕೆಲವರು ರೆಗ್ಯುಲರೈಸ್ ಆದರು. ಯಾರಿಗೋ ಬೇಕಾದವರು, ಅಥವಾ ಅವರ ಜಾತಿಯವರೋ ಅಥವಾ ಅವರ ನೆಂಟರೋ ಎಂಬ ಅಭಿಮಾನದಿಂದ ಕೆಲವು ಅಭ್ಯರ್ಥಿಗಳನ್ನು ಲೋಕಲ್ ಕ್ಯಾಂಡಿಡೇಟ್ಸ್ ಎಂದು ನೇಮಕ ಮಾಡಿಕೊಂಡು ಬಂದಿದರು. ಅದರ ಬಗ್ಗೆ ಈ ಸಭೆಯಲ್ಲೇ ಚರ್ವಿತಚರ್ವಣವಾಗಿ ಚರ್ಚೆಮಾಡಿ ಅವರನ್ನು ರೆಗ್ಯುಲರೈಸ್ ಮಾಡಿದೆವು. ಈಗ ಯಾವ ಇಲಾಖೆಯಲ್ಲಿ ಯಾರನ್ನೂ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ನೇಮಕ ಮಾಡಿಕೊಳ್ಳುತ್ತಾ ಇಲ್ಲ. 1975ಕ್ಕೆ ಸುಮಾರು 1050 ಪರಿಶಿಷ್ಟ ವರ್ಗ ಮತ್ತು ಜಾತಿಯ ಅಭ್ಯರ್ಥಿಗಳನ್ನು ರೆಗ್ಯುಲರೈಸ್ ಮಾಡಲಾಗಿದೆ.

ಶ್ರೀ ಕೆ. ಪ್ರಭಾಕರ್.—ಯಾವ ಯಾವ ರ್‍ಯಾಂಕ್‌ನಲ್ಲಿ ರೆಗ್ಯುಲರೈಸ್ ಮಾಡಿದ್ದಾರೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ತಿಳಿಸುವರೆ ?

ಶ್ರೀ ಡಿ. ದೇವರಾಜ ಅರಸ್.—ಮೂರನೆಯ ದರ್ಜೆಗೆ ಮಾತ್ರ ರೆಗ್ಯುಲರೈಸ್ ಮಾಡಲಾಗಿದೆ. ಮೊದಲನೆಯ ಮತ್ತು ಎರಡನೆಯ ದರ್ಜೆಗೆ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ನೇಮಕ ಮಾಡಿಕೊಳ್ಳಲು ಬರುವುದಿಲ್ಲ. ಸಾಮಾನ್ಯವಾಗಿ, ಲೋಕಸೇವಾ ಆಯೋಗದಿಂದ ಹರಿಜನ ಗಿರಿಜನರ ರಿಜರ್ವೇಷನ್‌ನ್ನು ಕಡಿಮೆ ಮಾಡುತ್ತಿದ್ದರು Out of 100 who have taken appointment suppose in the general 4 or 5 belonging to SC and ST have come in, we do not reduce that number in the 18% resevel for SC and ST. The previous procedure was out of the reserved posts this number used to be reduced. We have changed it and sa d apart from merit, this 18% should remain.

SRI K. PUTTASWAMY.—That is on account of the decision of Courts.

ಶ್ರೀ ಜೆ. ಎಲ್. ಕಬಾಡೆ.—ಇದು ಹೊಸ ಅಧ್ಯಕ್ಷರು ಬಂದನಂತರ ಆಯಿತು.

ಶ್ರೀ ಡಿ. ದೇವರಾಜ ಅರಸು —ಹೊಸ ಅಧ್ಯಕ್ಷರನ್ನು ನೇಮಕ ಮಾಡಿದವರು ನಾವು.

ಶ್ರೀ ಕೆ. ಎಚ್. ಹನುಮೇಗೌಡ.—ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರಿಗೆ ನೇಮಕಾತಿ ನಿಯಮಗಳಲ್ಲಿ ಕೆಲವು ರಿಯಾಯಿತಿಗಳನ್ನು ಮಾನ್ಯ ಮುಖ್ಯ ಮಂತ್ರಿಗಳು ನೀಡುವುದಕ್ಕೆ ವ್ಯವಸ್ಥೆ ಮಾಡುವರೆ ?

ಶ್ರೀ ಡಿ. ದೇವರಾಜ ಅರಸು.—ಹಿಂದುಳಿದ ವರ್ಗಗಳಿಗೆ ಈಗಾಗಲೇ ರಿಯಾಯಿತಿ ಕೊಟ್ಟಿದೆ. ಪುನಹ ಇವರಿಗೂ ಕೂಡ ರಿಜರ್ವೇಷನ್ ಮಾಡುವುದು ಸ್ವಲ್ಪ ಕಷ್ಟ.

ಶ್ರೀ ಕೆ ಎಚ್. ಹನುಮೇಗೌಡ.—ಹೀಗೆ ಮಾಡಿದರೆ, ಇವರಿಗೆ ತಾರತಮ್ಯ ಮಾಡಿದಂತಾಗಲಿಲ್ಲವೆ ?

ಶ್ರೀ ಡಿ. ದೇವರಾಜ ಅರಸು.—ಹಿಂದೆ ಬಿದ್ದಿರುವವರನ್ನು ಮುಂದಕ್ಕೆ ತರುವಾಗಿ ಸ್ವಲ್ಪ ತಾರತಮ್ಯ ಮಾಡಲೇಬೇಕಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—ಅಂದರೆ, ಹೊಲ ಉಳುಮೆ ಮಾಡುವವರು, ಅದನ್ನೇ ಮಾಡುತ್ತಿರಲಿ ಎಂದು ನಿಮ್ಮ ಅಭಿಪ್ರಾಯವೆ ?

ಶ್ರೀ ಡಿ. ದೇವರಾಜ ಅರಸು.—ಹೊಲ ಉಳುವುದಕ್ಕಿಂತ ಉತ್ತಮವಾದ ಉದ್ಯೋಗ ಮತ್ತೊಂದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರಾದ ಶ್ರೀ ಕೆ ಎಚ್. ಹನುಮೇಗೌಡರು ಹೇಳುವುದರಲ್ಲಿ ಅರ್ಥವಿದೆ. ಈ ವಿಚಾರವನ್ನು ನಾವು ಪದೇ ಪದೇ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಪಟ್ಟಣಗಳಲ್ಲಿ ಹುಟ್ಟಿ, ಬೆಳೆದು ಓದತಕ್ಕ ಮಕ್ಕಳು ಹೆಚ್ಚು ಅಂಕಗಳನ್ನು ಪಡೆಯಲಿಕ್ಕೆ ಸಾಧ್ಯತೆ ಇದೆ. ಆದರೆ, ಹಳ್ಳಿಗಳಲ್ಲಿ ಹುಟ್ಟಿ, ಬೇಸಾಯ ಮಾಡುವುದರ ಜೊತೆಗೆ ವಿದ್ಯೆ ಕಲಿಯುವುದರಿಂದ. ಅವರು ಹೆಚ್ಚು ಅಂಕಗಳನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ ಈ ಒಂದು ದೃಷ್ಟಿಯಿಂದಲಾದರೂ ಸರ್ಕಾರದವರು ಐದು ಪರ್ಸೆಂಟ್ ಮಾರ್ಜಿನ್ ಕೊಡಬೇಕು, ಇಲ್ಲದಿದ್ದರೆ ಹಳ್ಳಿಗಾಡಿನ ಮಕ್ಕಳಿಗೆ ಬಹಳ ಅನ್ಯಾಯವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಸುಮಾರು ಸಾವಿರ ಚಿಲ್ಲರೆ ಲೋಕಲ್ ಕ್ಯಾಂಡಿಡೇಟ್ಸ್ ತೆಗೆದುಕೊಂಡು ಹೊಸ ಪ್ರಯತ್ನ ಮಾಡಿದ್ದೀರಿ ಇದು ಮೆಚ್ಚತಕ್ಕ ವಿಚಾರ, ಸಂತೋಷ. ತುರ್ತು ಪರಿಸ್ಥಿತಿ ಬಂದಮೇಲೆ ಮಾನ್ಯ ಅರ್ಥ ಮಂತ್ರಿಗಳು ಹಣಕಾಸಿನ ತೊಂದರೆಯಿರುವುದರಿಂದ ರೆಕ್ರೂಟ್‌ಮೆಂಟ್ ಮಾಡಬೇಡಿ ಎಂದು ಹೇಳಿದ್ದಾರೆ. ಇಲಾಖೆಗಳಲ್ಲಿ ಪೋಸ್ಟ್‌ಗಳು ಇದ್ದರೂ ಕೂಡ ರೆಕ್ರೂಟ್‌ಮೆಂಟ್‌ಗೆ ಅವಕಾಶ ಕೊಡದೇ ಬಂದಿದ್ದಾರೆ. ಇನ್ನೂ ಹೆಚ್ಚು ಹೆಚ್ಚು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ ದೇವರಾಜ್ ಅರಸ್.—ಯಾರು ಆ ರೀತಿ ಮಾಡಿದ್ದಾರೆಂದು ನನ್ನ ಗಮನಕ್ಕೆ ತಂದರೆ ಸರಿಪಡಿಸುತ್ತೇನೆ. ಅರ್ಥಮಂತ್ರಿಗಳೂ ಹೇಳಿಲ್ಲ ಯಾರು ಹೇಳಿಲ್ಲ.

ಶ್ರೀ ಕೆ ಹೆಚ್. ಹನುಮೇಗೌಡ.—ಸ್ವಾಮಿ ಹಳ್ಳಿಯಿಂದ ಬರತಕ್ಕ ಮಕ್ಕಳು ೬ ತಿಂಗಳು ವರ್ಷ ಹೊಲ ಉತ್ತು ಬರುತ್ತವೆ, ಮೆರಿಟ್ ಬರಲಿ ಎಂದರೆ ಹೇಗೆ? ದಯಮಾಡಿ ತಾವು ಮನಸ್ಸು ಮಾಡಬೇಕು, ಹಳ್ಳಿಯವರಿಗೆ ಬಹಳ ಅನ್ಯಾಯವಾಗಿದೆ.

ಶ್ರೀ ಡಿ. ದೇವರಾಜ್ ಅರಸ್.—ಅದಕ್ಕೋಸ್ಕರವೇ ಹಾಸನದಲ್ಲಿ ಕಾಲೇಜು ಮಾಡಿರುವುದು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಮುಖ್ಯಮಂತ್ರಿಗಳಿಗೆ ಹಳ್ಳಿಗಳಿಂದ ಹಾಗೂ ಗ್ರಾಮಾಂತರಗಳಿಂದ ಬರತಕ್ಕ ಮಕ್ಕಳು ಪಟ್ಟಣಗಳಲ್ಲಿರುವ ಮಕ್ಕಳೊಂದಿಗೆ ಪೈಪೋಟಿ ಮಾಡತಕ್ಕ ವಿಚಾರ ಗೊತ್ತೇ ಇದೆ ಬಹಳ ಹೆಚ್ಚು ಕೊಡಬೇಕು ಎಂದು ಹೇಳುವುದಿಲ್ಲ, ಹಳ್ಳಿಯಿಂದ ಬರತಕ್ಕವರಿಗೆ ತೊಂದರೆಯಾಗುತ್ತದೆ ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡು, ಪಟ್ಟಣಗಳ ಮಕ್ಕಳೊಂದಿಗೆ ಸ್ಪರ್ಧೆ ಮಾಡುವುದಕ್ಕೆ ಆಗದೇ ಇರುವುದರಿಂದ ಸ್ವಲ್ಪ ಕನ್‌ಸೆಷನ್ ಕೊಡಬೇಕು ಪಟ್ಟಣಗಳಲ್ಲಿ ತಂದೆ ಐ ಎ.ಎಸ್., ಮಗ ಐ.ಎ.ಎಸ್. ಮೊಮ್ಮಗ ಐ.ಎಸ್.ಎಸ್. ಆದವರು ಇದ್ದಾರೆ, ಗ್ರಾಮ ನಿವಾಸಿಗಳ ಮಕ್ಕಳು ಸಹ ನೌಕರಿಯಲ್ಲಿ ಇರಬೇಕು ಎನ್ನುವ ಅಪೇಕ್ಷೆ ಇದ್ದರೆ, ಅವರಿಗೂ ಸ್ಥಾನಮಾನಗಳು ಸಿಗಬೇಕು ಎನ್ನುವುದು ಇದ್ದರೆ, ದೀರ್ಘವಾಗಿ ಯೋಚನೆ ಮಾಡಿ ಹೇಳಿ ಮಾಡುತ್ತೇನೆಂದು ಹೇಳಿದರೆ ಸಾಕು. ನಮ್ಮ ವಿಚಾರ ಮಾತ್ರವಲ್ಲ, ಜನಸಾಮಾನ್ಯರ ವಿಚಾರ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಅನ್ಯಾಯವಾಗುತ್ತಿದೆ.

ಶ್ರೀ ಕೆ. ಎಚ್. ಹನುಮೇಗೌಡ.—೮೦ ಪರ್ಸೆಂಟ್ ನಿರ್ಭಾಗ್ಯರು ಇದ್ದಾರೆ ಅವರ ಬಗ್ಗೆ ಏನು ಹೇಳುತ್ತೀರಿ.

ಶ್ರೀ ಡಿ. ದೇವರಾಜ್ ಅರಸ್.—ಈಗ ನಾವು ಮಾಡಿರತಕ್ಕ ಕ್ರಮದಲ್ಲಿ ಅನೇಕ ಹಳ್ಳಿಯ ಮಕ್ಕಳು ಬರುವುದಕ್ಕೆ ಅವಕಾಶ ಇದೆ. You can not make every man an I. A.S Officer

ಶ್ರೀ ಎಸ್. ಬಂಗಾರಪ್ಪ.—ಐ. ಎ. ಎಸ್ ಫ್ಯಾಮಿಲೀಸ್ ಇವೆ. ಹಳ್ಳಿಯವರಿಗೂ ಅಪರ್ಚುನಿಟಿ ಕೊಡಿ.

SRI D. DEVARAJ URS.—The higher the post more efficient men you want, ಏನು ಅಪರ್ಚುನಿಟಿ? ಗೌರ್ನಮೆಂಟ್ ಕೆಲಸ ಸಿಗುವ ಅಪರ್ಚುನಿಟಿ ಕೊಡಿ ಎಂದು ಕೇಳಬಹುದು.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ಕೆಲವು ತಹಸೀಲ್ದಾರ್‌ರವರು ಐ. ಎ. ಎಸ್. ಆಫೀಸರ್ಸ್‌ಗಿಂತ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ, ಐ. ಎ. ಎಸ್. ಪಡೆದಿರುವವರು ಆ ರೀತಿ ಕೆಲಸ ಮಾಡುತ್ತಿಲ್ಲ.

